ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮೇ-2017
ಬೆಲೆ ರೂ. 1



## ಮಹಾಮಾನವತವಾದಿ ಜಗಜ್ಯೋತಿ ಬಸವಣ್ಣ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 27 ಸಂಚಿಕೆ 8
ಮೇ 2017, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜು: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 9958807225
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಐ. ರಾಮ ಮೋಹನ್ ರಾವ್
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ


## ನೇರ ಮಾತು

ನಮ್ಮ ಹೆಮ್ಮೆಯ ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಗಳ ಸಮೃದ್ಧ ಪರಂಪರೆಗೆ ನಾಡಿನ ನೆಲದಲ್ಲಿ ಜನ್ಮ ತಳೆದ ಮಹನೀಯರು ರಾಜಕೀಯ, ತಂತ್ರಜ್ಞಾನ, ವಿಜ್ಞಾನ, ಶಿಕ್ಷಣ, ಕಲೆ, ಸಾಹಿತ್ಯ, ಸಂಗೀತ, ಜಾನಪದ ಹೀಗೆ ಹತ್ತಾರು ಕ್ಷೇತ್ರಗಳಲ್ಲಿ ನೀಡಿದ ಅಪಾರ ಕೊಡುಗೆಯೇ ಕಾರಣ. ಕನ್ನಡ ಹಾಗೂ ಕರ್ನಾಟಕ ಕ್ಕೆ ವಿಶ್ವಮಾನ್ಯತೆ ತಂದುಕೊಟ್ಟ ಮಹಾ ಪುರುಷರ ಸಾಧನೆ ಮತ್ತು ಕೊಡುಗೆಗಳನ್ನು ಸ್ಮರಿಸಿಕೊಳುವ ಹಾಗೂ ಮುಂದಿನ ಪೀಳಿಗೆಗೆ ಪರಿಚಯಿಸುವ ಗುರುತರ ಜವಾಬ್ದಾರಿಯನ್ನು ಹಲವಾರು ಸಂಘ ಸಂಸ್ಥೆಗಳು, ಸರಕಾರಗಳು ಕಾಲಕಾಲಕ್ಕೆ ಮಾಡುತ್ತಲೇ ಬರುತ್ತಿವೆ. ಈ ವರ್ಷದ ವಿಶೇಷವೆಂದರೆ ಕಳೆದ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಿನ ಬಸವ ಸಮಿತಿ ಹಾಗೂ ನವದೆಹಲಿಯ ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನಗಳು ಹಮ್ಮಿಕೊಂಡಿದ್ದ ರಾಷ್ಟ್ರಮಟ್ಟದ ಎರಡು ಕನ್ನಡ ಕಾರ್ಯಕ್ರಮಗಳಾದ ಬಸವ ಜಯಂತಿ ಮತ್ತು ಕೆಂಪೇಗೌಡ ರಾಷ್ಟ್ರೀಯ ಉತ್ಸವ ಗಳಿಗೆ ಸಾಕ್ಷಿಯಾಗುವ ಸುವರ್ಣ ಅವಕಾಶ ಹೊರನಾಡಿನ ಕನ್ನಡಿಗರಾದ ದೊರೆತದ್ದು ಸ್ಮರಣೀಯವಾದ ಅನುಭವ.

ರಾಷ್ಟ್ರ ರಾಜಧಾನಿಯಲ್ಲಿ ಕನ್ನಡದ ಕಹಳೆ ಮೊಳಗಿಸಿದ ಈ ಎರಡೂ ಕಾರ್ಯಕ್ರಮಗಳ ವಿಶೇಷತೆಯೆಂದರೆ ನಾಡಪ್ರಭು ಕೆಂಪೆಗೌಡ ಪ್ರತಿಷ್ಠಾನ ಆಯೋಜಿಸಿದ್ದ ಪ್ರಸಿದ್ಧ ತಾಲ್ಕಟೋರ ಸ್ಟೇಡಿಯಂನಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ ರಾಷ್ಟ್ರೀಯ ಉತ್ಸವವನ್ನು ಭಾರತದ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀ ಪ್ರಣಬ್ ಮುಖರ್ಜಿಯವರು ಉದ್ಘಾಟಿಸಿ ಧರ್ಮಪ್ರಭು ಕೆಂಪೇಗೌಡರ ಆಡಳಿತದಲ್ಲಿದ್ದ ಸರ್ವಧರ್ಮ ಸಮಭಾವ ಮತ್ತು ಧರ್ಮನಿಪೇಕ್ಷ ಹಾಗೂ ದೂರದೃಷ್ಟಿಯಿಂದ ಕೂಡಿದ ರಾಜ್ಯಾಡಳಿತವನ್ನು ಶ್ಲಾಘಿಸಿದರು.

ಬೆಂಗಳೂರಿನ ಬಸವ ಸಮಿತಿ ಕರ್ನಾಟಕ ಸರ್ಕಾರದ ಧನಸಹಾಯದಿಂದ ಹಾಗೂ ಖ್ಯಾತ ಸಂಶೋಧಕ ಲಿಂಗೈಕ್ಯ ಡಾ. ಎಂ.ಎಂ. ಕಲ್ಬುರ್ಗಿ ಅವರ ಮುಖ್ಯ ಸಂಪಾದಕತ್ವದ 2500 ವಚನಗಳ 23 ಭಾರತೀಯ ಭಾಷೆಗಳ ಅನುವಾದಗಳ, ವಚನಮಾಲಿಕೆಯನ್ನು ನಮ್ಮ ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ದೆಹಲಿಯ ಪ್ರತಿಷ್ಠಿತ ವಿಜ್ಞಾನ ಭವನದಲ್ಲಿ ಲೋಕಾರ್ಪಣೆ ಮಾಡಿ, ಬಸವಣ್ಣನವರು 900 ವರ್ಷಗಳ ಹಿಂದೆಯೇ ಕಂಡಿದ್ದ ಸಾಮಾಜಿಕ ನ್ಯಾಯ, ಸಂಸದೀಯ ಮಾದರಿಯ ವ್ಯವಸ್ಥೆ ಮತ್ತು ಲಿಂಗಸಮಾನತೆ ಕುರಿತು ಅಂದಿನ ಮತ್ತು ಇಂದಿನ ಸ್ಥಿತಿ–ಗತಿ–ವ್ಯವಸ್ಥೆಗಳ ಬಗ್ಗೆ ಬೆಳಕು ಚೆಲ್ಲಿದರು.

ಹೀಗೆ ಕಳೆದ ತಿಂಗಳು ದೆಹಲಿಯಲ್ಲಿ ನಡೆದ ಎರಡೂ ಕಾರ್ಯಕ್ರಮಗಳು ಕರ್ನಾಟಕದ ಸಂಪದ್ಭರಿತವಾದ ಸಾಹಿತ್ಯ ಸಂಸ್ಕೃತಿ, ಕಲೆ, ಪರಂಪರೆಗಳನ್ನು ಇಡೀ ದೇಶಕ್ಕೆ ಅಷ್ಟೇ ಅಲ್ಲದೆ ಜಾಗತಿಕ ಮಟ್ಟದಲ್ಲೂ ಪರಿಚಯಗೊಳ್ಳುವಂತಹ ಅವಕಾಶ ತಂದುಕೊಟ್ಟಿವೆ. ಇಂತಹ ಶ್ಲಾಘನೀಯ ಕೆಲಸ ಮಾಡಿ ನಾಡು ನುಡಿಗಳ ಅಭಿವೃದ್ಧಿಗೆ ದುಡಿಯುತ್ತಿರುವ ಎರಡು ಸಂಸ್ಥೆಗಳಿಗೂ ಕೂಡಾ ದೆ.ಕ.ಸಂಘ ಅಭಿನಂದನೆ ಸಲ್ಲಿಸುತ್ತದೆ. ಎಂದಿನಂತೆ ನಮ್ಮ ಸಂಘ ಹೊರನಾಡಿನಲ್ಲಿ ಕರ್ನಾಟಕದ ಕಲೆ ಸಂಸ್ಕೃತಿ, ಸಾಹಿತ್ಯ, ನೆಲ, ಜಲಗಳ ಹಿತಕ್ಕಾಗಿ ತಾನು ದುಡಿಯುತ್ತಾ ಇದಕ್ಕಾಗಿ ಕೆಲಸಮಾಡಲು ಮುಂದೆ ಬರುವ ಎಲ್ಲ ಸಂಘಸಂಸ್ಥೆಗಳ ಜೊತೆಗೆ ಅಗತ್ಯವಾದ ನೆರವು ಸಹಕಾರ ನೀಡುತ್ತದೆಂದು ತಿಳಿಸಲು ಹರ್ಷಿಸುತ್ತೇನೆ. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ಅಭಿಮತ ರಸಪ್ರಶ್ನೆ



1. ಸಂಘದಲ್ಲಿ ನಡೆದ ಈ ವರ್ಷದ ವಾರ್ಷಿಕೋತ್ಸವ ಸಮಾರಂಭದ ಮುಖ್ಯ ಅತಿಥಿ ಯಾರು?
2. ಕುಸುಮಾಗ್ರಜ ರಾಷ್ಟ್ರೀಯ ಭಾಷಾ ಸಾಹಿತ್ಯ ಪುರಸ್ಕಾರಕ್ಕೆ ಭಾಜನರಾದ ಕನ್ನಡದ ಹಿರಿಯ ಕವಿ ಯಾರು?
3. ಬಹುಭಾಷಾ ವಚನ ಅನುವಾದದ ಮುಖ್ಯ ಸಂಪಾದಕರು ಯಾರು?
4. ಸಂಘದಲ್ಲಿ ನಡೆದ ಕೊಡವ ಮತ್ತು ಅರೆಭಾಷೆ ಸಂಭ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ತಂಡಗಳು ಯಾವುವು?
5. ಸಾಹಿತಿ 'ನಿರಂಜನ'ರ ನಿಜನಾಮ ಯಾವುದು?

ಅಭಿಮತದ ಓದುಗರು ಈ ಮೇಲಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಅಂಚೆ ಮೂಲಕ ಅಥವಾ ಸಂಘದ ಇಮೇಲ್ : dksangha@gmail.com ಮೂಲಕ ದಿನಾಂಕ 25.05.2017ರ ಒಳಗಾಗಿ ತಲುಪಿಸತಕ್ಕದ್ದು. ಎಲ್ಲಾ ಸರಿಯಾದ ಉತ್ತರ ಕಳುಹಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಅಲ್ಲದೇ ಅವರನ್ನು ಯೋಗ್ಯವಾಗಿ ಪುರಸ್ಕರಿಸಲಾಗುವುದು. ರಸಪ್ರಶ್ನೆಯಲ್ಲಿ ಅಭಿಮತ ಸಂಪಾದಕ ಮಂಡಳಿಯವರು, ಅವರ ಮನೆಯವರು, ಸಂಘದ ಕಾರ್ಯಕಾರಿ ಸಮಿತಿಯವರು ಮತ್ತು ಅವರ ಮನೆಯವರು ಭಾಗವಹಿಸುವಂತಿಲ್ಲ.

ಏಪ್ರಿಲ್ 2017ರ ಅಭಿಮತ ಪತ್ರಿಕೆಯಲ್ಲಿ ಪ್ರಕಟವಾದ ರಸಪ್ರಶ್ನೆಗಳಿಗೆ **ಸರಿಯಾದ ಉತ್ತರ**
1) ಶ್ರೀಮತಿ ವಿಜಯಲಕ್ಷ್ಮೀ ಶಿಬರೂರು 2) ನಮ್ಮಿಬ್ಬರ ನಡುವೆ ಮತ್ತು ರಂಗಿನೋಕುಳಿ 3) ಡಾ. ಸಂಗೊಂದಿ ಮಠ 4) ದೆಹಲಿ ತುಳುಸಿರಿ 5) ಶ್ರೀಮತಿ ಅಕ್ಷತಾಪಾಂಡವಪುರ

**ಸರಿಯಾದ ಉತ್ತರ ಕಳುಹಿಸಿದವರು.**
ಶ್ರೀ ಶಿವಕುಮಾರ್, ಶ್ರೀ ರಾಜಶೇಖರ್ ಡಿ.ಎಸ್. ಶ್ರೀ ಶ್ರೀಧನ್ ಮೂರ್ತಿ, ಡಾ. ಪಿ. ರಾಮಕೃಷ್ಣ ಭಟ್

## ಮುನ್ನೋಟ

ದೆಹಲಿ ಕರ್ನಾಟಕ ಸಂಘದ ವಿಶೇಷ ಪ್ರಯತ್ನದಿಂದ ಆರಂಭಗೊಂಡ ದೆಹಲಿಯ ಜವಾಹರಲಾಲ್ ನೆಹರು ಕನ್ನಡ ಅಧ್ಯಯನ ಪೀಠಕ್ಕೆ ಕರ್ನಾಟಕ ಸರ್ಕಾರವು ಈ ವರ್ಷದ ಬಜೆಟ್‌ನಲ್ಲಿ ಐದು ಕೋಟಿ ರೂಪಾಯಿಗಳನ್ನು ಘೋಷಿಸಿದೆ. ಇದಕ್ಕೆ ಕಾರಣಕರ್ತರಾದ ರಾಜ್ಯದ ಮುಖ್ಯಮಂತ್ರಿ ಮಾನ್ಯ ಶ್ರೀ ಸಿದ್ದರಾಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀಮತಿ ಉಮಾಶ್ರೀ ಹಾಗೂ ನಿರ್ದೇಶಕರಾದ ಶ್ರೀ ಕೆ. ದಯಾನಂದ ಅವರಿಗೆ ದೆಹಲಿ ಕರ್ನಾಟಕ ಸಂಘದ ಅಭಿನಂದನೆಗಳು.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿ ಇಲಾಖೆಗೆ ಪಾರದರ್ಶಕ ಆಡಳಿತವನ್ನು ನೀಡಿ, ಕನ್ನಡದ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಿ, ದೆಹಲಿ ಕರ್ನಾಟಕ ಸಂಘಕ್ಕೆ ಪ್ರತೀ ವರ್ಷ 25ಲಕ್ಷ ರೂಪಾಯಿ ಧನಸಹಾಯ ಮತ್ತು ಸಾಂಸ್ಕೃತಿಕ ಕಲಾತಂಡಗಳನ್ನು ಕಳುಹಿಸಿಕೊಡುವ ಮೂಲಕ ಉತ್ತಮ ಸದಭಿರುಚಿಯ ಕಾರ್ಯಕ್ರಮಗಳನ್ನು ನೀಡಲು ಸಹಕಾರವನ್ನು ನೀಡಿರುವ ಶ್ರೀ ಕೆ. ದಯಾನಂದ ಅವರು ಮುಂಬಡ್ತಿ ಹೊಂದಿ ಬೇರೊಂದು ಇಲಾಖೆಗೆ ವರ್ಗಾವಣೆಯಾಗಿದ್ದಾರೆ. ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಮತ್ತು ದೆಹಲಿ ಕರ್ನಾಟಕ ಸಂಘದ ಪರವಾಗಿ ಧನ್ಯವಾದಗಳು ಮತ್ತು ಅಭಿನಂದನೆಗಳು.

ಸಂಘದಲ್ಲಿ ಆಯೋಜಿಸಿದ್ದ ಕರ್ನಾಟಕದ ಪ್ರಾದೇಶಿಕ ಭಾಷೆಗಳಾದ 'ಕೊಡವ ಮತ್ತು ಅರೆಭಾಷೆ ಸಂಭ್ರಮ' ಯಶಸ್ವಿಯಾಗಿ ಮೂಡಿಬಂದಿತ್ತು. ಪ್ರತಿ ವರ್ಷದಂತೆ 'ಅಕ್ಕಮಹಾದೇವಿ ಮತ್ತು ಬಸವಣ್ಣ ಜಯಂತಿ' ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಖ್ಯಾತ ನಿರ್ದೇಶಕ ಟಿ.ಎಸ್. ನಾಗಾಭರಣ ಅವರ 'ಅಲ್ಲಮ' ಚಲನಚಿತ್ರ ಪ್ರದರ್ಶನ, ಶ್ರೀ ಪರಮಪೂಜ್ಯ ಜ್ಞಾನಯೋಗಿ ಸಿದ್ದೇಶ್ವರ ಮಹಾಸ್ವಾಮೀಜಿ, ಜ್ಞಾನಯೋಗ ಆಶ್ರಮ, ವಿಜಯಪುರ ಆಶೀರ್ವಚನ ಮತ್ತು ಬೇಲಿಮಠದ ಶ್ರೀ ಶಿವರುದ್ರ ಸ್ವಾಮೀಜಿಗಳ ಸಾನಿಧ್ಯದಲ್ಲಿ ಈರ್ವರ ಆಶೀರ್ವಚನಗಳು ಈ ಬಾರಿಯ ವಿಶೇಷ ಆಕರ್ಷಣೆಯಾಗಿದ್ದವು. ಈ ವರ್ಷದ ವಿಶೇಷವಾಗಿತ್ತು.

ಇದೇ ಸಂದರ್ಭದಲ್ಲಿ ಬೆಂಗಳೂರಿನ ಬಸವ ಸಮಿತಿಯ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿ ಮತ್ತು ಖ್ಯಾತ ಸಾಹಿತಿ ಪ್ರೊ. ಎಚ್. ಎಸ್. ಶಿವಪ್ರಕಾಶ್ ಅವರನ್ನು ಅಭಿನಂದಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೂಡಾ ಹಮ್ಮಿಕೊಂಡಿದ್ದ ಉಸ್ತಾದ್ ಹಫೀಜ್ ಬಾಲೇಖಾನ್ ಅವರಿಂದ 'ವಚನ ಗಾಯನ', ನೀಲಾಲಯ ನೃತ್ಯ ಕೇಂದ್ರ, ತುಮಕೂರು ತಂಡದಿಂದ 'ವಚನ ವೈಭವ' ಮತ್ತು ಸ್ವರಸಿಂಚನ ಕಲಾಬಳಗ, ಬೆಂಗಳೂರು ತಂಡದಿಂದ 'ಸುಗಮ ಸಂಗೀತ' ಬಹಳ ಚೆನ್ನಾಗಿ ಮೂಡಿಬಂದುವಲ್ಲದೆ ಪ್ರೇಕ್ಷಕರ ಮನಸೂರೆಗೊಂಡಿತು. ಒಟ್ಟಾರೆ ಯಶಸ್ವಿಯಾಗಿ ನಡೆಯಿತು. ಅ

***ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ***

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**2017 ಮೇ 20**

**ಶನಿವಾರ**
**ಸಂಜೆ : 6.30 ಗಂಟೆಗೆ**

**ಅಭಿನಂದನೆ**

ಕರ್ನಾಟಕ ಬ್ಯಾಂಕಿನ ನೂತನ ಆಡಳಿತ ನಿರ್ದೇಶಕ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾದ
**ಶ್ರೀ ಮಹಾಬಲೇಶ್ವರ ಭಟ್ ಎಂ.ಎಸ್.**
ಅವರಿಗೆ

ಕಲಾಂಜಲಿ ನಾಟ್ಯ ಕೇಂದ್ರ, ಮಂಗಳೂರು ಕಲಾವಿದರಿಂದ
**ವಿಶ್ವರೂಪ–ನೃತ್ಯರೂಪಕ**

### ಸಂಘದ ಆರ್ಟ್ ಗ್ಯಾಲರಿಯಲ್ಲಿ ಚಿತ್ರ ಕಲಾ ಪ್ರದರ್ಶನ

**17 ರಿಂದ 21 ಮೇ 2017**

**ಶ್ರೀ ಸುಶೀಲ್ ತಸ್‌ಬಾರ್, ಬೆಳಗಾಂ**
ಅವರಿಂದ

**25 ರಿಂದ 30 ಮೇ 2017**

**ಶ್ರೀ ವಿ.ಬಿ. ಬಿರಾದಾರ, ಗುಲ್ಬರ್ಗಾ**
ಅವರಿಂದ

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್,** MBBS, MS (AIIMS), ONCO-SURGERY (IRCH, AIIMS) ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 21 ಮೇ, 2017ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ** B.A.M.S., Msc, Yoga Therapy ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ಚಿಕಿತ್ಸೆಯ ಕುರಿತು ಉಚಿತ ಸಲಹೆ ಭಾನುವಾರ 21 ಮೇ, 2017ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ** MS, FNB, Spine Surgeon, ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 28 ಮೇ, 2017ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್** M.D. (AYU) ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 28 ಮೇ, 2017ರಂದು ಸಾಯಂಕಾಲ 4 ಗಂಟೆಯಿಂದ.

ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011–26109615 / 26104818

ಅಭಿಮತ ಪ್ರಧಾನ ಸಂಪಾದಕರು
ಬಾಲಕೃಷ್ಣ ನಾಯ್ಕ್ ಡಿ.

ಅಭಿಮತ ಸಂಪಾದಕ ಮಂಡಳಿ
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 27 ಸಂಚಿಕೆ 8
ಮೇ 2017

ಅಭಿಮತ
ದೇನಾ ಕರ್ನಾಟಕ ಸಂಘದ ಅಭಿಮತ

## ಸಂಪಾದಕರ ಟಿಪ್ಪಣಿಗಳು

# ಬುದ್ಧ ಪೂರ್ಣಿಮೆಯ ಹೊತ್ತಿನಲ್ಲಿ....


ನಮ್ಮ ದಾರ್ಶನಿಕ ಗ್ರಂಥಗಳು ಅಹಿಂಸೆಯೇ ಪರಮ ಧರ್ಮ, ಆಶೆಯೇ ದುಃಖಕ್ಕೆ ಮೂಲ ಇತ್ಯಾದಿ ಮಹತ್ತರವಾದ ವಿಚಾರಗಳನ್ನು ಶತಮಾನಗಳಿಂದ ಪ್ರತಿಪಾದಿಸುತ್ತಾ ಬಂದರೂ ನಾವು ಆ ಧಾರ್ಮಿಕ ಆಶಯಗಳನ್ನು ಮರೆತು ಅದರ ತದ್ವಿರುದ್ಧವಾದ ಕೃತ್ಯಗಳನ್ನು ಮಾಡುತ್ತಾ ಹೋಗುತ್ತಿದ್ದೇವೆ. ಲೋಕವನ್ನು ಅದು ಇರುವಂತೆಯೇ ನೋಡಬೇಕು ಹೊರತು ಅದಕ್ಕೆ ಇತಿಹಾಸದ ಅಥವಾ ಭವಿಷ್ಯದ, ತಾರತಮ್ಯಗಳ ಅಥವಾ ಕೇಡುಗಳ ಬಣ್ಣಗಳನ್ನು ಬಳಿದು ನೋಡಬಾರದು ಎಂದು ಬೋಧಿಸಿದ ಗೌತಮ ಬುದ್ಧನ ತಾತ್ವಿಕತೆಗಳನ್ನು ಅರ್ಥ ಮಾಡಿಕೊಳ್ಳುವ ಮುಕ್ತ ಮನಃಸ್ಥಿತಿಯನ್ನು ನಾವು ಹೊಂದಿಲ್ಲ. ಕಾಂಬೋಡಿಯಾ, ಥಾಯ್ಲೇಂಡ್, ಮ್ಯಾನ್ಮಾರ್, ಭೂತಾನ್, ಶ್ರೀಲಂಕಾ, ಜಪಾನ್‌ನಂತಹ ದೇಶಗಳಲ್ಲಿ ಬೌದ್ಧ ಧರ್ಮ ನೆಲೆ ಊರಿದಂತೆ ನಮ್ಮ ದೇಶದಲ್ಲಿ ಬೌದ್ಧ ತಾತ್ವಿಕತೆಗೆ ಜನರ ಒಲವು ದೊರೆಯಲಿಲ್ಲ. ನಮ್ಮ ತಿಳುವಳಿಕೆಯನ್ನು ಮತ್ತು ನಡೆಗಳನ್ನು ಸುಳ್ಳು ನಿಲುವುಗಳಿಗೆ ಒಡ್ಡಿ ಆತ್ಮ, ಪರಬ್ರಹ್ಮ, ವಿಧಿಗಳ ಮೇಲೆ ಭಾರ ಹಾಕಿ ವಿಜ್ಞಾನಕ್ಕೆ ದೊರಕದ ಜ್ಞಾನವನ್ನೇ ಪರಮಜ್ಞಾನವೆಂದು ನಾವು ಕಂಡುಕೊಂಡಿದ್ದೇವೆ. ಅನಿಶ್ಚಿತತೆ, ದುಃಖ ಮತ್ತು ವಿವೇಕಗಳೇ ನಮ್ಮನ್ನು ಮುನ್ನಡೆಸಬೇಕು ಎನ್ನುವ ಬುದ್ಧ ತತ್ವವನ್ನು ನಾವು ನಮ್ಮ ನಿತ್ಯ ಬದುಕಿನಲ್ಲಿ ಅರ್ಥ ಮಾಡಲಾಗದೇ ಹೋಗಿದ್ದೇವೆ. ಆದರೆ ಕರ್ನಾಟಕದ ಸಂದರ್ಭದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ರಚಿಸಿದ ಹಲವಾರು ವಚನಗಳು ಬೌದ್ಧ ತತ್ವಗಳನ್ನು ಪರಿಚಯಿಸುತ್ತಾ, ಕೆಲವೊಮ್ಮೆ ಬಲವಾಗಿ ಪ್ರತಿಪಾದಿಸುತ್ತಾ ಸಮಾಜವನ್ನು ವಿಮರ್ಶೆಗೆ ಒಳಪಡಿಸಿತು. ಅಂತಹ ಒಂದು ಪರಂಪರೆಯು ಕೂಡಾ ಕಾಲ ಕಳೆದಂತೆ ಅಳಿವಿಲ್ಲದ ಜಂಗಮದಿಂದ ಅಳಿವಿರುವ ಸ್ಥಾವರವಾಗಿ ನಿಲ್ಲುವ ಪ್ರಯತ್ನಗಳಾಗುತ್ತಿವೆ.

ಬುದ್ಧ ತತ್ವಗಳು ವೈಚಾರಿಕತೆ ಮತ್ತು ನಿರಂತರ ಪರಿವರ್ತನೆಗಳ ಜತೆಗೆ ಅರಿವೇ ಗುರು ಎನ್ನುವ ಸತ್ಯವನ್ನು ಬಿಡಿಸಿಟ್ಟಿತು. ಅದು ಕಂದಾಚಾರವನ್ನು ಮತ್ತು ಜಾತಿ ವ್ಯವಸ್ಥೆಗಳನ್ನು ನಿರಾಕರಿಸಿತು. ತನ್ನ ವಿಶಿಷ್ಟವಾದ ಜನಪರವಾದ ನಿಲುವುಗಳಿಂದ ಆ ಕಾಲದಲ್ಲಿ ಪ್ರಚಲಿತವಿದ್ದ ಚಿಂತನಾ ಕ್ರಮಗಳು ಕೂಡಾ ಹೊಸದಾರಿಯಲ್ಲಿ ಮುನ್ನಡೆಯುವಂತೆ ಪ್ರಚೋದಿಸಿತು. ಇತ್ತೀಚಿನ ಶತಮಾನದಲ್ಲಿ ಇಂತಹ ಬೌದ್ಧ ತತ್ವದ ವಿಚಾರಗಳು ಬಾಬಾಸಾಹೇಬ್ ಡಾ। ಬಿ.ಆರ್. ಅಂಬೇಡ್ಕರ್ ಅವರ ಮೇಲೆ ಬಹಳಷ್ಟು ಪ್ರಭಾವ ಬೀರಿತ್ತು. ಸಾಮಾಜಿಕ ನ್ಯಾಯ ಮತ್ತು ಅಸ್ಪೃಶ್ಯರ ಏಳಿಗೆಗಳನ್ನು ಧ್ಯೇಯವಾಗಿರಿಸಿದ್ದ ಅವರು ತಮ್ಮ ಬೃಹತ್ ಅನುಯಾಯಿಗಳ ಜತೆಗೆ ಬೌದ್ಧಧರ್ಮವನ್ನು ಸ್ವೀಕರಿಸಿದರು. ತಮ್ಮ ರಾಜಕೀಯ ಚಿಂತನೆಯಲ್ಲಿ ಅಂಬೇಡ್ಕರ್ ಅವರು ಬುದ್ಧ ತತ್ವಗಳನ್ನು ಪ್ರತಿಪಾದಿಸುತ್ತಾ ಹೋದರು. ಅವರ ಚಿಂತನೆಗಳಲ್ಲಿ ಮಾತ್ರವಲ್ಲದೇ ಅವರು ರೂಪಿಸಿದ ಭಾರತದ ಸಂವಿಧಾನದಲ್ಲೂ ಬುದ್ಧ ತತ್ವಗಳ ಆಧಾರದ ಮಾನವೀಯ ಮೌಲ್ಯಗಳನ್ನು ಮತ್ತು ಸಾಮಾಜಿಕ ಸಮಾನತೆಯ ಅಂಶಗಳನ್ನು ಅಳವಡಿಸಲಾಯಿತು. ದುರಂತದ ವಿಷಯವೆಂದರೆ ಬಾಬಾ ಅಂಬೇಡ್ಕರ್ ಅವರ ವಿಚಾರಧಾರೆಯ ಅನುಯಾಯಿಗಳು ಇಂದು ಬೌದ್ಧ ಸಿದ್ಧಾಂತಗಳ ಅರಿವಿನೊಳಗಿನಿಂದ ಹೊರಬರುತ್ತಿರುವುದು ಕಂಡು ಬರುತ್ತಿದೆ. ಇದಕ್ಕೆ ಮುಖ್ಯವಾದ ಕಾರಣ ಅಂಬೇಡ್ಕರ್ ಚಿಂತನೆಗಳ ಸಮಗ್ರ ಅಧ್ಯಯನದ ಕೊರತೆಯಾಗಿದೆ. ಮುಕ್ತತೆ, ಸರಳತೆ ಮತ್ತು ಸಂಘರ್ಷವಿಲ್ಲದ ಬೌದ್ಧ ತಾತ್ವಿಕತೆಯನ್ನು ಬದುಕಿನಲ್ಲಿ ಅಳವಡಿಸಿ ಬುದ್ಧನ ಮುಖದಿಂದ ಸೂಸುತ್ತಿರುವ ನಿರ್ಮಲ ಶಾಂತಿಯನ್ನು ನಮ್ಮೊಳಗೆಯೂ ಅರಳಿಸುವಂತಹ ಕೆಲಸವಾಗಬೇಕಾಗಿದೆ.

ಬಾನಾಡಿ

*ಬಾಲಕೃಷ್ಣ ನಾಯ್ಕ್ ಡಿ.*





# ಕಲೆಯು ಮನುಷ್ಯನನ್ನು ಸೃಜನಶೀಲರನ್ನಾಗಿ ಮಾಡುತ್ತದೆ- ಭೀಮರಾವ್ ಮುರಗೋಡ



**ಸಂಘವು ಗ್ರಾಮೀಣ ಸ್ಥಳಗಳಿಂದ ಕಲಾವಿದರು ಬಂದು ಪ್ರದರ್ಶನ ಹೆಚ್ಚು ಮಾಡಲಿ ಅವರಿಗೆ ಸಂಘದಿಂದ ಸಹಾಯ, ಸಹಕಾರ ನೀಡುವುದರ ಮೂಲಕ ಕಲಾವಿದರನ್ನು ಪ್ರೋತ್ಸಾಹಿಸುವುದಾಗಿ ಹೇಳಿದರು.**



ಗದುಗಿನ ಕಲಾವಿದ ಡಾ. ಬಿ.ಎಲ್. ಚವ್ಹಾಣ ಅವರ ಚಿತ್ರಕಲಾ ಪ್ರದರ್ಶನವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ದೆಹಲಿ ಕರ್ನಾಟಕ ಸಂಘದ ಗ್ಯಾಲರಿಯಲ್ಲಿ ಎಪ್ರಿಲ್ 28ರಂದು ಉದ್ಘಾಟನೆಗೊಂಡಿತು. ನವದೆಹಲಿಯ ಪ್ರಸಿದ್ಧ ಕಲಾವಿದರಾದ ಭೀಮರಾವ್ ಮುರಗೋಡ ಅವರು ಈ ಸಂದರ್ಭದಲ್ಲಿ ಮಾತನಾಡುತ್ತಾ ಚವ್ಹಾಣರು ಪ್ರದರ್ಶಿಸಿರುವ ಕಲಾಕೃತಿಗಳನ್ನು ಗಮನವಿಟ್ಟು ನೋಡಿದಾಗ ಚಿತ್ರಕಲೆಯು ಮನುಷ್ಯರನ್ನು ಸೃಜನಶೀಲರನ್ನಾಗಿ ಮಾಡುತ್ತದೆ ಎಂದನಿಸುತ್ತದೆ ಎಂದರು. ಅವರು ಇಂಥಹ ಅನೇಕ ಪ್ರದರ್ಶನ ಮಾಡುವುದರ ಮೂಲಕ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತ ಸಂಘವು ಗ್ರಾಮೀಣ ಸ್ಥಳಗಳಿಂದ ಕಲಾವಿದರು ಬಂದು ಪ್ರದರ್ಶನ ಹೆಚ್ಚು ಮಾಡಲಿ ಅವರಿಗೆ ಸಂಘದಿಂದ ಸಹಾಯ, ಸಹಕಾರ ನೀಡುವುದರ ಮೂಲಕ ಕಲಾವಿದರನ್ನು ಪ್ರೋತ್ಸಾಹಿಸುವುದಾಗಿ ಹೇಳಿದರು. ಲಲಿತಕಲಾ ಅಕಾಡೆಮಿ ದೆಹಲಿಯ ಆಡಳಿತಾಧಿಕಾರಿಗಳಾದ ಶ್ರೀ ಚಿ.ಸು. ಕೃಷ್ಣ ಶೆಟ್ಟಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡುತ್ತ ಡಾ. ಬಿ.ಎಲ್. ಚವ್ಹಾಣರವರು ತಮ್ಮದೇ ಆದ ಶೈಲಿಯಲ್ಲಿ ಗ್ರಾಮೀಣ ಹಳ್ಳಿಯ ಮಹಿಳೆಯರ ಕುರಿತು ಕಲಾಕೃತಿಗಳನ್ನು ರಚಿಸಿ ದೆಹಲಿಯಲ್ಲಿ ಪ್ರದರ್ಶಿಸಿರುವುದು ಶ್ಲಾಘನೀಯವಾಗಿದೆ. ಇನ್ನೂ ಉತ್ತಮವಾಗಿ ಕಲಾಕೃತಿಗಳನ್ನು ರಚಿಸುವುದರೆ ಮೂಲಕ ರಾಜ್ಯ, ರಾಷ್ಟ್ರಮಟ್ಟದಲ್ಲಿ ಬೆಳೆಯಲಿ ಎಂದರು.

ದೆಹಲಿಯ ಯುವ ಕಲಾವಿದ ಶ್ರೀ ಸುಧೀರ್ ಫಡ್ನೀಸ್ ಅವರು ಅತಿಥಿಗಳಾಗಿ ಆಗಮಿಸಿ ಮಾತನಾಡುತ ಡಾ. ಬಿ.ಎಲ್. ಚವ್ಹಾಣರವರು ತಮ್ಮದೇ ಆದ ವ್ಯಕ್ತಿತ್ವ ಬೆಳೆಸಿಕೊಂಡವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯ ಧನ ಪಡೆದು ರಾಜಧಾನಿ ದೆಹಲಿಯಲ್ಲಿ ತಮ್ಮ ಕಲಾಪ್ರದರ್ಶನ ಮಾಡುವುದರ ಮೂಲಕ ತಮ್ಮ ಕಲಾ ಪ್ರತಿಭೆಯನ್ನು ಬೆಳೆಸಿಕೊಂಡಿದ್ದಾರೆ ಎಂದರು. ಕಲಾವಿದ ಡಾ. ಬಿ.ಎಲ್. ಚವ್ಹಾಣರು ಪ್ರಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ಶ್ರೀ ಬಸವರಾಜ್ ಕುಸುಗಲ್ಲ್ ಅವರು ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು. ಸಮಾರಂಭದಲ್ಲಿ ಅನೇಕ ಕಲಾವಿದರು ಉಪಸ್ಥಿತರಿದ್ದರು. ಅ

***ಅಭಿಮತ ವರದಿ***

# ಕೊಡವ ಮತ್ತು ಅರೆಭಾಷೆ ಸಂಭ್ರಮ

ಯಾವುದೇ ಒಂದು ಪ್ರದೇಶದ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಅಭಿವೃದ್ಧಿ ವಿಷಯಗಳಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಸ್ಪಂದಿಸದೇ ಇದ್ದಾಗ ಸ್ಥಳೀಯರು ಪ್ರತ್ಯೇಕ ನಾಡಿನ ಕೂಗು ಎಬ್ಬಿಸುವುದು ಸ್ವಾಭಾವಿಕ. ಕರ್ನಾಟಕವನ್ನೇ ಗಮನಿಸಿದರೆ ಉತ್ತರ ಕರ್ನಾಟಕ, ತುಳುನಾಡು, ಕೊಡಗು ಪ್ರತ್ಯೇಕತೆಯ ಕೂಗುಗಳು ಕೇಳಿ ಬರುತ್ತಿದೆ. ಅವರ ಬೇಡಿಕೆಗಳಿಗೆ ಸ್ಪಂದಿಸಿ ಅಖಂಡ ಕರ್ನಾಟಕವನ್ನು ಉಳಿಸಿಕೊಳ್ಳುವುದು ಸರ್ಕಾರದ ಕರ್ತವ್ಯವಾಗಿದೆ. ಕೊಡಗಿನ ಜನತೆ ಕೂಡಾ ತಮ್ಮ ಭಾಷೆ, ಸಂಸ್ಕೃತಿಯ ಉಳಿವು ಮತ್ತು ಅಭಿವೃದ್ಧಿಗಾಗಿ ವಿಶೇಷ ಸಹಾಯ, ಸವಲತ್ತು ಮತ್ತು ಪ್ರೋತ್ಸಾಹವನ್ನು ಆಶಿಸಿರುವುದು ಸ್ವಾಭಾವಿಕ. ಕೊಡಗಿನಲ್ಲಿ ವಿವಿಧ ಭಾಷೆಯ ಜನರು ವಾಸಿಸುತ್ತಿದ್ದು, ಅವರೆಲ್ಲರೂ ಕೊಡವ ಭಾಷೆಯನ್ನು ಕಲಿಯಲೇಬೇಕು. ನಮ್ಮ ಮಾತೃಭಾಷೆ ಯಾವುದೇ ಆಗಿರಲಿ ನಾವು ನೆಲೆನಿಂತ ಪ್ರದೇಶದ ಭಾಷೆ ಮತ್ತು ಸಂಸ್ಕೃತಿಯನ್ನು ನಾವು ಪ್ರೀತಿಸಿ ಗೌರವಿಸಬೇಕೆಂದರು. ಕರ್ನಾಟಕ ಸರ್ಕಾರವು ಅರೆಭಾಷೆ ಅಕಾಡೆಮಿಯನ್ನು ಸ್ಥಾಪಿಸಿದ ನಂತರ ಈ ಭಾಷೆಯ ಕುರಿತು ಹೆಚ್ಚಿನ ಅರಿವು ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಆಗುತ್ತಿದೆ ಎಂದರು. ಸರ್ಕಾರವು ಕೊಡಗಿಗೆ ವಿಶೇಷ ಪ್ರಾಧಾನ್ಯತೆ ನೀಡಬೇಕೆಂದು ದೆಹಲಿ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು 'ಕೊಡವ ಮತ್ತು ಅರೆಭಾಷೆ ಸಂಭ್ರಮ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಕರೆಯಿತ್ತರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಅರೆಭಾಷೆ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಕೊಲ್ಯದ ಗಿರೀಶ್ ಅವರು ಕೊಡವ ಮತ್ತು ಅರೆಭಾಷೆಯ ಅಭಿವೃದ್ಧಿಗೆ ಸರ್ಕಾರದ ಜೊತೆಜೊತೆಗೆ ಸಮಾಜದ ಎಲ್ಲಾ ವರ್ಗದ ಜನರೂ ಕೂಡಾ ಸೇರಿ ದುಡಿಯಬೇಕು ಎಂದು ಕರೆ ನೀಡಿದರು. ಸಂಘಟಕ ದೇವಂಗಿರಿ ಹರೀಶ್ ಅವರು ಮಾತನಾಡಿ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಯಲ್ಲಿ ಸಮಾಜದ ಎಲ್ಲಾ ವರ್ಗದ ಜನತೆ ಪರಸ್ಪರ ಸಹಕರಿಸಿದಾಗ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಖ್ಯಾತ ಸಾಹಿತಿ ನಾಗತೀಹಳ್ಳಿ ರಮೇಶ್ ಅವರು ಮಾತನಾಡಿ ಕೊಡಗಿನಂತಹ ಸುಂದರ ಪ್ರಾಕೃತಿಕ ಸೌಂದರ್ಯವನ್ನು ಹೊಂದಿರುವ ಜಾಗದಲ್ಲಿ ನೆಲೆಸಬೇಕೆಂಬುದು ಸದಾ ನನ್ನ ಅನಿಸಿಕೆ ಮತ್ತು ಆಶಯವಾಗಿದೆ. ಕೊಡಗು ನಾನು ಕಂಡ ರಮಣೀಯವಾದ ಸ್ಥಳವಾಗಿದೆ ಎಂದರು.




ಸಮಾರಂಭದಲ್ಲಿ ಸ್ಥಳೀಯ ಕೊಡವ ಸಮಾಜದ ಅಧ್ಯಕ್ಷರಾದ ಶ್ರೀ ಎಂ. ಕಾರ್ಯಪ್ಪ ಅಪ್ಪಯ್ಯ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘವು ರಾಜ್ಯದ ಎಲ್ಲಾ ಭಾಷೆಗಳಿಗೆ ಉತ್ತೇಜನ ನೀಡುತ್ತಿರುವುದು ಶ್ಲಾಘನೀಯ ಎಂದರು. ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ ಸ್ವಾಗತಿಸಿ, ಕೊನೆಯಲ್ಲಿ ಪ್ರಧಾನ ಕಾರ್ಯದರ್ಶಿ ಸಿ.ಎಂ. ನಾಗರಾಜ ಅವರು ಧನ್ಯವಾದ ಅರ್ಪಿಸಿದರು. ಕಾರ್ಯಕ್ರಮವನ್ನು ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ಅವರು ನಿರೂಪಿಸಿದರು.

ಸಭಾ ಕಾರ್ಯಕ್ರಮದ ನಂತರ ಕೊಡಗಿನ ಕಲೆ, ಭಾಷೆ ಮತ್ತು ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಅಭಿನಯ ಕಲಾ ಮಿಲನ ಚಾರಿಟೇಬಲ್ ಟ್ರಸ್ಟ್‌ನ 'ನಾಟ್ಯಮಿಲನ ನೃತ್ಯ ಶಾಲೆ' ಕಲಾವಿದರು, ಭಾಗಮಂಡಲ ಮತ್ತು ಕಿರಣ್ ಕೆ.ಜೆ ಅವರ ಟೀಮ್ ಅಟಿಟ್ಯೂಡ್ ಡಾನ್ಸ್ ಸ್ಟುಡಿಯೋ, ಕುಶಾಲನಗರ ತಂಡದ ಕಲಾವಿದರಿಂದ ಅದ್ಭುತ ನೃತ್ಯ ಪ್ರದರ್ಶನಗಳು ನಡೆದವು.

ಸ್ಥಳೀಯ ಕಲಾವಿದರಾದ ಚಿದಂಬರ ಕೋಟೆ, ರಾಜಕುಮಾರ, ಗಂಗಾಧರ್, ಜಯಶ್ರೀನಿವಾಸ, ನಳಿನಿ ಚರ್ಮಣ್ಣ, ಮಮತಾ ಪಿ., ಸಹನಾ ರಾವ್ ಅವರು ಹಾಡುಗಳನ್ನು ಹಾಡಿ ಪ್ರೇಕ್ಷಕರನ್ನು ಮನರಂಜನೆಗೊಳಿಸಿದರು. ಅ

***ಸಖಾರಾಮ ಉಪ್ಪೂರು***












# ನಿರಂಜನರ ವಿಚಾರಧಾರೆಗಳನ್ನು ಹೊಸಪೀಳಿಗೆಗೆ ಪರಿಚಯಿಸುವ ಕೆಲಸ ಆಗಬೇಕಾಗಿದೆ-ಕಾಳೇಗೌಡ ನಾಗವಾರ

## ದೆಹಲಿ ಕರ್ನಾಟಕ ಸಂಘದಲ್ಲಿ ನಿರಂಜನ ರಾಷ್ಟ್ರೀಯ ವಿಚಾರಗೋಷ್ಠಿ

ಕನ್ನಡದ ಪ್ರಗತಿಶೀಲ ಪರಂಪರೆಯ ಪ್ರಸಿದ್ಧ ಲೇಖಕ ನಿರಂಜನ ಅವರ ವ್ಯಕ್ತಿ, ವಿಚಾರ, ಬದುಕು, ಸಾಹಿತ್ಯ ಮತ್ತು ಚಳುವಳಿ ಕುರಿತು ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಇವರ ಸಹಯೋಗದಲ್ಲಿ ಇದೇ ಏಪ್ರಿಲ್ 9ರಂದು ರಾಷ್ಟ್ರಮಟ್ಟದ ವಿಚಾರಗೋಷ್ಠಿಯನ್ನು ಏರ್ಪಡಿಸಲಾಗಿತ್ತು.

ಕನ್ನಡ ಖ್ಯಾತ ಸಾಹಿತಿ ಡಾ. ಕಾಳೇಗೌಡ ನಾಗವಾರ ಅವರು ಈ ವಿಚಾರಸಂಕಿರಣವನ್ನು ಉದ್ಘಾಟಿಸಿದರು. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಅಧ್ಯಕ್ಷತೆ ವಹಿಸಿದ್ದರು.

ಖ್ಯಾತ ನ್ಯಾಯವಾದಿ ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ, ನಿವೃತ್ತ ಪ್ರಾಧ್ಯಾಪಕರಾದ ಡಾ. ಎಚ್. ಎಂ. ಕುಮಾರಸ್ವಾಮಿ, ಖ್ಯಾತ ಸಾಹಿತಿ ಡಾ. ಟಿ.ಸಿ. ಪೂರ್ಣಿಮಾ, ಅನರ್ಘ್ಯ ಐ.ಎ.ಎಸ್. ಅಕಾಡೆಮಿಯ ನಿರ್ದೇಶಕರಾದ ಶ್ರೀ ಮನೋಜ್ ಎಂ.ಕೆ. ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಿಚಾರಸಂಕಿರಣದಲ್ಲಿ ವಿಷಯ ಮಂಡನೆ ಮಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪ್ರೊ. ಕಾಳೇಗೌಡ ಅವರು ನಿರಂಜನರ ಹೋರಾಟದ ಬದುಕು ಮತ್ತು ಕ್ರಾಂತಿಕಾರಿ ಚಳುವಳಿಯಿಂದ ಪ್ರೇರಿತ ಬರಹಗಳು ಅಂದಿನ ಸಮಾಜದ ವಾಸ್ತವಿಕತೆಯನ್ನು ವಸ್ತುನಿಷ್ಠವಾಗಿ ಪರಿಚಯಿಸುತ್ತವಲ್ಲದೆ ಆ ವಿಚಾರಧಾರೆ ಇಂದಿನ ಸಮಾಜಕ್ಕೂ ಕೂಡಾ ಅತ್ಯಂತ ಅರ್ಥಪೂರ್ಣವಾಗಿದೆ ಎಂದು ನುಡಿದರು. ಇಂತಹ ಮಹಾನ್ ಚಿಂತಕನ ಬದುಕು, ಬರಹಗಳ ಕುರಿತಾಗಿ ಇನ್ನಷ್ಟು ಹೆಚ್ಚು ವಿಚಾರ ಸಂಕಿರಣಗಳು ನಡೆದು ಅವರ ಬರಹಗಳು ಮತ್ತು ವಿಚಾರಧಾರೆಗಳನ್ನು ಹೊಸ ಪೀಳಿಗೆಗೆ ಕರ್ನಾಟಕ ಮತ್ತು ದೇಶದಾದ್ಯಂತ ಪರಿಚಯಿಸುವ ಕೆಲಸ ಆಗಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಪ್ರೊ. ಬಿಳಿಮಲೆ ಅವರು ಮಾತನಾಡುತ್ತಾ, ನಿರಂಜನರು ಅಂದಿನ ಸಮಾಜದಲ್ಲಿ ಅತ್ಯಂತ ಧೈರ್ಯದಿಂದ ತಮ್ಮ ವಿಚಾರಗಳನ್ನು ಬರವಣಿಗೆಯ ಮೂಲಕ ವ್ಯಕ್ತಪಡಿಸಿದ್ದಲ್ಲದೆ ತಮ್ಮ ಬದುಕಿನಲ್ಲೂ ಸಹ ಯಾವುದೇ ರೀತಿಯ ಮುಜುಗರ, ಮುಚ್ಚುಮರೆ ಇಟ್ಟುಕೊಳ್ಳದೆ ಸತ್ಯಕ್ಕಾಗಿ ತಮ್ಮ ಕೊನೆ ಉಸಿರಿರುವವರೆಗೆ ಹೋರಾಟ ನಡೆಸಿದರು. ಅವರ ಬರಹಗಳಲ್ಲಿ ಕಂಡು ಬರುವ ಬಂಡಾಯ, ಬ್ರಿಟೀಷರ ವಿರುದ್ಧ ಮತ್ತು ಜಮೀನ್ದಾರಿ ಪದ್ಧತಿಯ ವಿರುದ್ಧ ನಡೆಸಿದ ಹೋರಾಟ ಅವರ ಭೂಗತ ಜೀವನ ಇವೆಲ್ಲವನ್ನು ಎಳೆಎಳೆಯಾಗಿ ಬಿಡಿಸಿ ನೋಡಿದಾಗ ನಿರಂಜನರ ಬದುಕು ಮತ್ತು ಬರಹಗಳು ಒಂದು ಸಮಾಜದ ಒಟ್ಟಾರೆ ಅಭಿವೃದ್ಧಿ ಬೆಳವಣಿಗೆಗೆ ಅತ್ಯಂತ ಮಹತ್ವಪೂರ್ಣವಾದದ್ದಾಗಿದೆ ಎಂದು ಅಭಿಪ್ರಾಯಪಟ್ಟರು. ನಿರಂಜನರು ಮತ್ತು ಶಿವರಾಮ ಕಾರಂತರು ಬರೆದ ಕೃತಿಗಳು ಇಂಗ್ಲೀಷ್ ಮತ್ತು ಭಾರತದ ಇತರ ಭಾಷೆಗಳಲ್ಲಿ ತರ್ಜುಮೆಗೊಂಡು ದೇಶ ವಿದೇಶಗಳ ಚಿಂತಕರನ್ನು ಮುಟ್ಟುವಂತಾದಲ್ಲಿ ಇವರುಗಳ ಬರಹಗಳು ವಿಶ್ವಮಟ್ಟದ ಬರಹಗಳ ಸಾಲಿನಲ್ಲಿ ನಿಲ್ಲುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ನುಡಿದರು.

ಮೃತ್ಯುಂಜಯ, ಚಿರಸ್ಮರಣೆ, ಕೊನೆಯ ಗಿರಾಕಿ, ಬನಶಂಕರಿ ಸೇರಿದಂತೆ 25 ಕಾದಂಬರಿಗಳು ವಿಶ್ವಕಥಾ ಸಂಕಲನಕ್ಕೆ ಸೇರಿವೆ. ಕೈಯೂರುನಲ್ಲಿ ನಡೆದ ರೈತಚಳುವಳಿಯನ್ನು ಆಧರಿಸಿ ಬರೆದ ಬರಹ ಮಳಯಾಲಂ ಭಾಷೆಯಲ್ಲಿ ತರ್ಜುಮೆಗೊಂಡಿದ್ದು ಅದು ಮಲಯಾಳಂನಲ್ಲಿ ಅತ್ಯಂತ ಹೆಚ್ಚು ಜನ ಓದಿರುವ ಭಾಷಾಂತರ ಕೃತಿಯಾಗಿದೆ. ನಿರಂಜನರ ಕೃತಿಯಾದ 'ಚಿರಸ್ಮರಣೆ'ಯನ್ನು ಆಧರಿಸಿ ಮಲಯಾಳಂನಲ್ಲಿ ನಿರ್ಮಾಣಗೊಂಡ ಚಲನಚಿತ್ರ ಪ್ರಸಿದ್ಧಿಪಡೆದಿದೆ ಎಂದರು.

ಡಾ. ಎಚ್.ಎಂ. ಕುಮಾರಸ್ವಾಮಿ ಅವರು ಮಾತನಾಡುತ್ತ, ನಿರಂಜನ ಅವರ ಬಾಲ್ಯದಿಂದ ಕೊನೆ ಘಳಿಗೆವರೆಗಿನ ಜೀವನದ ವಿವಿಧ ಸ್ತರಗಳನ್ನು ಪರಿಚಯಿಸಿಕೊಟ್ಟರು.

ಡಾ. ಟಿ.ಸಿ. ಪೂರ್ಣಿಮಾ ಅವರು ನಿರಂಜನ ಅವರ ಬರಹಗಳನ್ನು ಅದರಲ್ಲೂ ಮುಖ್ಯವಾಗಿ ಕಾದಂಬರಿ ಮತ್ತು ಕಥೆಗಳನ್ನು ವಿಶ್ಲೇಷಿಸಿ ಸತ್ವವನ್ನು ಅನ್ವೇಷಣೆ ಮಾಡುತ್ತಾ ಹೋದ ನಿರಂಜನರು ಗಾಂಧೀವಾದ, ಮಾರ್ಕ್ಸ್‌ವಾದ, ಲೋಹಿಯಾವಾದಗಳಲ್ಲಿ ಕಂಡುಬರುವ ಸಮಾಜವಾದಿ ವಿಚಾರಗಳನ್ನು ತಮ್ಮದೇ ರೀತಿಯಲ್ಲಿ 'ನಿರಂಜನವಾದ'ವಾಗಿ ಮಾಡುವ ಪ್ರಯತ್ನ ಮಾಡಿದರು. ಅಂದಿನ ರಮ್ಯ ಸಾಹಿತ್ಯದ ಭ್ರಮೆಯನ್ನು ನಿರಂಜನವಾದದ ಕಡು ಸತ್ಯವನ್ನು ಜನ ಅಷ್ಟೊಂದು ಮೆಚ್ಚಿಕೊಂಡು ಪ್ರಚಾರಪಡಿಸಲಿಲ್ಲ ಎಂದರು.


ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ ಅವರು ನಿರಂಜನರ ಹೋರಾಟತನ ಮತ್ತು ಕ್ರಾಂತಿಕಾರಿ ದೃಷ್ಟಿಯನ್ನು ನಿರಂಜನರ ಬದುಕು–ಬರಹಗಳೆರಡರಲ್ಲೂ ಸ್ಪಷ್ಟವಾಗಿ ಕಾಣಬಹುದಾಗಿದೆ ಎಂದು ನಿರಂಜನರ ಕೃತಿಗಳನ್ನು ಉದಾಹರಿಸುವುದರ ಮೂಲಕ ವಿವರಿಸಿದರು.

ಶ್ರೀ ಮನೋಜ್ ಎಂ.ಕೆ. ಅವರು ಮಾತನಾಡುತ್ತ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಒಂದು ವಿಶಿಷ್ಟ ಪ್ರಕಾರವಾಗಿ ಎದ್ದು ಕಾಣುವ ನಿರಂಜನರ ಬರಹಗಳು ಸಾಹಿತ್ಯ ಅಭ್ಯರ್ಥಿಗಳೆಲ್ಲರಿಗೂ ಒಂದು ಅತ್ಯಂತ ದೊಡ್ಡ ಕುತೂಹಲಕಾರಿ ಹಾಗೂ ಸವಾಲಾದ ವಿಷಯವಾಗಿ ಕಂಡು ಬರುತ್ತದೆ. ನಿರಂಜನರನ್ನು ಓದುತ್ತಾ ಹೋದಂತೆ ಒಂದು ಹೊಸ ಜಗತ್ತೇ ತೆರೆದುಕೊಳ್ಳುತ್ತದೆ. ಎಂದು ನುಡಿದರು.

ಆರಂಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕರ್ನಾಟಕ ಸರ್ಕಾರ ನಿರ್ಮಾಣದ 'ನಿರಂಜನ'ರ ಕುರಿತ ಕಿರುಚಿತ್ರ ಪ್ರದರ್ಶನವಾಯಿತು. ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಅತಿಥಿಗಳನ್ನು ಸ್ವಾಗತಿಸಿದರು. ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ಅವರು ಕಾರ್ಯಕ್ರಮ ನಿರೂಪಿಸಿ, ಧನ್ಯವಾದ ಅರ್ಪಿಸಿದರು. ಅ

***ಸಖಾರಾಮ ಉಪ್ಪೂರು***

### ನಿರಂಜನ



ನಿರಂಜನ (1924–1992) ಒಬ್ಬ ಖ್ಯಾತ ಬರಹಗಾರ. ಒಬ್ಬ ಸ್ವಾತಂತ್ರ್ಯ ಹೋರಾಟಗಾರ. ನಿಜ ನಾಮಧೇಯ ಕುಳಕುಂದ ಶಿವರಾಯ. ಇವರು 20ನೇ ಶತಮಾನದ ಪ್ರಮುಖ ಲೇಖಕ ಮತ್ತು ಪ್ರಗತಿಪರ ಚಳವಳಿಯ ಮುಂದಾಳು. ಗಾಂಧೀಜಿ, ಕಾರ್ಲ್ ಮಾರ್ಕ್ಸ್, ವ್ಲಾಡಿಮಿರ್ ಲೆನಿನ್‌ರ ವಿಚಾರಧಾರೆಗಳಿಂದ ಪ್ರಭಾವಿತರಾದವರು. ನಿರಂಜನರು ಸುಮಾರು ಐದು ದಶಕಗಳ ಕಾಲ ಸಮೃದ್ಧವಾದ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದರು. ಇವರ ಬರವಣಿಗೆ ಕೃತಿ, ಕಾದಂಬರಿ, ಸಣ್ಣ ಕಥೆಗಳು, ನಾಟಕಗಳು, ಜೀವನ ಕಥನಗಳು, ರಾಜಕೀಯ ವ್ಯಾಖ್ಯಾನಗಳು ಮತ್ತು ಭಾಷಾಂತರಗಳನ್ನು ಒಳಗೊಂಡಿವೆ. ಅವರು ಕನ್ನಡ ವಾರ್ತಾಪತ್ರಿಕೆ ಮತ್ತು ನಿಯತಕಾಲಿಕಗಳಲ್ಲಿ ನಿಯತ ಅಂಕಣಕಾರರಾಗಿದ್ದರು. ಅವರ ಸಾಧನೆಯಲ್ಲಿ ಯುವಕರಿಗಾಗಿ ಏಳು ಸಂಪುಟಗಳ ಜ್ಞಾನ ಗಂಗೋತ್ರಿ ಮತ್ತು 25 ಸಂಪುಟಗಳ ಪ್ರಪಂಚದ ಮಹತ್ತರವಾದ ಕಥೆಗಳ ಸಂಕಲನಗಳು ಸೇರಿವೆ.

### ಜೀವನ

ಹುಟ್ಟಿದ ಸ್ಥಳ ಕುಳಕುಂದ (15ನೇ ಜೂನ್ 1924). ತಾಯಿ ಚೆನ್ನಮ್ಮ. ಸುಳ್ಯದಲ್ಲಿ ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಓದು. ನೀಲೇಶ್ವರದಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸ. ಖ್ಯಾತ ವೈದ್ಯೆ, ಲೇಖಕಿ ಅನುಪಮಾ ನಿರಂಜನ ಅವರೊಂದಿಗೆ ವಿವಾಹ. ನಾಗೇಶರಾವ್ ಅವರಿಗೆ ನಿರಂಜನ ಸೇರಿದಂತೆ ಎಸ್.ಕೆ. ನಾಡಿಗ್, ಶೇಷನಾರಾಯಣ, ವೆಂಕಟರಾಜ ಪಾನಸೆ, ಸೇವ ನಮಿರಾಜ ಮಲ್ಲ, ಕೋ. ಚೆನ್ನಬಸಪ್ಪ, ಸಿ.ಎಚ್. ಪ್ರಹ್ಲಾದರಾವ್ ಮತ್ತಿತರರನ್ನು ಪರಿಚಯಿಸಿದವರು ಚಿತ್ರಗುಪ್ತ ವಾರಪತ್ರಿಕೆಯ ಸಂಪಾದಕರಾಗಿದ್ದ ಎಂ.ಎಸ್.ಭಾರದ್ವಾಜ್. ಅನುಪಮಾ ನಿರಂಜನರಿಗೆ ಮಕ್ಕಳು ಸೀಮಂತಿನಿ ಮತ್ತು ತೇಜಸ್ವಿನಿ–ಇಬ್ಬರೂ ಲೇಖಕರು. ನಿರಂಜನ ಹತ್ತು ವರ್ಷದವನಾಗಿದ್ದಾಗ ಸುಳ್ಯದಲ್ಲಿ ಗಾಂಧೀಜಿಯವರ ದರ್ಶನದಿಂದ ಅವರ ಬದುಕಿನ ಪರಿವರ್ತನೆಗೆ ಕಾರಣವಾಯಿತು. ಮುಂದೆ ಪುತ್ತೂರಿನಲ್ಲಿ ನೆಹರು ಅವರ ಭಾಷಣದಿಂದ ಪ್ರಭಾವಿತರಾಗಿ ಸ್ವಾತಂತ್ರ್ಯದ ಹೋರಾಟಕ್ಕೆ ನಾಂದಿಯಾಯಿತು.

ಸಂಘದಲ್ಲಿ ನಡೆದ **'ನಿರಂಜನ– ವ್ಯಕ್ತಿ–ಸಾಹಿತ್ಯ–ಚಳವಳಿ'** ರಾಷ್ಟ್ರೀಯ ವಿಚಾರ ಗೋಷ್ಠಿಯಲ್ಲಿ 'ನಿರಂಜನರ ಕೃತಿಗಳು' ವಿಷಯದ ಮೇಲೆ **ಡಾ. ಟಿ.ಸಿ. ಪೂರ್ಣಿಮಾ** ಅವರು ಮಂಡಿಸಿದ ಉಪನ್ಯಾಸದ ಆಯ್ದ ಭಾಗ.



ಕನ್ನಡನಾಡು ಕಂಡ ಅಪ್ರತಿಮ ಸಾಹಿತಿ ದಂಪತಿಗಳ ಪೈಕಿ ಅನುಪಮಾ ಹಾಗೂ ನಿರಂಜನ ಪ್ರಮುಖರು. ಅವರ ವೈಚಾರಿಕ ಚಿಂತನೆಗಳು, ಸಾಹಿತ್ಯಕ ಧೋರಣೆಗಳು ಇಪ್ಪತ್ತನೆ ಶತಮಾನದ ಮಧ್ಯಭಾಗದಲ್ಲಿ ಅರಳಿದ ಸಾಹಿತ್ಯ ಪ್ರಕೃತಿಗೆ ಸರಿತೂಗಿಕೊಂಡಿದ್ದಕ್ಕೆ ಅವರಿಬ್ಬರೊಳಗೂ ಇದ್ದ ಹೋರಾಟಗಾರ ಪ್ರವೃತ್ತಿ ಕಾರಣವಾಗಿತ್ತು. ದಂಪತಿಗಳಿಬ್ಬರ ವಲಯವೂ ಬೇರೆ ಬೇರೆ. ವೈಚಾರಿಕ ಹರವೂ ಬೇರೆ ಬೇರೆ. ಆದರೆ ಇಬ್ಬರೂ ಚಿಂತಕರು, ಸಾಹಿತಿಗಳು, ವಿಚಾರಶೀಲರು. ಹಾಗಾಗಿ ಗುರಿ ಭಿನ್ನವಾಗಲೇ ಇಲ್ಲ. ನಿರಂಜನ ಸ್ವಾತಂತ್ರ್ಯ ಹೋರಾಟ, ಲೆನಿನ್ ವಾದ ಮತ್ತಿತರ ಊರ್ಧ್ವಮುಖಿ ಚಳವಳಿಗಳಲ್ಲಿ ಮನವಿರಿಸಿಕೊಂಡರೆ ಅನುಪಮಾ ಮಹಿಳಾ ಸ್ವಾತಂತ್ರ್ಯ ಅಥವಾ ಹೆಂಗಳೆಯರ ಇಂಡಿವಿಜುಯಾಲಿಟಿ ಕಡೆಗೆ ಆಸಕ್ತರಾಗಿದ್ದರು. ಎರಡೂ ವ್ಯಕ್ತಿಗತ ಸ್ವಾತಂತ್ರ್ಯ,ಸ್ವಾವಲಂಬನೆ, ಸಮಾನತೆ, ಸ್ವಶಕ್ತತೆ ಕಲ್ಪಿಸುವ ಆಶಯವನ್ನೇ ಹೊಂದಿದ್ದವು. ಈ ನೆಲೆಯಿಂದ ನೋಡಿದಾಗ ಇವರಿಬ್ಬರ ವೈವಾಹಿಕ ದಾಂಪತ್ಯ ಮತ್ತು ಸಾಹಿತ್ಯಕ ಸಾತತ್ಯ ಅನುಪಮವೇ ಆಗಿದ್ದವು.

ಕಳಕುಂದ ಶಿವರಾಯರು ಕನ್ನಡದ ಬರಹಗಾರ ನಿರಂಜನರಾಗಿದ್ದು ಕನ್ನಡ ಸಾರಸ್ವತ ಲೋಕದ ಸುಕೃತ. ತಮಗೆ ಬುದ್ಧಿ ಮೂಡುವ ಮುನ್ನವೇ ಅವರು ಕಥೆಗಾರರಾಗಿ ಹೋಗಿದ್ದರು. ನಿರಂಜನರು 1924ರಲ್ಲಿ ಹುಟ್ಟಿದಾಗ ಗಾಂಧಿಯಿಸ್ಮ್ ಮೇಲುಗೈಯ್ಯಲ್ಲಿತ್ತು. ಗಾಂಧಿಯುಗ ಆರಂಭವಾಗಿ ಹೋಗಿತ್ತು. ಆಗ ಕಣ್ಣು ಬಿಟ್ಟ ಶಿವರಾಯನ ಯೋಗವೇನೋ, ತನ್ನ ಹತ್ತನೇ ವಯಸ್ಸಿಗೆ ಅದೇ ಕಣ್ಣುಗಳಿಂದ ಸುಳ್ಯದ ಹೆದ್ದಾರಿಯಲ್ಲಿ ಬಂದ ಅದೇ ದೈವಸ್ವರೂಪಿ ಗಾಂಧಿಯನ್ನು ನೋಡುವ ಅನಂತಭಾಗ್ಯ ಅವನದಾಯಿತು. ಮನಸ್ಸು ಗಾಂಧಿ ಹಿಂದೆ ಚಲಿಸಿತು. ಅವರು ನಡೆದ ಹರವಿಗೆ ನಡೆಯಿತು. ಏರಿದ ಎತ್ತರಕ್ಕೆ ಹಾರಿತು, ಬಿತ್ತರಕೆ ಬಿಚ್ಚಿಕೊಂಡಿತು. ಶಿವರಾಯ ಸ್ವಾತಂತ್ರ್ಯ ಹೋರಾಟಗಾರರ ಸಾಲಿಗೆ ಸೇರಿಕೊಂಡ.

ಇದಕ್ಕೆ ಒತ್ತಾಸೆ ಒದಗಿಸಿದ್ದು ಆತನಿಗೆ ಹವ್ಯಾಸವಾಗಿ ಬಂದ ಓದುವ ಗುಣ ಮತ್ತು ಬರೆಯುವ ಕಲೆ. ಹತ್ತರ ಎಳೆವೆಯಲ್ಲೇ ಮುಗ್ಧವಾಗಿ ಬರೆದ ಒಂದು ಪುಟ್ಟ ನ್ಯೂಸ್ ರಿಪೋರ್ಟ್ ತರಹದ್ದು ಅಂದಿನ ಪ್ರಮುಖ ಪತ್ರಿಕೆಯೊಂದರಲ್ಲಿ ಅಚ್ಚಾಗುವ ಮೂಲಕ ಒಬ್ಬ ದೊಡ್ಡ ಭಾವಿ ಸಾಹಿತಿಯನ್ನು ಗುರುತಿಸಿತು. ಇದರಿಂದ ಶಿವರಾಯನೊಳಗಿದ್ದ ಪುಟ್ಟ ಸಾಹಿತಿ ಚಿಗಿತುನಿಂತ. ಶಿವರಾಯನಿಗೆ ಹಂತಹಂತವಾಗಿ ಪತ್ರಕರ್ತನ, ಅಂಕಣಕಾರನ ಸ್ಥಾನ.

ಜೊತೆಗೆ, ಅಜ್ಜಿಯಿಂದ ಕಥೆ ಹೇಳಿಸಿಕೊಳ್ಳುವ ಹತ್ತು ಹನ್ನೆರಡರ ವಯಸ್ಸಿನಲ್ಲೇ ಶಿವರಾಯ ಪ್ರಕಟಣೆಗೆ ಯೋಗ್ಯವಾದ ತನ್ನ ಮೊದಲ ಕಥೆ ಬರೆದುಬಿಟ್ಟಿದ್ದ ಎನ್ನುವುದು ಇನ್ನೂ ಗಮನಾರ್ಹ.

ಇದರ ಜೊತೆಗೆ ಬದುಕು ಒಡ್ಡಿದ ಸಂಕಷ್ಟಗಳ ಮಾಲೆ ಅವರನ್ನು ದೃಢಗೊಳಿಸುತ್ತಿತ್ತು. ಒಂದು ರೀತಿಯಲ್ಲಿ ಬದುಕೇ ಅವರ ಪಾಲಿನ ವಿಶ್ವವಿದ್ಯಾನಿಲಯ. ಕಲ್ಲುಮುಳ್ಳಿನ ಹಾದಿಯಲ್ಲಿ ಬರಿಗಾಲಿನಲ್ಲಿ ನಡೆದಂತೆ ಕ್ರಮಿಸಿದ ಬಾಲ್ಯ. ಅದರ ಮೇಲೇ ಹೆಜ್ಜೆಯೂರಿ ನಡೆದು ತಾವೂ ನಿರೀಕ್ಷಿಸದ ಗಮ್ಯ ತಲುಪಿದರು.

ನಿರಂಜನರ ಕೃತಿಗಳನ್ನು ಕುರಿತು ಆರಂಭಿಸುವ ಮುನ್ನ ಈ ಪುಟ್ಟ ಪೀಠಿಕೆಯ ಮೂಲಕ ಅವರೊಳಗಿದ್ದ 'ಬರೆಯುವ ತುಡಿತ'ವನ್ನು, 'ಚಿಂತಿಸುವ ಎದೆ ಮಿಡಿತ'ವನ್ನು ಗುರುತಿಸುತ್ತಿದ್ದೇನೆ. ಪತ್ರಕರ್ತ ಹಾಗೂ ಸಾಹಿತಿ ನಿರಂಜನರು 20ನೇ ಶತಮಾನದ ಪ್ರಮುಖ ಲೇಖಕ ಮತ್ತು ಪ್ರಗತಿಪರ ಚಳವಳಿಯ ಮುಂದಾಳತ್ವ ವಹಿಸಿದ್ದ ವಿಚಾರವಾದಿ. ಮೊದಲೇ ಹೇಳಿದಂತೆ ಗಾಂಧೀಜಿ, ಕಾರ್ಲ್ ಮಾರ್ಕ್ಸ್, ವ್ಲಾಡಿಮಿರ್ ಲೆನಿನ್ ವಿಚಾರಧಾರೆಗಳಿಂದ ಪ್ರಭಾವಿತರಾದವರು. ಭೂಮಿ ಹೋರಾಟದ ಬಗ್ಗೆ ಅವರು ಬರೆದ ಕೆಲವು ಕಾದಂಬರಿಗಳು ಕನ್ನಡ ಸಾರಸ್ವತ ಲೋಕದ ಮೈಲಿಗಲ್ಲುಗಳೆಂದೇ ಗುರುತಿಸಿಕೊಂಡಿವೆ. ಇಂತಹ ಕ್ರಾಂತಿಕಾರಿ ಮನಃಸ್ಥಿತಿ ಇದ್ದದ್ದರಿಂದಲೇ ಗಾರ್ಕಿಯ ದಿ ಮದರ್ ಗೆ ಅವರು ಮನಸೋಲುತ್ತಾರೆ. ಸುಮಾರು ಐದು ದಶಕಗಳ ಕಾಲ ಸಮೃದ್ಧವಾದ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದ ನಿರಂಜನರು, ಕಾದಂಬರಿ, ಸಣ್ಣ ಕಥೆಗಳು, ನಾಟಕಗಳು, ಜೀವನ ಕಥನಗಳು, ರಾಜಕೀಯ ವ್ಯಾಖ್ಯಾನಗಳು ಮತ್ತು ಭಾಷಾಂತರಗಳನ್ನು ರಚಿಸುತ್ತಾರೆ. ಯುವಕರಿಗಾಗಿ ಸುಮಾರು 7 ಸಂಪುಟಗಳ ಜ್ಞಾನ ಗಂಗೋತ್ರಿ ಮತ್ತು 25 ಸಂಪುಟಗಳ ಪ್ರಪಂಚದ ಮಹತ್ತರವಾದ ಕಥೆಗಳ ಸಂಕಲನಗಳನ್ನು ಹೊರತರುತ್ತಾರೆ. ಬಹುಶಃ ಅವರಿಗೆ ಪಾರ್ಶ್ವವಾಯು ತಗುಲದೇ ಹೋಗಿದ್ದರೆ ಅವರಿಂದ ಇನ್ನೂ ಸ್ವಲ್ಪ ನಿರೀಕ್ಷಿಸಬಹುದಿತ್ತು ಎನಿಸುತ್ತದೆ. 25 ಕಾದಂಬರಿಗಳು, ಕಾದಂ, 10 ಕಥಾಸಂಗ್ರಹಗಳು, 5 ನಾಟಕಗಳು, 4 ಬಾನುಲಿ ರೂಪಕಗಳೂ ಅವರ ದಾಖಲೆಯಲ್ಲಿವೆ. ಅವರ ಭಾಷಾಂತರಗಳು ಅಪೂರ್ವವಾಗಿವೆ. ರಾಜಕೀಯ ಲೇಖನಗಳು, ಸಂಪಾದಿತ ಕೃತಿಗಳು ಹೀಗೆ ಎಲ್ಲಕ್ಕಿಂತ ಮಿಗಿಲಾಗಿ, ಅವರ ಅಂಕಣಗಳ ಸಂಗ್ರಹ ಪುಷ್ಪಹಾರ ಹಾಗೂ ಸಾಧನಾ ಸಂಚಯ ವಿಶಿಷ್ಟವಾಗಿವೆ. ಸುಮಾರು 2,000 ಲೇಖನಗಳನ್ನು ಅಂಕಣಗಳಲ್ಲಿ ಬರೆದಿದ್ದಾರೆ. ಜನಪ್ರಗತಿ ಪತ್ರಿಕೆಗೆ, ಸಾಧನಾ ಎನ್ನುವ ಗೆಳತಿಯನ್ನು ಕಾಲ್ಪನಿಕವಾಗಿ ಎನ್ನುವಂತೆ ರೂಪಿಸಿಕೊಂಡು ಅವಳನ್ನುದ್ದೇಶಿಸಿ ಬರೆಯುತ್ತಿದ್ದ ಪತ್ರಗಳ ಸ್ವರೂಪದ ಲೇಖನಗಳು ಪತ್ರಿಕೋದ್ಯಮ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತೆರೆಸಿಕೊಡುತ್ತದೆ. ಸಾಧನಾ ಎನ್ನುವ ಗೆಳತಿ ಕಾಲ್ಪನಿಕವೇ ಆದರೂ ಬರೆದ ಪತ್ರದಲ್ಲಿ ಅವರ ಕನಸಿನ ಕನ್ಯೆ ವೆಂಕಟಲಕ್ಷ್ಮಿಯನ್ನೂ ಉದ್ದೇಶಿಸಿ ಬರೆದ ಪತ್ರಗಳಿವೆ. ಹೀಗೆ ತಮ್ಮ ವೈಯಕ್ತಿಕ ಪ್ರೇಮಾಭಿವ್ಯಕ್ತಿಗೂ ಅಂಕಣಪತ್ರದ ಮಾರ್ಗವನ್ನೇ ಕಲಾತ್ಮಕವಾಗಿ ಬಳಸಿಕೊಂಡಿರುವುದು ಅವರ ಚತುರತೆಗೆ, ಜಾಣ್ಮೆಗೆ ಸಾಕ್ಷಿ.

1942ರಲ್ಲಿ ಪತ್ರಿಕೋದ್ಯಮಕ್ಕೆ ಕಾಲಿಟ್ಟ ನಿರಂಜನರು ರಾಷ್ಟ್ರಬಂಧು ಪತ್ರಿಕೆಯಲ್ಲಿ ಲೇಖನಗಳನ್ನು ಬರೆಯಲು ಆರಂಭಿಸಿದರು. ಬೆಂಗಳೂರು ಮೈಸೂರು ನಗರಗಳಲ್ಲಿ ಪೂರ್ಣಕಾಲಿಕ ಪತ್ರಕರ್ತರಾಗಿ ದುಡಿದ್ದಿದ್ದಾರೆ. ಬಸವರಾಜ ಕಟ್ಟೀಮನಿ ಸಂಪಾದಕರಾಗಿದ್ದ ಉಷಾ ಪತ್ರಿಕೆಯಲ್ಲಿ ಇವರು ನಿರಂತರ ಲೇಖನಗಳನ್ನು ಬರೆಯುತ್ತಿದ್ದರು. ಚಿತ್ರಗುಪ್ತ, ತಾಯಿನಾಡು ಪತ್ರಿಕೆಗಳಿಗೂ ನಿಯಮಿತವಾಗಿ ಕತೆ ಮತ್ತು ಲೇಖನಗಳನ್ನು ಬರೆಯುತ್ತಿದ್ದರು. ಕರ್ಮವೀರ ವಾರಪತ್ರಿಕೆಗೆ ರಾಜಧಾನಿಯಿಂದ ಅಂಕಣ ಬರೆಯುತ್ತಿದ್ದ ನಿರಂಜನರು, ಪ್ರಜಾಮತ ಪತ್ರಿಕೆಯಲ್ಲಿ ಸಹಾಯಕ ಸಂಪಾದಕರಾಗಿ ಕೆಲವು ಕಾಲ ಕಾರ್ಯನಿರ್ವಹಿಸಿದ್ದರು. ಕಮ್ಯೂನಿಸ್ಟ್ ಪಕ್ಷದ ಜನಶಕ್ತಿಯ ಸಂಪಾದಕರಾಗಿ ದುಡಿದ ಅವರು, 'ತಾಯಿನಾಡು' ಮತ್ತು 'ಚಿತ್ರಗುಪ್ತ' ಪತ್ರಿಕೆಗಳಿಗೆ 50–60ರ ದಶಕದಲ್ಲಿ ಪುಸ್ತಕ ವಿಮರ್ಶೆಗಳನ್ನು ಮಾಡುತ್ತಿದ್ದರು.

ನಿರಂಜನರ ಕೃತಿಗಳನ್ನು ಕುರಿತು ಚರ್ಚಿಸುವಾಗ ಮೊದಲು ಅವರ ಕಾದಂಬರಿಗಳತ್ತ ಗಮನ ಹರಿಸಬೇಕು. ವೈವಿಧ್ಯಮಯ ಕ್ಯಾನ್ವಾಸ್‌ನಲ್ಲಿ ಅವರು ಕಟ್ಟಿಕೊಟ್ಟಿರುವ ಚಿತ್ರಣಗಳು ಪಾತ್ರಗಳು ನಿರಂಜನೀಯ ಅನಿಸಬಹುದು. ಆದರೆ, ವಿಚಾರಯೋಗ್ಯ ಅನಿಸುವಂತೆ ಮಾಡುತ್ತದೆ. ನಿರಂಜನರು ಸಾಹಿತ್ಯವನ್ನು ಮಹಾಪೂರವಾಗಿಸಿ ಕೊಂಡು ಬರೆಯುವ ಕಾಲಘಟ್ಟ ಅಂದರೆ 50–60ರ ದಶಕದ ಮಧ್ಯಭಾಗದ ಸರಿಸುಮಾರು ಹತ್ತುವರ್ಷಗಳು ಅವರ ಹರಿಸಿದ ಪ್ರಗತಿಶೀಲ ಧೋರಣೆಯ ಚಿಂತನಧಾರೆ ಆ ಕಾಲಮಾನಕ್ಕೆ ಅತಿನೂತನವಾಗಿತ್ತು. ಮತ್ತೊಂದೆಡೆ ಆ ಧೋರಣೆಯ ಪ್ರಸರಣವೂ ವೇಗ ಪಡೆದುಕೊಂಡಿತ್ತು. ನಿರಂಜನರ ದೃಷ್ಟಿಯಲ್ಲಿ ಪ್ರಗತಿಶೀಲತೆಯ ಧೋರಣೆ ಎಂದರೆ –ಸತ್ಯಾನ್ವೇಷಣೆಯತ್ತ ಮುಖಮಾಡುವುದು. ಬೌದ್ಧಿಕ ನಿರಂಕುಶತೆಯನ್ನು ಪ್ರತಿಪಾದಿಸುವುದು. ರಮ್ಯತೆಯ ನವಿರು ಪರದೆಯನ್ನು ಹಾಸಿ ಅರಮ್ಯ ಬದುಕಿನ ಚಿತ್ರಣವನ್ನು ಮರೆಮಾಚಿಬಿಡುವುದಲ್ಲ; ಕಾಲ್ಪನಿಕ ಸೌಂದರ್ಯವನ್ನು ತೋರ್ಪಡಿಸುವುದಲ್ಲ. ಅದು ಅಸತ್ಯ, ಅಸ್ವಚ್ಛ. ಆ ನವಿರು ಹಾಸನ್ನು ಓಸರಿಸಿ ಶತಮಾನಗಳ ಕಾಲ ಮನಸ್ಸನ್ನು ಆವರಿಸಿರುವ ಜೇಡರಬಲೆಗಳನ್ನು, ಹೊಲಸು ತಿಪ್ಪೆರಾಶಿಗಳನ್ನು, ಕೊಚ್ಚೆಕೊಳಕನ್ನು ತೊಡೆದು ಸ್ವಚ್ಛತಾಕರ್ಮಿಗಳಂತೆ ಝಾಡಮಾಲಿಗಳಂತೆ ಜಲಗಾರರಂತೆ ಶುದ್ಧಗೊಳಿಸಿ ನಿಜವಾದ ರಮ್ಯತೆಯನ್ನು ಸೌಂದರ್ಯ ಸನ್ನಿಧಿಯನ್ನು ಸಾಧಿಸುವುದು.? ಬಹುಶಃ ಇಂತಹ ಧೋರಣೆಗಳಿಗೆ ಅವರು ಬಾಲ್ಯದಲ್ಲಿ ಅಭ್ಯಸಿಸಿದ ಬೆಂಗಾಲಿ ಕಾದಂಬರಿಗಾರರ ಆಲೋಚನಾ ಕ್ರಮ, ಕಾರ್ಲ್ ಮಾರ್ಕ್ಸ್, ಲೆನಿನ್ ರಂತಹ ಹೊಸ ಅಲೆಯ ಪಾಶ್ಚಾತ್ಯ ಚಿಂತಕರ ಪ್ರಭಾವ ಕಾರಣವೆನ್ನಬಹುದು. ವಿದೇಶಿ ಚಳಚಳಿಗಳ, ಚಿಂತನೆಗಳ ಪ್ರಭಾವಕ್ಕೆ ಸಿಲುಕಿದರೂ ಗಾಂಧಿವಾದಿಯಾದ ನಿರಂಜನರು ಅಪ್ಪಟ ಸ್ವದೇಶೀ ಆಲೋಚನೆಗಳನ್ನು ಮೈಗೂಡಿಸಿಕೊಂಡಿದ್ದವರು ಅನ್ನುವುದನ್ನು ತಳ್ಳಿಹಾಕಲಾಗುವುದಿಲ್ಲ. ಬದಲಿಗೆ, ಎರಡು ವಿಭಿನ್ನ ಸಾಂಸ್ಕೃತಿಕ ಚಿಂತನೆಗಳ ಮಧ್ಯೆ ಅವರ ಆಲೋಚನಾ ಕ್ರಮ ಅರಳಿದ ಬಗ್ಗೆ ಹೆಚ್ಚಿನ ಗಮನ ಮತ್ತು ಮಹತ್ವ ನೀಡಬೇಕು.

ಇಂತಹ ಪ್ರಗತಿಗಾಮಿ ಚಿಂತನೆಯ ಹಿನ್ನೆಲೆಯೊಂದಿಗೆ ಕಾಂದಂಬರಿ ರಚನೆಗಿಳಿದ ನಿರಂಜನರ ಕೃತಿಗಳ ಪೈಕಿ ಚಿರಸ್ಮರಣೆ ವ್ಯಾಪಕ ಜನಮನ್ನಣೆ ಗಳಿಸುತ್ತದೆ. ಚಿರಸ್ಮರಣೆ ಹೊರಬರುವುದು 1955ರಲ್ಲಿ. ಆ ಹೊತ್ತಿಗಾಗಲೇ

ನಿರಂಜನರು 9 ಕಾದಂಬರಿಗಳನ್ನು ಹೊರತಂದಿರುತ್ತಾರೆ. ಆದರೆ ಚಿರಸ್ಮರಣೆ, ಓದುಗನ ಮನಸ್ಸಿನಲ್ಲಿ ಚಿರಸ್ಮರಣೀಯವಾಗಿ ಉಳಿಯುವಂತೆ ಮಾಡುವುದು ಆ ಕಾದಂಬರಿಯ ಕೇಂದ್ರಶಕ್ತಿ ಮಾಸ್ತರ್ ಪಾತ್ರ. ರೈತ ಹೋರಾಟಕ್ಕೆ ಸಂಬಂಧಿಸಿದ ಕಯ್ಯೂರು ಎನ್ನುವ ಹಳ್ಳಿಯ ಕಥೆಯಿದು. ಇದೊಂದು ಚಾರಿತ್ರಿಕ ಘಟನೆಯನ್ನಾಧರಿಸಿದ ಕಥಾವಸ್ತುವನ್ನು ಹೊತ್ತಿದೆ.

ಕಯ್ಯೂರು ಎನ್ನುವ ಒಂದು ಗ್ರಾಮದ ಸಾಮಾಜಿಕ ಚಿತ್ರಣವನ್ನೇ ಸೃಷ್ಟಿಸಿ ಅಲ್ಲಿ ಒಂದೆಡೆ ಬ್ರಿಟಿಷರ ಸಾಮ್ರಾಜ್ಯಶಾಹಿ ಧೋರಣೆ ಮತ್ತೊಂದೆಡೆ ಸ್ಥಳೀಯ ಜಮೀನುದಾರರ ಗೇಣಿಪದ್ಧತಿ ನಡುವೆ ಸಿಲುಕಿ ನಲುಗುವ ರೈತಾಪಿ ಬದುಕಿನ ಕರಾಳತೆಗೆ ಸವಾಲೆಸೆಯುವಂತೆ ಪ್ರತಿಭಟನಾತ್ಮಕ ಸೊಲ್ಲು ಎತ್ತಿದ್ದಾರೆ. ಅದನ್ನು ಹೆಣೆಯುವ ನಿರಂಜನ ತಂತ್ರವಾದರೂ ವಿಶಿಷ್ಟವೆನಿಸುತ್ತದೆ. ಮಾನವತೆಯ ಪ್ರತಿರೂಪದಂತೆ ಕಾಣಬರುವ ಮಾಸ್ತರರ ಪಾತ್ರದ ಮೂಲಕ ಸಾಮಾಜಿಕ ತಿಳಿವಳಿಕೆಯನ್ನು ಪಾಠದ ರೂಪದಲ್ಲೇ ಜನರಿಗೆ ತಿಳಿಸಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಇದರ ಜೊತೆಗೆ ನಶಿಸಿಹೋಗುತ್ತಿರುವ ಮಾನವೀಯ ಸಂಬಂಧಗಳ ತೆಳುವಾದ ಸೂಕ್ಷ್ಮ ಪದರುಗಳನ್ನು ಎಳೆಎಳೆಯಾಗಿ ಬಿಡಿಸಿಡುವ ಮೂಲಕ ಕಾದಂಬರಿಯನ್ನೂ ಬೆಳೆಸುತ್ತಾರೆ, ಜೊತೆಗೆ ಒಂದು ಹೋರಾಟದ ಭಾಗವಾಗಿ ಬಂಡಾಯದ ಹಾಗೆ ಸಾಹಿತ್ಯಪ್ರಕಾರವನ್ನೂ ಸೃಷ್ಟಿಸುತ್ತಾರೆ. ಈ ಕೃತಿಯನ್ನು ನೋಡಿದಾಗ ವಿಶ್ವಮಹಾಕ್ರಾಂತಿಗಳ ಸಂದರ್ಭದಲ್ಲಿ ಕಾಣಸಿಗುವ ಮೇಲ್ವರ್ಗ ಕೆಳವರ್ಗಗಳ ನಡುವಿನ ಸಂಘರ್ಷದಂತೆ ತೋರಿಬರುತ್ತದೆ. ಮಾಲಿಕ –ಕಾರ್ಮಿಕರ ನಡುವಿನ ತಿಕ್ಕಾಟವನ್ನು ರೈತ ಹಾಗೂ ಜಮೀನುದಾರರ ಪ್ರತಿಬಿಂಬದಲ್ಲಿ ತೋರಿಸಿದಂತೆ ಭಾಸವಾಗತ್ತದೆ. ಹೀಗೆ ನಿರಂಜನರು ವಿಶ್ವಕ್ರಾಂತಿಯ ಸಂದರ್ಭದಲ್ಲಿ ನಡೆಯುವಂತೆಯೇ ಸಾಹಿತ್ಯದ ಮೂಲಕ ಚಳವಳಿ ಹುಟ್ಟುಹಾಕುವ ತಂತ್ರವನ್ನು ಚಿರಸ್ಮರಣೆ ಕಾದಂಬರಿ ಮೂಲಕ ಮಾಡುತ್ತಾರೆ. ಜೊತೆಗೆ ನಮ್ಮ ದೇಶದೊಳಗೆ ಪ್ರಚಲಿತವಿದ್ದ ಗೇಣಿದಾರಿ ಪದ್ಧತಿಗೆ ಮೂಗುದಾರ ಹಾಕುವ ಕೆಲಸವನ್ನೂ ಅವರು ಮಾಡುತ್ತಾರೆ. ಕಾದಂಬರಿಯೊಂದು ಗುಲಾಮಗಿರಿಯ ವಿರುದ್ಧ ಸಾಮಾಜಿಕ ಹೋರಾಟದ ಪ್ರಜ್ಞೆಯೊಂದನ್ನು ಸಮಾಜದಲ್ಲಿ ಬಿತ್ತುವಲ್ಲಿ ಯಶಸ್ವಿಯೆನಿಸುತ್ತದೆ.

ಮತ್ತೊಂದು ವಿಶೇಷವೆಂದರೆ ಈ ಕಾದಂಬರಿಯಲ್ಲಿ ಬರುವ ಪಾತ್ರಗಳಾಗಲೀ, ಸನ್ನಿವೇಶಗಳಾಗಲೀ ಯಾವುದೋ ಒಂದು ಡಾಕ್ಯುಮೆಂಟರಿಯ ಹಾಗೆ ದಾಖಲೆ, ಸಾಕ್ಷಿಗಳನ್ನು ಒದಗಿಸುತ್ತ ಯಾಂತ್ರಿಕವಾಗಿ ಸಾಗದೆ, ಮನುಷ್ಯತ್ವ, ಮಮತೆ, ಕರುಣೆ, ಅನುಕಂಪ, ಪ್ರೀತಿ, ರಾಗದ್ವೇಷಗಳ ಭಾವಸುರುಳಿಗಳ ಜೊತೆ ಸುತ್ತುತ್ತದೆ. ಜೊತೆಗೆ, ಇಲ್ಲಿನ ಸಂಭಾಷಣೆ ಉಲ್ಲೇಖನೀಯ ಮಾತುಗಳಂತೆಯೂ ಉಳಿಯುತ್ತವೆ.

ನಿರಂಜನರು ಸುಮಾರು 50 ಸ್ವತಂತ್ರ ಕೃತಿಗಳನ್ನು ಹೊರತಂದಿದ್ದಾರೆ. ಅದ್ಭುತ ವಿಶ್ವಸಾಹಿತ್ಯವನ್ನು ಕನ್ನಡಕ್ಕೆ ತಂದಿದ್ದಾರೆ. ನಿರಂಜನರ ಕೃತಿಗಳನ್ನು ಕುರಿತು ಒಂದಿಷ್ಟಾದರೂ ಆಳಕ್ಕಿಳಿದು ಮಾತನಾಡಬೇಕೆಂದರೆ 15–20 ನಿಮಿಷ ಸಾಕೆನಿಸುವುದಿಲ್ಲ. ಸ್ಥೂಲವಾಗಿ ಹೇಳುವುದಾದರೆ, ಅವರ ಬಹುತೇಕ ಎಲ್ಲ ರಚನೆಗಳೂ ಒಂದಲ್ಲಾ ಒಂದು ಸಾಮಾಜಿಕ ಅನ್ಯಾಯದ ವಿರುದ್ಧ ಸಿಡಿಯುವ ಕಥಾವಸ್ತುವನ್ನೇ ಒಳಗೊಂಡಿವೆ. ಆದರೆ ಸಿಡಿಯುವ ಪರಿ ಗುಂಡು ಸಿಡಿದಂತಾಗದೆ ಮೊಗ್ಗು ಸಿಡಿದಂತೆ ಪ್ರಫುಲ್ಲತೆ ಕಡೆಗೆ ಆದರೆ ಪ್ರಖರತೆಯೊಂದಿಗೆ ನಡೆಯುತ್ತದೆ. ಬನಶಂಕರಿ ಕಾದಂಬರಿಯಲ್ಲಿ ಕಥಾನಾಯಕಿ ಅಮ್ಮಿ ಒಬ್ಬಳು ಹೆಣ್ಣಾದ ಕಾರಣಕ್ಕೆ ಧಾರ್ಮಿಕ ಕಟ್ಟುಪಾಡುಗಳ ಜೈಲಿನಲ್ಲಿ ಖೈದಿಯಂತೆ ಬದುಕು ನಡೆಸುತ್ತಲೇ ಅದನ್ನು ಪ್ರತಿರೋಧಿಸುವ ಗುಣವನ್ನೂ ಹೊಂದಿರುತ್ತಾಳೆ. ತನ್ನ ಸ್ವಾತಂತ್ರ್ಯ ತನ್ನದು ಎನ್ನುವ ನಿರ್ಧಾರದ ಅಡಿಯಲ್ಲಿ ಎರಡೆರಡು ಬಾರಿ ವಿಧವೆಯಾದರೂ ಅವಳೊಂದು ನಿರ್ಧಾರ ತೆಗೆದುಕೊಳ್ಳುವ ಸ್ಥಾನವನ್ನು ತಾನಾಗಿಯೇ ಸ್ಥಾಪಿಸಿಕೊಳ್ಳುತ್ತಾಳೆ. ಹೀಗೆ ಬನಶಂಕರಿ ಕಾದಂಬರಿ ಹೆಣ್ಣುಮಕ್ಕಳ ಸ್ವತಂತ್ರ ಚಿಂತನಾಕ್ರಮ, ತೀರ್ಮಾನ ತೆಗೆದುಕೊಳ್ಳುವ ಸ್ಥೈರ್ಯವನ್ನು ಪ್ರತಿಪಾದಿಸುವ ಕೃತಿಯಾಗುತ್ತದೆ.

ಈಜಿಪ್ಟ್ ನೈಲ್ ನಾಗರೀಕತೆಯ ಪೆರೋ ಅಧಿಪತ್ಯದ ಮೊತ್ತಮೊದಲ ನಾಗರೀಕತೆಯ ಭೂಹೋರಾಟದ ಕಥೆಯುಳ್ಳ ಮೃತ್ಯುಂಜಯ ಅತ್ಯುತ್ತಮ ಕಾದಂಬರಿಯೆಂದೇ ಓದುಗರ ಸ್ಮರಣೆಯಲ್ಲಿ ಉಳಿದಿದೆ. ನಿರಂಜನರ ಲೇಖನಿಯಲ್ಲಿ ಮೊದಲು ಬಂದದ್ದು ವಿಮೋಚನೆ. ನಂತರ ಅಭಯ, ದೂರದ ನಕ್ಷತ್ರ, ರಂಗಮ್ಮನ ವಠಾರ ಸೌಭಾಗ್ಯ, ಪಾಲಿಗೆ ಬಂದ ಪಂಚಾಮೃತ, ಏಕಾಂಗಿನಿ, ಕೊನೇ ನಮಸ್ಕಾರ, ಮಿಣುಕುಹುಳ, ವಿಲಾಸಿನಿ, ಕಲ್ಯಾಣಸ್ವಾಮಿ, ದೀಕ್ಷೆ, ನವೋದಯ ಅಂಜನ, ಐದು ಭಾಗಗಳಲ್ಲಿ ಬಿಡುಗಡೆಯಾದ ಟೀಪೂ, ತೊಟ್ಟಿಲು ತೂಗದ ಕೈ, ಹೆಣ್ಣಾಗಿ ಕಾಡಿತ್ತು ಮಾಯೆ, ಸ್ಮರಣೆಯೊಂದೇ ಸಾಲದೇ, ಬಂಗಾರದ ಜಿಂಕೆ, ಸ್ವಾಮಿ ಅಪರಾಂಬರ ಮುಂತಾದ ಅತ್ಯದ್ಭುತ ಕಾದಂಬರಿಗಳು ರಚನೆಯಾಗಿವೆ. ಇವೆಲ್ಲದರಲ್ಲೂ ಒಂದಲ್ಲಾ ಒಂದು ಬಗೆಯ ಪ್ರತಿರೋಧಕ ಅಂಶಗಳೇ ಸಾರಕೇಂದ್ರವಾಗಿವೆ. ಹೆಣ್ಣಿನ ಶೋಷಣೆಯ ವಿರುದ್ಧ ಧ್ವನಿಯಿದೆ; ರೈತನ ಅಳಲಿಗೆ ನಾಲಗೆಯಿದೆ; ಬ್ರಿಟಿಷರ ವಿರುದ್ಧದ ಕಹಳೆಯಿದೆ; ಅರಸೊತ್ತಿಗೆಯ ವೈಪರೀತ್ಯಗಳ ಹೊಯ್ದಾಟವಿದೆ; ನಿರಪರಾಧಿಯ ಒಳತೋಟಿಯಿದೆ; ಆರ್ಥಿಕ ಅಸಮಾನತೆಯ ವಿರುದ್ಧ ಕೂಗಿದೆ ಹೀಗೆ ಒಂದೊಂದು ಕಾದಂಬರಿಯೂ ಸಮಾಜದ ಒಂದೊಂದು ವಿರೂಪವನ್ನು ಎತ್ತಿಕೊಂಡು ಅದಕ್ಕೆ ಪ್ಲಾಸ್ಟಿಕ್ ಸರ್ಜರಿ ಮಾಡುವ ಕೆಲಸಕ್ಕೆ ಕೈಹಾಕುತ್ತದೆ.

ರಂಗಮ್ಮನ ವಠಾರ ಕೃತಿಯಂತೂ "ವಠಾರ ಜೀವನವೆಂದರೆ 'ಗಟಾರ' ಜೀವನವಲ್ಲ" ಎಂಬುದನ್ನು ಬಿತ್ತರಿಸುವ ಶ್ರೇಷ್ಠ ಕೃತಿ. 274 ಪುಟಗಳ ಕೈ ಹೊತ್ತಿಗೆ. ಬೆಂಗಳೂರಿನಂತಹ ನಗರದಲ್ಲಿ, ಮಧ್ಯಮ ವರ್ಗದ ಜನರು ವಸತಿಗಾಗಿ 'ಕಡಿಮೆ' ಬಾಡಿಗೆಯ ವಠಾರಗಳನ್ನು ಅವಲಂಭಿಸಿ, ಎಂತಹ ಕಷ್ಟಗಳನ್ನೂ ನುಂಗಿಕೊಂಡು ಜೀವನ ನಡೆಸುತ್ತಿರುವುದನ್ನು ನಿರಂಜನರು ಇಲ್ಲಿ ಹೃದಯಂಗಮವಾಗಿ ವಿವರಿಸಿದ್ದಾರೆ. ಇಂತಹ ದುರ್ಭರ ಸ್ಥಿತಿಯಲ್ಲೂ ಜೀವನದ ಕಹಿಯನ್ನು ಮರೆತು ತಮ್ಮ ಪ್ರೇಮದ ಬಾಳ್ವೆಯಿಂದ, ವಿನೋದ ರಸಿಕತೆಯಿಂದ ವಾತಾವರಣವನ್ನೇ ಆಹ್ಲಾದಗೊಳಿಸಬಹುದೆಂಬುದಕ್ಕೆ ಉತ್ತಮ ನಿದರ್ಶನವಾಗಿ ತೋರಿಸುತ್ತಾರೆ. ಕಾದಂಬರಿಗಳಲ್ಲದೆ ನಿರಂಜನರು ಅನೇಕ ಕಥಾ ಸಂಕಲನಗಳನ್ನು ಹೊರತಂದಿದ್ದಾರೆ. ಸಂಧಿಕಾಲ, ರಕ್ತ ಸರೋವರ, ಅನ್ನಪೂರ್ಣಾ, ಕೊನೆಯ ಗಿರಾಕಿ, ಕಾತ್ಯಾಯಿನಿ, ವಾರದ ಹುಡುಗ ಇವರ ಪ್ರಮುಖ ಕಥಾ ಸಂಕಲನಗಳು.

ನಿರಂಜನರ ಆತ್ಮೀಯ ಸ್ನೇಹಿತ ಹೆಚ್. ಆರ್.ನಾಗೇಶರಾವ್, ಅವರ ಪತ್ರ ಸಂಕಲನ ಸಂಗ್ರಹ ಮಾಡಿದ್ದಾರೆ. ಸಾಧನಾ ಹಾಗೂ ಪುಷ್ಪಹಾರ ನಿರಂಜನರು ಪತ್ರಿಕೆಗಳಿಗೆ ಬರೆದ ಅಮೂಲ್ಯ ಪತ್ರ ಸಂಕಲನಗಳು. ತಮ್ಮ ಕಲ್ಪನೆಯ ಪ್ರೇಯಸಿ ಸಾಧನಾಳಿಗೆ ಜನಪ್ರಗತಿಯ ಮೂಲಕ ಕಳಿಸಿ ಕೊಟ್ಟ ಮೇಘ ಸಂದೇಶದ ಆರಿಸಿದ ಪತ್ರಗಳ ಸಂಗ್ರಹವಾಗಿದೆ ಈ ಪುಸ್ತಕ. ಐದು ನಿಮಿಷ ಹಾಗೂ ಕಾಲಕ್ಷೇಪ ನಿರಂಜನರ ಲೇಖನ ಸಂಕಲನಗಳು. ಮ್ಯಾಗ್ಸಿಮ್ ಗೋರ್ಕಿಯ ತಾಯಿ, ನೀತಿಕತೆಗಳು, ನನ್ನ ಬಾಲ್ಯ, ಮದುವಣಗಿತ್ತಿ ಅವರ ಭಾಷಾಂತರ ಬರಹ.ಪ್ರಚಲಿತ ಜಗತ್ತಿನಲ್ಲಿ ರಾಜಕೀಯ, ಸಾಮಾಜಿಕ ಕ್ಷೇತ್ರಗಳಲ್ಲಿ, ಪುಸ್ತಕ– ಪತ್ರಿಕಾ ಪ್ರಪಂಚಗಳಲ್ಲಿ, ಸುದ್ದಿಯ ವಿಶ್ವದಲ್ಲಿ ನಡೆದ ವಿವಿಧ ಘಟನೆಗಳನ್ನು, ವರದಿಗಳನ್ನು ತಮ್ಮ ವಿಶಿಷ್ಟ ದೃಷ್ಟಿಕೋನದಿಂದ ವಿಮರ್ಶಿಸುವುದರಲ್ಲಿ, ವಿವೇಚಿಸುವುದರಲ್ಲಿ ನಿರಂಜನರು ಎತ್ತಿದ ಕೈ.

ಯಾವುದೇ ಕ್ಷೇತ್ರದಲ್ಲಿ ಅನ್ಯಾಯವಾಗಿರುವ ವರದಿಗಳು ಕಂಡು ಬಂದರೂ, ಅದರ ಬೆನ್ನು ಹತ್ತಿ ಮೂಲವನ್ನು ಶೋಧಿಸಿ, ನೋವಿನ ಆಳವನ್ನು ಚಿತ್ರಿಸುವುದರಲ್ಲಿ ನಿರಂಜನರು ಸಿದ್ಧಹಸ್ತರಾಗಿದ್ದರು. ಕುತೂಹಲಕರ, ಕೋಲಾಹಲಕರ ಪ್ರಸಂಗಗಳನ್ನೂ ಅವರು ಸುಂದರವಾಗಿ, ಸ್ವಾರಸ್ಯವಾಗಿ ವರ್ಣಿಸುವುದು ವಾಚಕರನ್ನು ಮಂತ್ರಮುಗ್ಧರನ್ನಾಗಿಸುತ್ತಿತ್ತು. ತಮ್ಮ ಕೊನೆಯ ದಿನಗಳಲ್ಲಿ ಅಪಘಾತವೊಂದರಲ್ಲಿ ಮೂಳೆ ಮುರಿದುಕೊಂಡ ಪ್ರಸಂಗವನ್ನೂ ಅವರು ಅತ್ಯಂತ ಹಾಸ್ಯಪೂರ್ಣವಾಗಿ ಬರವಣಿಗೆಯಲ್ಲಿ ಕಟ್ಟಿಕೊಟ್ಟಿದ್ದರು.

ನಿರಂಜನರು ಓದುಗರಿಗೆ ಬದ್ಧರಾಗಿದ್ದ ಲೇಖಕರು ಎನ್ನುವುದು ಮುಖ್ಯ. ಜನರಿಗೆ ಬೌದ್ಧಿಯಿಕಯಿಯವಾಗಿ ಅಗತ್ಯವಿರುವ ಸಾಹಿತ್ಯವನ್ನು ಸೃಷ್ಟಿಯಿಸಿದ್ದಲ್ಲದೆ ಅಂತಹ ದಾಹವನ್ನು ಹುಟ್ಟುಹಾಕಿದ ಮಾರ್ಗಕಾರ ಎಂದೇ ನಾನು ಭಾವಿಸುತ್ತೇನೆ. ಪ್ರಗತಿಶೀಲ ಸಾಹಿತ್ಯ ಹೇಗೆ ಬಂಡಾಯ ಸ್ವರೂಪಿ ಎನ್ನುವುದನ್ನು ಮೊದಮೊದಲಿಗೆ ತೋರಿಸಿಕೊಟ್ಟ ಅಪರೂಪದ ಲೇಖಕ ಅವರು. ಪ್ರಗತಿಗಾಮಿಯಾಗಿದ್ದ ಅವರ ವಾದ ಒಂದು ಪ್ರತ್ಯೇಕ ವಾದವೇ ಆಗಿ 'ನಿರಂಜನವಾದ' ಎನ್ನುವ ರೂಪದಲ್ಲಿ ಇಂದಿಗೂ ನಿಂತಿದೆ ಎಂದು ನಾನು ಭಾವಿಸುತ್ತೇನೆ. ನಂತರದ ಸುಮಾರು ಮೂರು ದಶಕಗಳ ನಂತರ ಬಂಡಾಯ ಸಾಹಿತ್ಯ ಎನ್ನುವುದೇ ಒಂದು ಪ್ರತ್ಯೇಕ ಪ್ರಕಾರವಾಗಿ ನಿಂತಿತಾದರೂ, ಅದರ ಬೀಜ ನಿರಂಜನರ ಸಾಹಿತ್ಯದಲ್ಲೇ ಇತ್ತು ಎನ್ನುವುದನ್ನು ಗುರುತಿಸಬಹುದು. ಬಂಡಾಯ ಸಾಹಿತ್ಯದ ಚಿಂತನೆಯೂ ಕೂಡ ಪ್ರಗತಿಗಾಮಿಯೇ ಆಗಿದೆ, ದಮನಿತರ ಹೋರಾಟದ ಕ್ಲೈಮಾಕ್ಸ್ ಅಥವಾ ತಾರಕಸ್ವರೂಪವೇ ಆಗಿದೆಯಲ್ಲದೆ ಬೇರೆಯಲ್ಲ.

ನಿರಂಜನರಾದರೋ ಸಾಹಿತ್ಯ ರಚನೆಯನ್ನು ಗುರಿಯಾಗಿಸಿಕೊಂಡು ಬರೆದವರಲ್ಲ. ತಮ್ಮ ಸಾಮಾಜಿಕ ಬದಲಾವಣೆಯ ಕಲ್ಪನೆಗಳಿಗೆ ಸಾಹಿತ್ಯವನ್ನು ಮಾಧ್ಯಮವಾಗಿಸಿಕೊಂಡವರು. ಅವರು ಕಂಡ ಕನಸುಗಳಿಗೆ ಸಾಕಾರವೂ ಸಿಕ್ಕದೆ ಇಲ್ಲ. ನಿರಂಜನರನ್ನು ಜನ ಮರೆತುಬಿಟ್ಟರು, ಅವರಿಗೆ ಸಿಗಬೇಕಾದ ಪ್ರಚಾರ ಅಥವಾ ಮೌಲ್ಯ ಸಿಗಲಿಲ್ಲ ಎನ್ನುವ ಕೂಗನ್ನೂ ನಾನು ಕೇಳಿದ್ದೇನೆ.ಆದರೆ ನನಗನಿಸುವಂತೆ, ಪೆನ್ ಈಸ್ ಮೈಟಿಯರ್ ದ್ಯಾನ್ ಸ್ವೋರ್ಡ್ ಅನ್ನುವ ಸಿದ್ದಾಂತದ ನೆರಳಲ್ಲಿ ಸಾಗಿದ ನಿರಂಜನರು ಎಲ್ಲಿಯವರೆಗೆ ಹೋರಾಟ ಎನ್ನುವುದಿರುತ್ತದೋ, ಎಲ್ಲಿಯವರೆಗೆ ಹೋರಾಟದ ಸಾಹಿತ್ಯ ಎನ್ನುವುದಿರುತ್ತದೆಯೋ ಅಲ್ಲಿಯವರೆಗೆ ಅದರ ಹರಿಕಾರರಾಗಿ ಉಳಿದಿರುತ್ತಾರೆ, ಜೀವಂತವಾಗಿರುತ್ತಾರೆ ಎನ್ನುವುದು ನನ್ನ ನಂಬಿಕೆ.

ಈ ದಿನ ಈ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಪಾಲ್ಗೊಂಡು ಮಾತಾಡುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತಶೆಟ್ಟಿ ಬೆಳ್ಳಾರೆ ಅವರಿಗೆ, ಕಾರ್ಯದರ್ಶಿ ಶ್ರೀ ನಾಗರಾಜ್ ಅವರಿಗೆ, ಸಂಘದ ಎಲ್ಲ ಪದಾಧಿಕಾರಿಗಳಿಗೆ, ಗೋಷ್ಠಿಯ ಅಧ್ಯಕ್ಷತೆ ವಹಿಸಿರುವ ಡಾ. ಪುರುಷೋತ್ತಮ ಬಿಳಿಮಲೆಯವರಿಗೆ ಆಭಾರ ಸಲ್ಲಿಸುತ್ತೇನೆ. ಅ



# ಅಕ್ಕಮಹಾದೇವಿ ಮತ್ತು ಬಸವಣ್ಣ ಜಯಂತಿ

'ಕೂಡಲ ಸಂಗಮ, ಕೂಡಲ ಸಂಗಮ, ಕೂಡಲ ಸಂಗಮ ನಾವು ಎಲ್ಲರೂ ಈ ಜಗತ್ತಿನಲ್ಲಿ ಸಂತೋಷದಿಂದ ಬಾಳಿ, ಬದುಕಿ ಕೂಡಲ ಸಂಗಮ ಸೇರೋಣ' ಶ್ರೀ ಪರಮಪೂಜ್ಯ ಜ್ಞಾನಯೋಗಿ ಸಿದ್ದೇಶ್ವರ ಮಹಾಸ್ವಾಮೀಜಿ ಜ್ಞಾನಯೋಗ ಆಶ್ರಮ, ವಿಜಯಪುರ ಇವರು ಬಸವಣ್ಣ ಮತ್ತು ಅಕ್ಕಮಹಾದೇವಿಯವರ  ಸರಳ, ಸುಂದರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ನಮ್ಮ ಬದುಕನ್ನು ಸಂತೋಷದಿಂದ ಕಳೆಯೋಣ ಎಂದು ದೆಹಲಿ ಕರ್ನಾಟಕ ಸಂಘವು ಇದೇ ಏಪ್ರಿಲ್ 30ರಂದು ಆಯೋಜಿಸಿದ್ದ 'ಅಕ್ಕಮಹಾದೇವಿ ಮತ್ತು ಬಸವಣ್ಣ' ಜಯಂತಿ ಕಾರ್ಯಕ್ರಮಮದಲ್ಲಿ ಮಾತನಾಡುತ್ತ ಕರೆಯಿತ್ತರು.

ಶ್ರೀ ಪರಮಪೂಜ್ಯ ಶ್ರೀ ಶಿವರುದ್ರ ಮಹಾಸ್ವಾಮಿಗಳು ಬೇಲಿಮಠ ಇವರೂ ಕೂಡಾ ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಸಂದರ್ಭೋಚಿತವಾಗಿ ಅಕ್ಕಮಹಾದೇವಿ ಮತ್ತು ಬಸವಣ್ಣನವರ ವಚನಗಳ ಆಯ್ದ ತತ್ವಗಳನ್ನು ಅತ್ಯಂತ ಸರಳ ಮತ್ತು ಸುಂದರವಾದ ಭಾಷೆಯಲ್ಲಿ ಉದಾಹರಣೆಗಳ ಸಹಿತವಾಗಿ ನೆರೆದಿದ್ದ ಜನರಿಗೆ ಮನಮುಟ್ಟುವಂತೆ ಈ ಇಬ್ಬರೂ ಮಹಾಸ್ವಾಮಿಗಳು ವಿವರಿಸಿದರು. ಇಂತಹ ಮಹಾನುಭಾವರನ್ನು ಸ್ಮರಿಸಿಕೊಳ್ಳುವಂತಹ ಜನ್ಮದಿನೋತ್ಸವದ ಸಮಾರಂಭವನ್ನು ಅತ್ಯಂತ ಯಶಸ್ವಿಯಾಗಿ ಏರ್ಪಡಿಸಿದ ದೆಹಲಿ ಕರ್ನಾಟಕ ಸಂಘವನ್ನು ಅಭಿನಂದಿಸಿದರು.

ಬಸವ ಸಮಿತಿ ಬೆಂಗಳೂರು, ಇದರ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರು ಮಾತನಾಡುತ್ತ ದೆಹಲಿ ಕರ್ನಾಟಕ ಸಂಘವು ಜಗಜ್ಯೋತಿ ಬಸವಣ್ಣ ಮತ್ತು ಅಕ್ಕಮಹಾದೇವಿಯವರ ಜನ್ಮ ದಿನದ ಅಂಗವಾಗಿ ಇಂತಹ ಒಳ್ಳೆಯ ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧ, ಭಕ್ತಿ ಮತ್ತು ಗೌರವಗಳಿಂದ ಏರ್ಪಡಿಸಿರುವುದು ತುಂಬಾ ಸಂತೋಷವನ್ನುಂಟು ಮಾಡಿದೆ. ಬಸವಣ್ಣ ಮತ್ತು ಅಕ್ಕಮಹಾದೇವಿಯರ ಸರಳ, ಸುಂದರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬಾಳಲು ನಾವೆಲ್ಲರೂ ಪ್ರಯತ್ನಿಸಿದಾಗ ಜೀವನ ಸುಖಮಯವಾಗುವುದರಲ್ಲಿ ಯಾವ ಸಂಶಯವೂ ಇಲ್ಲ ಎಂದು ನುಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಸ್ವಾಗತ ಮತ್ತು ಪ್ರಾಸ್ತಾವಿಕವಾಗಿ ಮಾತನಾಡುತ್ತ ನಾವೆಲ್ಲರೂ ಬಸವಣ್ಣರಾಗಲು ಸಾಧ್ಯವಿಲ್ಲದಿದ್ದರೂ ಅವರು 12ನೇ ಶತಮಾನದಲ್ಲಿ ಬದುಕಿ ಅನುಭವಿಸಿ, ಜಗತ್ತಿಗೆ ನೀಡಿ ಹೋದ ಸರಳ ಸುಂದರ ತತ್ವಗಳನ್ನು ನಮ್ಮ ಜೀವನದಲ್ಲಿ ಪಾಲಿಸಲು ಪ್ರಯತ್ನಿಸಿದರೆ, ಜಗತ್ತು ಸುಂದರವಾದೀತು ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರೊ. ಎಚ್. ಎಸ್. ಶಿವಪ್ರಕಾಶ್ ಅವರು ಮಾತನಾಡುತ್ತ ದೆಹಲಿ ಕರ್ನಾಟಕ ಸಂಘ ಏರ್ಪಡಿಸುತ್ತಾ ಬಂದಿರುವ ಬಸವಣ್ಣ ಮತ್ತು ಅಕ್ಕಮಹಾದೇವಿಯವರಂತಹ ಶಿವಶರಣರ ಜನ್ಮದಿನೋತ್ಸವವು ಈ ಬಾರಿ ಶ್ರೀ ಪರಮಪೂಜ್ಯ ಜ್ಞಾನಯೋಗಿ ಸಿದ್ದೇಶ್ವರ ಮಹಾಸ್ವಾಮೀಜಿ ಜ್ಞಾನಯೋಗ ಆಶ್ರಮ, ವಿಜಯಪುರ ಮತ್ತು ಶ್ರೀ ಪರಮಪೂಜ್ಯ ಶ್ರೀ ಶಿವರುದ್ರ ಮಹಾಸ್ವಾಮಿಗಳು, ಬೇಲಿಮಠ ಈ ಇಬ್ಬರು ಸ್ವಾಮಿಗಳ ಸಾನಿಧ್ಯ ಮತ್ತು ಶ್ರೀ ಅರವಿಂದ ಜತ್ತಿಯವರಂತಹ ಉಪಸ್ಥಿತಿಯಿಂದಾಗಿ ಅತ್ಯಂತ ಅರ್ಥಗರ್ಭಿತವಾದಂತಹ ಕಾರ್ಯಕ್ರಮವಾಗಿದೆ ಎಂದು ನುಡಿದರು.

ಇದೇ ಕಾರ್ಯಕ್ರಮದಲ್ಲಿ ಹುಲ್‌ಕುಂಠೇಮಠ ಶಿವಮೂರ್ತಿ ಶಿವಪ್ರಕಾಶ್ ಅವರಿಗೆ ಕುಸುಮಾಗ್ರಜ ರಾಷ್ಟ್ರೀಯ ಭಾಷಾ ಸಾಹಿತ್ಯ ಪುರಸ್ಕಾರ' ಲಭಿಸಿದ್ದಕ್ಕಾಗಿ ಸಂಘದ ಪರವಾಗಿ ಅಭಿನಂದಿಸಲಾಯಿತು. ಈ ಪ್ರಶಸ್ತಿಯು ಒಂದು ಲಕ್ಷ ರೂಪಾಯಿ ನಗದು ಮತ್ತು ಸಮ್ಮಾನ ಚಿಹ್ನೆ-ಸನ್ಮಾನಪತ್ರವನ್ನು ಒಳಗೊಂಡಿದೆ.

ಬಸವ ಸಮಿತಿ ಬೆಂಗಳೂರಿನ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರ ನೇತೃತ್ವದಲ್ಲಿ ಮಹತ್ತರವಾದ ಬಹುಭಾಷಾ ವಚನ ಅನುವಾದ ಯೋಜನೆಯಡಿಯಲ್ಲಿ ಸಿದ್ಧಪಡಿಸಿರುವ 173 ಶರಣರ 2500 ವಚನಗಳನ್ನು 23 ಭಾಷೆಗಳಿಗೆ ಭಾಷಾಂತಾರಗೊಳಿಸಿದ್ದಕ್ಕಾಗಿ ಶ್ರೀ ಅರವಿಂದ ಜತ್ತಿಯವರನ್ನು ಅಭಿನಂದಿಸಿ ಗೌರವಿಸಲಾಯಿತು.

ದೆಹಲಿ ಕರ್ನಾಟಕ ಸಂಘವು ಜಗಜ್ಯೋತಿ ಬಸವಣ್ಣ ಮತ್ತು ಅಕ್ಕಮಹಾದೇವಿಯವರ ಜನ್ಮದಿನದ ಅಂಗವಾಗಿ ಇಂತಹ ಒಳ್ಳೆಯ ಕಾರ್ಯಕ್ರಮವನ್ನು ಅತ್ಯಂತ ಶ್ರದ್ಧೆ, ಭಕ್ತಿ ಮತ್ತು ಗೌರವಗಳಿಂದ ಏರ್ಪಡಿಸಿದ್ದಕ್ಕಾಗಿ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರನ್ನು ಬಸವ ಸಮಿತಿ ಬೆಂಗಳೂರಿನ ಪರವಾಗಿ ಶ್ರೀ ಪರಮಪೂಜ್ಯ ಜ್ಞಾನಯೋಗಿ ಸಿದ್ದೇಶ್ವರ ಮಹಾಸ್ವಾಮೀಜಿ ಜ್ಞಾನಯೋಗ ಆಶ್ರಮ, ವಿಜಯಪುರ ಮತ್ತು ಶ್ರೀ ಪರಮಪೂಜ್ಯ ಶ್ರೀ ಶಿವರುದ್ರ ಮಹಾಸ್ವಾಮಿಗಳು, ಬೇಲಿಮಠ ಸ್ವಾಮೀಜಿಯವರು ಕಿಕ್ಕಿರಿದು ತುಂಬಿದ ಸಭಾಂಗಣದಲ್ಲಿ ಶಾಲು ಹೊದಿಸಿ, ಫಲ ಪುಷ್ಪಗಳನ್ನು ನೀಡಿ ಅಭಿನಂದಿಸಿದರು. ಬಸವ ಇಂಟರ್‌ನ್ಯಾಷನಲ್ ಸೆಂಟರ್, ನವದೆಹಲಿಯ ಅಧ್ಯಕ್ಷರಾದ ಶ್ರೀ ಅಶೋಕ ಕಲ್ಲೂರು ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಪದಾಧಿಕಾರಿಗಳ ಜೊತೆಗೆ ಶ್ರೀ ಪಿ. ರಾಜಣ್ಣ, ಶ್ರೀ ಶಶಿಕಾಂತ ಪಾಟೀಲ, ಶ್ರೀ ಚೆನ್ನು ಎಸ್. ಮಠದ, ಶ್ರೀ ಎನ್.ಪಿ. ಚಂದ್ರಶೇಖರ, ಶ್ರೀಮತಿ ಜಮುನಾ ಸಿ. ಮಠದ ಮತ್ತು ಶ್ರೀಮತಿ ಸುಮಿತಾ ಮುರಗೋಡ ಅವರು ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲು ಸಹಕರಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದನಾರ್ಪಣೆ ಸಲ್ಲಿಸಿದರು. ಸಭಾ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಾಂಸ್ಕೃತಿಕ ಸಮಿತಿ ಅಧ್ಯಕ್ಷರಾದ ಶ್ರೀ ಸಖಾರಾಮ ಉಪ್ಪೂರು ಅವರು ನಡೆಸಿಕೊಟ್ಟರು. ಸಭಾ ಕಾರ್ಯಕ್ರಮದ ಮೊದಲು 'ಅಲ್ಲಮ' ಕನ್ನಡ ಚಲನಚಿತ್ರ ಪ್ರದರ್ಶನಗೊಂಡಿತು. ಸಭಾ ಕಾರ್ಯಕ್ರಮದ ನಂತರ ಉಸ್ತಾದ್ ಹಫೀಜ್ ಬಾಲೇಖಾನ್ ಅವರಿಂದ 'ವಚನ ಗಾಯನ', ನೀಲಾಲಯ ನೃತ್ಯ ಕೇಂದ್ರ, ತುಮಕೂರು ತಂಡದಿಂದ 'ವಚನ ವೈಭವ' ಮತ್ತು ಸ್ವರಸಿಂಚನ ಕಲಾಬಳಗ, ಬೆಂಗಳೂರು ತಂಡದಿಂದ 'ಸುಗಮ ಸಂಗೀತ' ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಅ

***ಅಭಿಮತ ವರದಿ***







# ಬಸವಣ್ಣನವರ ಕೊಡುಗೆ ಸ್ಮರಿಸಿದ ಪ್ರಧಾನಿ ಮೋದಿ
# 23 ಭಾಷೆಗಳಲ್ಲಿ ವಚನ ಸಂಪುಟ ಬಿಡುಗಡೆ




ಹನ್ನೆರಡನೇ ಶತಮಾನದ ತತ್ವಜ್ಞಾನಿ ಮಹಾಮಾನವತವಾದಿ ಜಗಜ್ಯೋತಿ ಬಸವಣ್ಣನವರು ತಮ್ಮ ಅನುಭವ ಮಂಟಪದಲ್ಲಿ ನೂರಾರು ಮಂದಿ ಶಿವಶರಣೆಯರನೊಡಗೂಡಿ ರಚಿಸಿದ ಸಾವಿರಾರು ವಚನಗಳಲ್ಲಿ ಆಯ್ದ ಸುಮಾರು 2500ಕ್ಕೂ ಹೆಚ್ಚು ವಚನಗಳನ್ನು ದೇಶದ 23 ಭಾಷೆಗಳಲ್ಲಿ ಬಸವ ಸಮಿತಿ ಬೆಂಗಳೂರಿನವರು ಕಳೆದ 10 ವರ್ಷಗಳಿಂದ ದಿ. ಡಾ. ಎಂ.ಎಂ. ಕಲಬುರ್ಗಿ ಅವರು ಸಂಪಾದಕತ್ವದಲ್ಲಿ ಅನುವಾದಿಸಿದ ವಚನಾಮೃತವನ್ನು ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಇದೇ ಏಪ್ರಿಲ್ 29ರಂದು ದೆಹಲಿಯ ವಿಜ್ಞಾನ ಭವನದಲ್ಲಿ ವಿಶ್ವಕ್ಕೆ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಮಾತನಾಡುತ್ತ 12ನೇ ಶತಮಾನದಲ್ಲಿ ಶೋಷಣೆ ಮತ್ತು ತುಳಿತಕ್ಕೆ ಒಳಗಾದ ನೂರಾರು ಮಾನವ ಸಮುದಾಯಗಳನ್ನು ಇಂತಹ ಒಬ್ಬ ಯುಗಪುರುಷ ಪ್ರಪಂಚದ ಆಧುನಿಕ ಪ್ರಜಾಪ್ರಭುತ್ವಕ್ಕೆ ಮೊಟ್ಟಮೊದಲ ನಾಂದಿ ಹಾಡಿ ಅನುಭವ ಮಂಟಪದಂತಹ ಪಾರ್ಲಿಮೆಂಟ್‌ನ್ನು ಸೃಷ್ಟಿಸಿ ಜಾತಿ, ಲಿಂಗ, ವರ್ಗ ಬೇಧವಿಲ್ಲದೆ ಎಲ್ಲರೂ ಬಂದು ಮುಕ್ತ ಮನಸ್ಸಿನಿಂದ ಚರ್ಚೆ ನಡೆಸಲು ಅವಕಾಶ ಮಾಡಿಕೊಟ್ಟಂತಹ ಈ ಮಹಾದಾರ್ಶನಿಕನಿಗೆ ವಿಶ್ವದಾದ್ಯಂತ ಮಾನ್ಯತೆ ದೊರೆಯಬೇಕಾಗಿದೆ ಎಂದು ನುಡಿದರು.

ಸುಮಾರು ಎರಡು ವರ್ಷಗಳ ಹಿಂದೆ ನಾನು ಲಂಡನ್‌ನ ಥೇಮ್ಸ್ ನದೀ ತೀರದಲ್ಲಿ ಬಸವಣ್ಣನವರ ವಿಗ್ರಹವನ್ನು ಅನಾವರಣ ಮಾಡುವಾಗ ನನಗೆ ಈ ಮಹಾಪುರುಷನ ವಿಚಾರಗಳು ಮತ್ತು ವಚನಗಳ ಪರಿಚಯವಾದವು. ಇಂದು ನಮ್ಮ ದೇಶದ ರಾಜಧಾನಿಯಿಂದ ಈ ಮಹಾಮಾನವತವಾದಿಯ ವಿಚಾರಧಾರೆ ಮತ್ತು ವಚನಗಳನ್ನು 23 ಭಾಷೆಗಳಲ್ಲಿ ಲೋಕಾರ್ಪಣೆ ಮಾಡುವ ಸೌಭಾಗ್ಯ ಕೂಡಾ ನನ್ನದಾಗಿರುವುದು ನನಗೆ ಅತ್ಯಂತ ಹೆಮ್ಮೆ ಮತ್ತು ಸಂತಸ ತಂದಿದೆ ಎಂದರು. 12ಶತಮಾನದಷ್ಟು ಹಿಂದೆಯೇ ಮಹಿಳೆಯರ ಸಮಾನತೆಗಾಗಿ ಮತ್ತು 'ಕಾಯಕವೇ ಕೈಲಾಸ' ಹಾಗೂ 'ದಾಸೋಹ'ದಂತಹ ಅದ್ಭುತ ವಿಚಾರಗಳನ್ನು ಪ್ರಚಾರ ಪಡಿಸುವುದರ ಜೊತೆಗೆ ವಾಸ್ತವವಾಗಿ ಬಳಸಿ ಪ್ರಯೋಗಿಸಿ ತೋರಿಸಿದ ಈ ಮಹಾಪುರುಷನ ವಿಚಾರಧಾರೆ ನಮ್ಮ ಮುಂದಿನ ಪೀಳಿಗೆಗೆ ನಮ್ಮ ಶಾಲಾ-ಕಾಲೇಜುಗಳ ಪಠ್ಯಪುಸ್ತಕಗಳ ಮುಖಾಂತರ ಹಾಗೂ ಇಂದಿನ ತಂತ್ರಜ್ಞಾನದ ಮುಖಾಂತರ ಮುಟ್ಟಬೇಕಾಗಿದೆ ಎಂದು ಅಭಿಪ್ರಾಯಪಟ್ಟರು. ಈ ವಚನಗಳಲ್ಲಿರುವ ಅದ್ಭುತವಾದಂತಹ ತತ್ವ ಮತ್ತು ಸತ್ವಗಳನ್ನು ಮುಂದಿನ ಜನಾಂಗಕ್ಕೆ ಮುಟ್ಟಿಸಲು ಬಸವ ಸಮಿತಿ ಬೆಂಗಳೂರಿನವರು ತಾಲ್ಲೂಕು ಮಟ್ಟದಿಂದ ಹಿಡಿದು ರಾಷ್ಟ್ರಮಟ್ಟದವರೆಗಿನ 'ಕ್ವಿಜ್' ಕಾರ್ಯಕ್ರಮವನ್ನು ಏರ್ಪಡಿಸಬೇಕೆಂದು ಕೇಳಿಕೊಂಡರು.

ಕೇಂದ್ರ ಸಚಿವರಾದ ಶ್ರೀ ಅನಂತಕುಮಾರ್ ಅವರು ಪ್ರಧಾನಮಂತ್ರಿಯವರಿಗೆ ಧನ್ಯವಾದ ಅರ್ಪಿಸುತ್ತಾ ಆಧುನಿಕ ಜಗತ್ತಿಗೆ ಬಸವಣ್ಣನವರ ಕೊಡುಗೆಯನ್ನು ವಿವರಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಬೆಂಗಳೂರಿನ ಬಸವ ಸಮಿತಿ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರು ಪ್ರಧಾನ ಮಂತ್ರಿಯವರನ್ನು ಸೇರಿದಂತೆ ಎಲ್ಲರನ್ನು ಸ್ವಾಗತಿಸಿದರು. ವೇದಿಕೆಯಲ್ಲಿ ಶ್ರೀ ಅನಂತ ಕುಮಾರ್, ಶ್ರೀ ಡಿ.ವಿ. ಸದಾನಂದ ಗೌಡ, ಶ್ರೀ ಬಸವರಾಜ ರಾಯ ರೆಡ್ಡಿ, ಶ್ರೀ ರಮೇಶ ಜಿಗಜಿಣಗಿ, ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಪ್ರೊ. ಐ.ಜಿ. ಸನದಿ ಅವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ 'ರಾಷ್ಟ್ರೀಯ ಬಸವ ಸಮಾವೇಶ' ಮತ್ತು 'ವಿಶ್ವ ಬಸವ ಸಮಾವೇಶ' ವಿಚಾರಗೋಷ್ಠಿಗಳು ನಡೆದವು. ಅ

***ಸಖಾರಾಮ ಉಪ್ಪೂರು***

# ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ದೆಹಲಿಯ ವಿಜ್ಞಾನ ಭವನದಲ್ಲಿ ವಚನಾಮೃತವನ್ನು ವಿಶ್ವಕ್ಕೆ ಸಮರ್ಪಿಸಿದಾಗ ಭಾಷಣದ ಆಯ್ದಭಾಗ...



***ಕೆ. ರಾಘವ ಶರ್ಮ***

ಓಂ ಶ್ರೀ ಬಸವ ಲಿಂಗಾಯ ನಮಃ ಭಗವಾನ್ ಬಸವೇಶ್ವರರ ಜಯಂತಿ ನಿಮಿತ್ತ ನಿಮಗೆಲ್ಲರಿಗೂ ಅನೇಕಾನೇಕ ಶುಭಕಾಮನೆಗಳು. 50 ವರ್ಷ ಪೂರೈಸಿರುವ ಬಸವ ಸಮಿತಿ, ಬಸವೇಶ್ವರನ ಸಂದೇಶವನ್ನು ವಿಶ್ವಕ್ಕೆ ರವಾನಿಸಿ ಬಹುದೊಡ್ಡ ಸಾಧನೆ ಮಾಡಿದೆ. ಆ ಸಮಿತಿಗೂ ಈ ಸಂದರ್ಭದಲ್ಲಿ ಹೃದಯದಿಂದ ಅಭಿನಂದನೆ ಸಲ್ಲಿಸುತ್ತೇನೆ. ಬಸವಣ್ಣನವರ ವಚನಗಳನ್ನೊಳಗೊಂಡ ವಚನ ಸಂಪುಟ ರಚಿಸುವ ಕಾರ್ಯಕ್ಕೆ ನಾಂದಿ ಹಾಡಿದ್ದ ಹಿಂದಿನ ಉಪ ರಾಷ್ಟ್ರಪತಿ ಬಿ.ಡಿ. ಜತ್ತಿ ಹಾಗೂ ಮುಖ್ಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ ಡಾ. ಎಂ.ಎಂ. ಕಲ್ಬುರ್ಗಿ ಅವರನ್ನು ಈ ಸಂದರ್ಭದಲ್ಲಿ ಸ್ಮರಿಸುವುದು ನನ್ನ ಕರ್ತವ್ಯ. ಅವರ ಪೂರ್ಣ ಪರಿಶ್ರಮದ ಫಲವಾಗಿ ಇಂದು ವಚನ ಸಂಪುಟ ಲೋಕಾರ್ಪಣೆಗೊಳ್ಳುತ್ತಿದೆ. ಕಲ್ಬುರ್ಗಿ ಅವರು ನಮ್ಮೊಂದಿಗೆ ಇಲ್ಲದಿದ್ದರೂ, ಇವತ್ತಿನ ಐತಿಹಾಸಿಕ ಕ್ಷಣ ಕಂಡು ಖಂಡಿತವಾಗಿಯೂ ಸಂತಸಗೊಂಡಿರುತ್ತಾರೆ ಎಂದು ನಾನು ಭಾವಿಸುತ್ತೇನೆ.

ನಾವೆಲ್ಲಾ ರಾಜಕಾರಣ ಮಾಡುವವರು. ಪಕ್ಷದ ಚಟುವಟಿಕೆಗಳಲ್ಲೇ ಸದಾ ತೊಡಗಿರುತ್ತೇವೆ. ಕುರ್ಚಿಗಳ ಸುತ್ತಲೇ ಜಗತ್ತನ್ನು ಕಾಣುತ್ತೇವೆ. ರಾಜಕಾರಣಿಗಳು ಯಾರಾದರೂ ಸ್ವರ್ಗಸ್ಥರಾದಾಗ ಅವರ ಮಕ್ಕಳು 'ತಂದೆ ಆರಂಭಿಸಿದ್ದ ಕೆಲಸ ನಾನು ಪೂರ್ಣಗೊಳಿಸುತ್ತೇನೆ' ಎಂದಾಗ ಆತನ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಆ ಕ್ಷಣದಲ್ಲೇ ನಾವು (ರಾಜಕಾರಣಿಗಳು) ಅರ್ಥಮಾಡಿಕೊಂಡಿರುತ್ತೇವೆ. ಆದರೆ ತಂದೆ ಶುರು ಮಾಡಿದ್ದ ಕಾರ್ಯವನ್ನು ನಿಜಾರ್ಥದಲ್ಲಿ ಪೂರ್ಣಗೊಳಿಸುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟವರು ಬಸವ ಸಮಿತಿ ಅಧ್ಯಕ್ಷರಾದ ಅರವಿಂದ ಜತ್ತಿ ಅವರು. ಬಸವೇಶ್ವರನ ಸಂದೇಶಗಳನ್ನು ಭಾರತದ ಮೂಲೆ ಮೂಲೆಗೆ ತಲುಪಿಸುವ ಹಿಂದೆ ಅವರ ಅಪಾರ ಶ್ರಮವಿದೆ. ಅವರಿಗೆ ಮತ್ತೊಮ್ಮೆ ಅಭಿನಂದನೆಗಳು.

ಭಾರತದ ಇತಿಹಾಸ ಕೇವಲ ಅಶಿಕ್ಷಾ, ಕ್ರೌರ್ಯತೆ, ಗುಲಾಮಗಿರಿ, ಕೊಲೆ, ಸಾವು, ಭಲಾತ್ಕಾರ, ಬಡತನ, ಹಸಿವಿಗೆ ಸೀಮಿತವಾಗಿಲ್ಲ. ವಿಶ್ವಕ್ಕೆ ಮಾನವತೆ, ಲೋಕತಂತ್ರ, ಉತ್ತಮ ಆಡಳಿತ, ಅಹಿಂಸೆ, ಸತ್ಯಾಗ್ರಹದ ಸಂದೇಶ ನೀಡಿದ ಹೆಮ್ಮೆಯ ರಾಷ್ಟ್ರ ನಮ್ಮದು. ಬೇರೆ ಬೇರೆ ಕಾಲಘಟ್ಟದಲ್ಲಿ ಮಹಾನ್ ವ್ಯಕ್ತಿತ್ವಗಳಿಗೆ ನಮ್ಮ ದೇಶ ಸಾಕ್ಷಿಯಾಗಿದೆ. ತಮ್ಮ ಜೀವನ, ವಿಚಾರಗಳಿಂದ ಅವರು ಮಾನವತೆಯ ಬೆಳಕು ಬೀರಿದರು. ಪಾಶ್ಚಿಮಾತ್ಯ ದೇಶಗಳು ಸಮಾನ ಅಧಿಕಾರದ ವ್ಯವಸ್ಥೆಯ ಬಗ್ಗೆ ಮಾತನಾಡುವ ನೂರಾರು ವರ್ಷಗಳ ಮೊದಲೇ ಭಾರತ ಈ ಮೌಲ್ಯ, ತತ್ವಗಳನ್ನು ಶಾಸನ ಪದ್ಧತಿಯಲ್ಲಿ ಅಳವಡಿಸಿಕೊಂಡ ಅಪರೂಪದ ದೇಶ ಎನಿಸಿಕೊಂಡಿತು. 11ನೇ ಶತಮಾನದಲ್ಲಿ ಭಗವಾನ್ ಬಸವೇಶ್ವರರು ಅನುಭವ ಮಂಟಪ ಎಂಬ ಲೋಕತಾಂತ್ರಿಕ ವ್ಯವಸ್ಥೆಯನ್ನು ರೂಪಿಸಿದರು. ಆ ಮೂಲಕ ಬಡ, ಪೀಡಿತ, ವಂಚಿತ, ಶೋಷಿತ, ಹಿಂದುಳಿದ, ದಲಿತ ಎಲ್ಲರೂ ಅಲ್ಲಿಗೆ ಬಂದು ತಮ್ಮ ತಮ್ಮ ವಿಚಾರಗಳನ್ನು ಮಂಡಿಸುವ ಪವಿತ್ರ ವೇದಿಕೆ ಸೃಷ್ಟಿಸಿದರು. ಲೋಕತಂತ್ರ ಎಂದರೆ ಇದೇ ಅಲ್ಲವೇ?

ಒಂದರ್ಥದಲ್ಲಿ ಅನುಭವ ಮಂಟಪ ದೇಶದ ಮೊದಲ ಸಂಸತ್ತು. ಇಲ್ಲಿ ನನ್ನದು ನಿನ್ನದು ಎಂಬ ಭೇದ ಭಾವ ಇರಲಿಲ್ಲ. ಎಲ್ಲಿ ವಿಚಾರಗಳು ಆಚರಿಸಲ್ಪಡುವುದಿಲ್ಲವೋ, ತರ್ಕಗಳು ಚರ್ಚಿಸಲ್ಪಡುವುದಿಲ್ಲವೋ, ಆಗ ಯಾವುದೇ ಅನುಭವ ಗೋಷ್ಠಿಗಳು ಪ್ರಸ್ತುತತೆ ಉಳಿಸಿಕೊಳ್ಳುವುದಿಲ್ಲ ಮತ್ತು ಅಲ್ಲಿ ಭಗವಾನ್ ಈಶ್ವರ ಕೂಡ ನೆಲೆ ನಿಲ್ಲುವಿದಿಲ್ಲ ಎಂದು ಬಸವಣ್ಣನವರು ಅಂದೇ ಹೇಳಿದ್ದರು. ಅಂದರೆ ವಿಚಾರ ಮಂಥನಗಳು ಈಶ್ವರನಷ್ಟೇ ಬಲಿಷ್ಠವಾಗಿರುತ್ತವೆ ಎಂಬುದು ಅವರ ಮಾತಿನ ಅರ್ಥವಾಗಿತ್ತು. ನೂರಾರು ವರ್ಷಗಳ ಹಿಂದೆಯೇ ಇಂಥದ್ದೊಂದು ಪರಿಕಲ್ಪನೆ, ಚಿಂತನೆ ನಮ್ಮವರೊಬ್ಬರಲ್ಲಿ ಇತ್ತು ಎಂಬುದನ್ನು ಊಹಿಸಲಾದರೂ ಸಾಧ್ಯವೇ?

ಬಸವಣ್ಣ ತಮ್ಮ ವಿಚಾರಗಳ ಮೂಲಕ ಮಹಿಳೆಯರನ್ನು ಸಮಾಜದ ಮುಖ್ಯವೇದಿಕೆಗೆ ಕರೆದು ತಂದರು. ಅವರಿಗೆ ಮಾತನಾಡಲು ಅವಕಾಶ ಸೃಷ್ಟಿಸಿದರು. ಮಹಿಳೆಯರ ಅಭಿವೃದ್ಧಿಗೆ ಅಗತ್ಯ ವ್ಯವಸ್ಥೆಯನ್ನು ಸಾಕಾರಗೊಳಿಸಿದರು. ಅಂದು ಸಮಾಜದ ಸರ್ವ ವರ್ಗಗಳಿಂದ ಬಂದ ಮಹಿಳೆಯರು ತಮ್ಮ ವಿಚಾರಗಳನ್ನು ಮುಂದಿಡುತ್ತಿದ್ದರು. ತಿರಸ್ಕಾರಕ್ಕೆ ಒಳಗಾಗಿದ್ದ ಮಹಿಳೆಯರಿಗೂ ಅನುಭವ ಮಂಟಪದಲ್ಲಿ ಮಾತನಾಡುವ ಅಧಿಕಾರ ಸಿಕ್ಕಿತು. ಮಹಿಳಾ ಸಶಕ್ತೀಕರಣದ ನೆಲೆಯಲ್ಲಿ ನಡೆಸಲಾದ ಈ ಹೋರಾಟ ಎಷ್ಟು ಅರ್ಥಪೂರ್ಣವಾಗಿತ್ತು ಎಂಬುದನ್ನು ವಿವರಿಸುವುದೂ ಕಷ್ಟ. ಸಾವಿರಾರು ವರ್ಷಗಳ ಅನೂಹ್ಯ ಇತಿಹಾಸವುಳ್ಳ ನಮ್ಮ ದೇಶದಲ್ಲಿ ದುರದೃಷ್ಟವಷಾತ ಕೆಲ ಕೆಟ್ಟ ವಿಚಾರಗಳೂ ಆಚರಿಸಲ್ಪಟ್ಟಿವೆ. ಆದರೆ, ಈ ಕೆಟ್ಟ ವ್ಯವಸ್ಥೆ ವಿರುದ್ಧ ಹೋರಾಡುವ ಕೆಚ್ಚು ನಮ್ಮೊಳಗೆ ಸೃಷ್ಟಿಯಾಗಿದೆ/ ಸೃಷ್ಟಿಯಾಗುತ್ತಿದೆ. ರಾಜಾರಾಮ ಮೋಹನ ರಾಯರು ಅಂದು ವಿಧವಾ ವಿವಾಹದ ಬಗ್ಗೆ ಪ್ರಸ್ತಾಪಿಸಿದ್ದಾಗ ಅವರು ಎಷ್ಟೊಂದು ಕಠಿಣ ಪರಿಸ್ಥಿತಿ ಎದುರಿಸಿರಲಿಕ್ಕಿಲ್ಲ? ಆದರೆ ತಮ್ಮ ತಾಯಿ, ಸಹೋದರಿಯರಿಗೆ ಆಗುತ್ತಿರುವ ಅನ್ಯಾಯ ತಾಳಲಾರದೆ ಅವರು ಹೋರಾಟವನ್ನು ದಿಟ್ಟತನದಿಂದಲೇ ಮುಂದುವರಿಸಿದರು.

ನಮ್ಮ ಸಮಾಜದಲ್ಲಿ ಅಸ್ತಿತ್ವದಲ್ಲಿರುವ ತ್ರಿವಳಿ ತಲಾಖ್ ಬಗ್ಗೆ ದೇಶಾದ್ಯಂತ ಚರ್ಚೆಯಾಗುತ್ತಿದೆ. ಭಾರತದ ಮಹಾನ್ ಪರಂಪರೆಯನ್ನು ನೋಡಿದರೆ ನನ್ನ ಎದೆಯಲ್ಲಿ ಆಗಾಗ ಭರವಸೆಯ ಆಶಾಕಿರಣದ ಸಂಚಾರವಾಗುತ್ತಿರುತ್ತ್ತದೆ. ಆಧುನಿಕ ವ್ಯವಸ್ಥೆಗಳನ್ನು



ಒಪ್ಪಿಕೊಂಡು, ಸಮಾಜದ ನಿಕೃಷ್ಟ ವ್ಯವಸ್ಥೆಗೆ ಕಡಿವಾಣ ಹಾಕಲು ಜನರೇ ಮುಂದಾಗುತ್ತಾರೆ ಎಂಬ ಆಶಾಭಾವನೆ ನನ್ನದು. ಮುಸ್ಲಿಂ ಸಮುದಾಯದಲ್ಲೂ ಇಂತಹಾ ಪ್ರಬುದ್ಧ ವ್ಯಕ್ತಿಗಳು ಖಂಡಿತಾ ಮುಂದೆ ಬಂದು ಅಸಮಾನತೆಯಿಂದ ಬಳಲಿರುವ ಮುಸ್ಲಿಂ ಮಹಿಳೆಯರನ್ನು ರಕ್ಷಿಸುತ್ತಾರೆ. ಇದರಿಂದ ಮುಸ್ಲಿ ಮಹಿಳೆಯರು ಸಂತೋಷ, ನೆಮ್ಮದಿಯಿಂದ ಬದುಕು ಕಟ್ಟಿಕೊಳ್ಳಲೂ ಸಾಧ್ಯವಾಗುತ್ತದೆ. ಭಾರತೀಯ ಮುಸಲ್ಮಾನರೇ ಈ ಘನ ಕಾರ್ಯಕ್ಕೆ ಮುಂದಾಗಿ ವಿಶ್ವದ ಮುಸ್ಲಿಂ ಜನಾಂಗಕ್ಕೆ ಮಾದರಿಯಾಗಬೇಕು ಎಂಬ ಆಶಯ, ವಿಶ್ವಾಸ ನನ್ನಲ್ಲಿದೆ. ಏಕೆಂದರೆ ನಮ್ಮ ದೇಶದ ಮಣ್ಣಿನ ಗುಣವೇ ಅಂಥಾದ್ದು. ಬಸವಣ್ಣನವರು ಕೂಡ ತಮ್ಮ ಅನುಭವ ಮಂಟಪದಲ್ಲಿ ಇದನ್ನೇ ಅಲ್ಲವೇ ಹೇಳಿದ್ದು. ಈ ಅತಿ ಸೂಕ್ಷ್ಮ ವಿಷಯ ರಾಜಕಾರಣದಲ್ಲಿ ಸಿಲುಕುವಂತೆ ಮಾಡಬೇಡಿ. ಮುಸ್ಲಿಂ ಮಹಿಳೆಯರ ರಕ್ಷಣೆ ನಿಮ್ಮ ಕೈಯಲ್ಲಿದೆ ಎಂದು ಮುಸ್ಲಿಂ ಸಮಾಜದ ನನ್ನ ಸಹೋದರರಲ್ಲಿ ಕೇಳಿಕೊಳ್ಳುತ್ತೇನೆ.

ದೇಹವೇ ದೇಗುಲ ಎಂದಿದ್ದರು ಬಸವಣ್ಣ. ಅಂದರೆ ನಮ್ಮ ಆತ್ಮವೇ ಭಗವಂತನ ಮಂದಿರ. ಸಮಾಜದಲ್ಲಿ ದೊಡ್ಡವ–ಸಣ್ಣವ ಎಂಬ ಭೇದ ಭಾವ ಹೊಡೆದಟ್ಟಲು ಅವರು ಶ್ರಮಿಸಿದರು. ವ್ಯಕ್ತಿಯ ಜಾತಿ ಕೇಳಬೇಡ ಎಂದಿದ್ದ ಬಸವಣ್ಣ, ಇವ ಯಾರವ ಎನ್ನಬೇಡ, ಇವ ನಮ್ಮವ ಇವ ನಮ್ಮವ ಎನ್ನುವ ಮೂಲಕ ನಾವೆಲ್ಲರೋ ಒಂದೇ ಎಂಬ ಸಂದೇಶ ಕೊಟ್ಟರು. ಒಂದು ಪ್ರಜಾಸತ್ತಾತ್ಮಕ ದೇಶಕ್ಕೆ ನಿಜವಾದ ಬುನಾದಿ ಹಾಕಿದ್ದು ಬಸವಣ್ಣನವರ ಇಂಥಾ ಸಂದೇಶಗಳೇ. ಅವರ ವಿಚಾರಗಳೇ ಇಂದಿನ ಜನತಂತ್ರಕ್ಕೆ ಆಧಾರ. ಕೇಂದ್ರ ಸರ್ಕಾರದ ಸಬ್ ಕಾ ಸಾಥ್ ವಿಕಾಸ್ ಮಂತ್ರಕ್ಕೂ ಬಸವಣ್ಣನವರೇ ಪ್ರೇರಣೆ. ಭೇದ ಭಾವ ಇಲ್ಲದೆ ದೇಶದ ಪ್ರತಿಯೊಬ್ಬನಿಗೂ ವಸತಿ ವ್ಯವಸ್ಥೆ, ನೀರು, ವಿದ್ಯುತ್, ರಸ್ತೆ, ರೈತರಿಗೆ ಫಸಲಿನ ವಿಮೆ ಸಿಗಬೇಕು. ಇದೇ ಅಲ್ಲವೇ ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಮಂತ್ರದ ಮೂಲಾರ್ಥ?

ಕೇಂದ್ರ ಸರ್ಕಾರದ ಮುದ್ರಾ ಯೋಜನೆ ಬಗ್ಗೆ ನೀವು ಕೇಳಿದ್ದೀರಿ. ದೇಶದ ನವ ಯುವಕರು ಸ್ವಂತ ಉದ್ಯೋಗದ ಮೂಲಕ ಸ್ವಾವಲಂಬಿ ಜೀವನ ನಡೆಸಲು ಯಾವುದೇ ಗ್ಯಾರಂಟಿ ಇಲ್ಲದೆ ಬ್ಯಾಂಕ್ ಸಾಲ ನೀಡುವ ಮಹೋನ್ನತ ಯೋಜನೆಯಿದು. ಈವರೆಗೆ ದೇಶದ 3.5 ಕೋಟಿ ಜನರು ಹೆಚ್ಚು ಮಂದಿ ಯೋಜನೆಯ ಫಲಾನುಭವಿಗಳಾಗಿದ್ದು, ರೂ. 3 ಲಕ್ಷ ಕೋಟಿಯಷ್ಟು ಸಾಲ ವಿತರಿಸಲಾಗಿದೆ. ಎಲ್ಲಕ್ಕಿಂತಲೂ ಹೆಮ್ಮೆಯ ವಿಷಯ ಏನೆಂದರೆ, ಸಾಲ ತೆಗೆದುಕೊಂಡವರಲ್ಲಿ ಶೇ.76ರಷ್ಟು ಮಹಿಳೆಯರೇ ಇದ್ದು, ಸ್ವಾವಲಂಬೀ ಜೀವನಕ್ಕೆ ಮುನ್ನುಡಿ ಬರೆದಿದ್ದಾರೆ. ನಿಜ ಹೇಳಬೇಕೆಂದರೆ ಯೋಜನೆ ಆರಂಭಿಸಿದಾಗ ಇಷ್ಟೊಂದು ಸಂಖ್ಯೆಯಲ್ಲಿ ಮಹಿಳೆಯರು ಮುಂದೆ ಬರುತ್ತಾರೆ ಎಂದು ನಾವು ಕಲ್ಪಿಸಿಯೂ ಇರಲಿಲ್ಲ. ಮಹಿಳಾ ಸಶಕ್ತೀಕರಣದಲ್ಲಿ ಈ ಯೋಜನೆ ಬಹಳಷ್ಟು ನೆರವಾಗಿದೆ.

ಜ್ಞಾನದ ಬಲದಿಂದ ಅಜ್ಞಾನ, ಸತ್ಯದಿಂದ ಅಸತ್ಯ, ಜ್ಯೋತಿಯ ಬಲದಿಂದ ಅಂಧಕಾರದ ನಾಶ ಎಂದು ಬಸವಣ್ಣ ಹೇಳಿದ್ದರು. ಭ್ರಷ್ಟಾಚಾರ ಮತ್ತು ಕಾಳಧನದಿಂದ ಮುಕ್ತಿ ಸಿಕ್ಕಿ, ಶಿಫಾರಸುಗಳಿಂದ ನೇಮಕಾತಿಗಳು ಅಂತ್ಯಗೊಂಡು, ಬಡ ವ್ಯಕ್ತಿಗೆ ಸಿಗಬೇಕಾದ ಅನುದಾನಗಳು ಸಿಕ್ಕಾಗ ಮಾತ್ರ ವ್ಯವಸ್ಥೆಯಲ್ಲೂ ಸತ್ಯ ದರ್ಶನವಾಗುವುದು. ಆ ದಾರ್ಶನಿಕರು ಮನುಷ್ಯ ಜನ್ಮ ನಿಸ್ವಾರ್ಥ ಕರ್ಮ ಯೋಗದಿಂದಲೇ ಪ್ರಕಾಶಿತಗೊಳ್ಳುತ್ತದೆ ಎಂದಿದ್ದರು. ಸಮಾಜದಲ್ಲಿ ನಿಸ್ವಾರ್ಥ ಕರ್ಮ ಯೋಗ ಹೆಚ್ಚಿದಂತೆಯೇ ನಮ್ಮಲ್ಲಿ ಭ್ರಷ್ಟ ಆಚರಣೆಗಳು ಕಡಿಯಾಗುತ್ತಾ ಹೋಗುತ್ತವೆ. ಭ್ರಷ್ಟತೆ ಎಂಬುದು ನಮ್ಮ ವ್ಯವಸ್ಥೆಗೆ ಅಂಟಿರುವ ಅತಿ ದೊಡ್ಡ ಪಿಡುಗು. ಇದು ಮನುಷ್ಯನ ಹಕ್ಕುಗಳನ್ನು ಕಸಿದುಕೊಂಡಿದೆ. ಹೀಗಾಗಿ ನಮ್ಮ ಸರ್ಕಾರವೂ ನಿಸ್ವಾರ್ಥ ಕರ್ಮ ಯೋಗಿಗಳಿಗೆ ಹೆಚ್ಚು ಆದ್ಯತೆ ನೀಡಿ, ಭ್ರಷ್ಟಾಚಾರವನ್ನು ಬಡಿದಟ್ಟಲು ಹೋರಾಟ ನಡೆಸುತ್ತಿದೆ.

ಬಸವಣ್ಣನವರ ವಿಚಾರಗಳು ಕರ್ನಾಟಕವನ್ನು ದಾಟಿ ಲಂಡನ್‌ನ ಥೇಮ್ಸ್ ನದಿ ದಂಡೆವರೆಗೆ ವಿಸ್ತರಿಸಿದೆ. ಅಲ್ಲಿ ಬಸವಣ್ಣನವರ ಪ್ರತಿಮೆ ಉದ್ಘಾಟನೆ ಮಾಡಿದ್ದಕ್ಕೆ ನನಗೆ ಹೆಮ್ಮೆಯಿದೆ. ಆ ದಿನದಂದು ಅಲ್ಲಿ ಮಳೆ ಬರುತ್ತಿದ್ದರೂ, ಜನರು ಬಸವಣ್ಣನ ಪ್ರತಿಮೆ ನೋಡಲು, ಅವರ ಆದರ್ಶಗಳ ಬಗ್ಗೆ ಕೇಳಲು ನಿಸ್ವಾರ್ಥ ಮನಸ್ಸಿನಿಂದ ಬಂದಿದ್ದರು. 800 ವರ್ಷಗಳ ಹಿಂದಿನ ಬಸವಣ್ಣನವರ ವಚನಗಳು, ನೀತಿ, ಉಪದೇಶಗಳು ಇಂದಿಗೂ ನೂರಕ್ಕೆ ನೂರರಷ್ಟು ಪ್ರಸ್ತುತ.

ಬಸವ ಸಮಿತಿಯಲ್ಲಿ ನನ್ನದೊಂದು ವಿನಂತಿ ಇದೆ. ಬಸವಣ್ಣನವರ ವಚನಗಳ ಬಗ್ಗೆ ಕ್ವಿಜ್ ಬ್ಯಾಂಕ್‌ವೊಂದನ್ನು ಏಕೆ ಮಾಡಬಾರದು? ಜತೆಗೆ ಎಲ್ಲಾ ವಚನಗಳು ಡಿಜಿಟಲ್ ಮಾಧ್ಯಮದಲ್ಲಿ ಲಭಿಸುವಂತೆಯೂ ಕ್ರಮ ಕೈಗೊಳ್ಳಬಹುದು. ಈ ಡಿಜಿಟಲ್ ವ್ಯವಸ್ಥೆಯಿಂದ ಎಲ್ಲರೂ ವಚನಗಳ ಕುರಿತ ಕ್ವಿಜ್‌ನಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕು. ತಾಲೂಕು, ಜಿಲ್ಲಾ, ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ವಚನಗಳ ಮೇಲೆ ಪ್ರತಿ ವರ್ಷ ಕ್ವಿಜ್ ಕಾಂಪಿಟಿಷನ್ ರೂಪಿಸಬಹುದು. ಕ್ವಿಜ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಜನರು ಆ ನೆಪದಲ್ಲಾದರೂ ಬಸವಣ್ಣನವರ ವಚನಗಳ ಅಧ್ಯಯನ ಮಾಡುತ್ತಾರೆ. ಬಸವಣ್ಣನವರ ವಿಚಾರಗಳು ಮತ್ತು ಈಗಿನ ವಿಚಾರಧಾರೆಗಳ ಸಾಮ್ಯತೆಯ ಬಗ್ಗೆಯೂ ಕ್ವಿಜ್ ನಡೆಸಬಹುದು. ಇದರಿಂದ ಪ್ರಪಂಚಕ್ಕೆ ಮಾದರಿ ಎನಿಸಬಲ್ಲ, ಸಮಾಜದ ಸರ್ವ ವರ್ಗಗಳ ಏಳಿಗೆಗೆ ದಾರಿದೀಪವಾಗಬಲ್ಲ ವಿಚಾರಧಾರೆಗಳಿಗೆ ಭಾರತ 800 ವರ್ಷಗಳಿಗೆ ಹಿಂದೆಯೇ ಸಾಕ್ಷಿಯಾಗಿತ್ತು ಎಂಬುದನ್ನೂ ತಿಳಿದಂತಾಗುತ್ತದೆ. ಈ ಕೆಲಸವನ್ನು ಅರವಿಂದ ಜತ್ತಿಯವರೇ ಮಾಡಬೇಕು ಎಂಬುದು ನನ್ನ ಆಶಯವೂ ಹೌದು.

ನೋಟು ರದ್ದತಿ ಕ್ರಮ ಘೋಷಿಸಿದ ನಂತರ ಅರವಿಂದ ಜತ್ತಿ ಅವರು ನನ್ನನ್ನು ಸಂಸತ್ತಿನಲ್ಲಿ ಭೇಟಿ ಮಾಡಿ, ಬಸವಣ್ಣನವರ ವಚನ ಸಂಪುಟ ಬಿಡುಗಡೆ ಬಗ್ಗೆ ಚರ್ಚಿಸಿದ್ದರು. ಆಗ ಸಂಸತ್ತಿನಲ್ಲಿ ನೋಟು ರದ್ದತಿಯದ್ದೇ ಚರ್ಚೆ. ಪ್ರತಿ ದಿನ ಬೇರೆಯವರ ಜೇಬುಗಳಿಗೆ ಕೈ ಹಾಕುತ್ತಿದ್ದ ಮಂದಿ ಅಂದು ತಮ್ಮ ಜೇಬುಗಳಿಗೇ ಕೈ ಹಾಕಿ ಈ ನೋಟುಗಳನ್ನು ಏನು ಮಾಡುವುದಪ್ಪಾ ಎಂದು ಚಿಂತೆಗೀಡಾಗಿದ್ದರು! ಜತ್ತಿಯವರು ನನ್ನನ್ನು ನವೆಂಬರ್ 7ರಂದು ಭೇಟಿ ಮಾಡಿ ಬಸವಣ್ಣನವರ ವಚನ ಸಂಪುಟದ ಬಗ್ಗೆ ತಿಳಿಸುತ್ತಿದ್ದರೆ ಖಂಡಿತವಾಗಿಯೂ ನವೆಂಬರ್ 8ರ ನೋಟು ರದ್ದತಿ ಭಾಷಣದಲ್ಲಿ ವಚನಗಳ ಪ್ರಸ್ತುತತೆ ಬಗ್ಗೆ ಮಾತನಾಡುತ್ತಿದ್ದೆ.

2022ಕ್ಕೆ ಸ್ವತಂತ್ರ ಭಾರತಕ್ಕೆ 75 ವರ್ಷ ತುಂಬಲಿದೆ. ಸರ್ಕಾರ ಹಾಗೆ ಮಾಡಬೇಕು ಹೀಗೆ ಮಾಡಬೇಕು ಎಂದು ಸಲಹೆ ನೀಡಲು ನೂರಾರು ಮಂದಿ ಇರುತ್ತಾರೆ. ಆದರೆ ದೇಶದ ಪ್ರತಿಯೊಬ್ಬನೂ ಇದು ನನ್ನ ದೇಶ. ಈ ದೇಶದ ಅಭಿವೃದ್ಧಿಗೆ ನಾನು ಶ್ರಮಿಸಬೇಕು ಎಂದು ಯೋಚಿಸಿ ದೇಶದ ಅಭ್ಯುದಯಕ್ಕೆ ಕೊಡುಗೆ ನೀಡಬೇಕು ಎಂಬ ಚಿಂತನೆಯೊಂದಿಗೆ ಮುನ್ನಡೆದರೆ ಮಾತ್ರ ಬಸವಣ್ಣನವರ ಕನಸಿನ ದೇಶ 2022ಕ್ಕೆ ನಿಜಾರ್ಥದಲ್ಲಿ ನನಸಾಗಲು ಸಾಧ್ಯ ಎನ್ನುತ್ತಾ ಬಸವಣ್ಣನವರ ವಚನಗಳನ್ನು 23 ಭಾಷೆಗಳಿಗೆ ಭಾಷಾಂತರ ಮಾಡಿದ ಮಾತೆ ಸರಸ್ವತಿಯ ಮಕ್ಕಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಈ ಪವಿತ್ರ ಕಾರ್ಯಕ್ರಮದಲ್ಲಿ ನಿಮ್ಮೊಂದಿಗೆ ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟ ನಿಮಗೆಲ್ಲರಿಗೂ ಧನ್ಯವಾದ ತಿಳಿಸಿ, ಮಾತನ್ನು ಮುಗಿಸುತ್ತಿದ್ದೇನೆ. ಅ



# ನವದೆಹಲಿಯಲ್ಲಿ ನಾಡಪ್ರಭು ಕೆಂಪೇಗೌಡರ ರಾಷ್ಟ್ರೀಯ ಉತ್ಸವ

ನಾಡಪ್ರಭು ಕೆಂಪೇಗೌಡ ಫೌಂಡೇಶನ್, ನವದೆಹಲಿಯು ವಿಶ್ವ ಒಕ್ಕಲಿಗರ ಮಹಾವೇದಿಕೆಯ ಸಹಕಾರದೊಂದಿಗೆ ಏರ್ಪಡಿಸಿದ್ದ 'ನಾಡಪ್ರಭು ಕೆಂಪೇಗೌಡರ ರಾಷ್ಟ್ರೀಯ ಉತ್ಸವ'ವು ನವದೆಹಲಿಯ ತಾಲ್ಕಾತೋರ ಕ್ರೀಡಾಂಗಣದಲ್ಲಿ ಇದೇ ಏಪ್ರಿಲ್ 15 ಮತ್ತು 16ರಂದು ಎರಡು ದಿನಗಳ ಕಾಲ ಅತ್ಯಂತ ವೈಶಿಷ್ಟ್ಯಪೂರ್ಣವಾಗಿ ನೆರವೇರಿತು. ಏಪ್ರಿಲ್ 15ರ ಬೆಳಿಗ್ಗೆ ಪರಮಪೂಜ್ಯ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಗಳವರು ನಗಾರಿ ಬಾರಿಸುವ ಮೂಲಕ ಈ ಉತ್ಸವಕ್ಕೆ ಚಾಲನೆ ನೀಡಿದರು.

ಅದೇ ದಿನ ಸಂಜೆ ನಡೆದ ಉತ್ಸವವನ್ನು ಪರಮಪೂಜ್ಯ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ಭಾರತದ ರಾಷ್ಟ್ರಪತಿ ಶ್ರೀ ಪ್ರಣವ್ ಮುಖರ್ಜಿಯವರು ಜ್ಯೋತಿ ಬೆಳಗಿಸುವ ಮೂಲಕ ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಉತ್ಸವವನ್ನು ಉದ್ಘಾಟಿಸಿದರು.

ಉತ್ಸವವನ್ನು ಉದ್ಘಾಟಿಸಿ ಮಾತನಾಡಿದ ರಾಷ್ಟ್ರಪತಿಯವರು, ನಗರೀಕರಣದ ಅಡ್ಡ ಪರಿಣಾಮಗಳಾದ ತಾಪಮಾನ ಏರಿಕೆ, ಟ್ರಾಫಿಕ್ ಸಮಸ್ಯೆ, ನಾಗರಿಕ ಮೂಲ ಸೌಕರ್ಯಗಳ ಕೊರತೆ ಮುಂತಾದ ಸಮಸ್ಯೆಗಳಿಗೆ ಬೆಂಗಳೂರು ತುತ್ತಾಗಿರುವುದು ಕಳವಳಕಾರಿಯಾಗಿದೆ. ಆ ದೃಷ್ಟಿಯಿಂದ ಬೆಂಗಳೂರಿನ ಜನತೆ ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಳ್ಳಬೇಕು ಎಂದರು.

ನಾಡಪ್ರಭು ಕೆಂಪೇಗೌಡರು ಐದುನೂರು ವರ್ಷಗಳ ಹಿಂದೆಯೇ ನಗರ ಯೋಜನೆಯನ್ನು ರೂಪಿಸಿದ ಚಾಣಾಕ್ಷ ದೊರೆಯಾಗಿದ್ದರು. ಅವರು ಅಂದು ರೂಪಿಸಿದ ಯೋಜನೆಗಳು ಇಂದಿಗೂ ಪ್ರಸ್ತುತವಾಗಿರುವುದು ಅವರ ದೂರದೃಷ್ಟಿಯ ಪ್ರತೀಕವಾಗಿದೆ. ಅವರು ಕಟ್ಟಿದ ಕೆರೆಗಳು, ಸೇನಾ ನೆಲೆಗಳು, ತೆರಿಗೆ ಪದ್ಧತಿ, ವಿಶಾಲ ರಸ್ತೆಗಳು, ಭಯವಿಲ್ಲದ ಆಡಳಿತ ಇವೆಲ್ಲವೂ ಶ್ಲಾಘನೀಯವಾದುವು ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಭಾರತದ ಮಾಜಿ ಪ್ರಧಾನಮಂತ್ರಿ ಶ್ರೀ ಎಚ್.ಡಿ. ದೇವೇಗೌಡರು ಮಾತನಾಡಿ, ನಾಡಪ್ರಭು ಕೆಂಪೇಗೌಡರು ದೂರದೃಷ್ಟಿಯನ್ನುಳ್ಳ ದಕ್ಷ ಆಡಳಿತಗಾರರಾಗಿದ್ದರು. ಆಡಳಿತಾತ್ಮಕ ಮತ್ತು ಸಾಮಾಜಿಕ ಪರಿಕಲ್ಪನೆಯನ್ನು ಒಳಗೊಂಡ ಭಾವ ಅವರಲ್ಲಿತ್ತು. ಎಲ್ಲಾ ಜಾತಿಗಳಿಗೂ, ಎಲ್ಲಾ ಕಸುಬುಗಳಿಗೂ ಮಾನ್ಯತೆ ದೊರಕಿದಾಗ ಸಮಾಜ ಸದೃಢವಾಗಿ ಬೆಳೆಯಲು ಸಾಧ್ಯವಾಗುತ್ತದೆ ಎಂಬುದನ್ನು ಅರಿತಿದ್ದ ಕೆಂಪೇಗೌಡರು ಸರ್ವಜನರ ಏಳಿಗೆಯನ್ನು ಬಯಸುತ್ತಿದ್ದರು. ಆ ದೃಷ್ಟಿಯಿಂದ ಅವರು ಬೆಂಗಳೂರನ್ನು ಕೇವಲ ಒಂದು ಜಾತಿಗಾಗಿ ನಿರ್ಮಿಸಲಿಲ್ಲ. ಎಲ್ಲ ವರ್ಗದ ಜನರನ್ನೂ ಗಮನದಲ್ಲಿಟ್ಟುಕೊಂಡು ಬೆಂಗಳೂರನ್ನು ನಿರ್ಮಿಸಿದ ಫಲವಾಗಿ ಇಂದು ಬೆಂಗಳೂರು ವಿಶ್ವಮನ್ನಣೆ ಪಡೆಯಲು ಸಾಧ್ಯವಾಗಿದೆ ಎಂದು ತಿಳಿಸಿದರು.



ದಿವ್ಯ ಸಾನಿಧ್ಯ ಪೀಠದಿಂದ ಆಶೀರ್ವಚನ ನೀಡಿದ ಪರಮಪೂಜ್ಯ ಮಹಾಸ್ವಾಮಿಗಳವರು, ನಾಡಪ್ರಭು ಕೆಂಪೇಗೌಡರು ದೂರದೃಷ್ಟಿಯನ್ನುಳ್ಳ ದಕ್ಷ ಆಡಳಿತಗಾರರಾಗಿದ್ದರು. ಆಡಳಿತಾತ್ಮಕ ಮತ್ತು ಸಾಮಾಜಿಕ ಪರಿಕಲ್ಪನೆಯನ್ನು ಒಳಗೊಂಡ ಭಾವ ಅವರಲ್ಲಿತ್ತು. ಕೆಂಪೇಗೌಡ ನಿರ್ಮಿತ ಬೆಂಗಳೂರು ಇಂದು ಜಗದ್ವಿಖ್ಯಾತವಾಗಲು, ವಿಶ್ವಮನ್ನಣೆ ಗಳಿಸಿಕೊಳ್ಳಲು ಕಾರಣ ಕೆಂಪೇಗೌಡರ ದೂರದೃಷ್ಟಿ, ಕೆಂಪೇಗೌಡರು ಸಾಮಾಜಿಕ ಮತ್ತು ಆಡಳಿತಾತ್ಮಕವಾದ ದೃಷ್ಟಿಯನ್ನಿಟ್ಟುಕೊಂಡು ಬೆಂಗಳೂರು ನಗರವನ್ನು ನಿರ್ಮಿಸದೇ ಹೋಗಿದ್ದರೆ ಇಂದು ಬೆಂಗಳೂರು ವಿಶ್ವಮನ್ನಣೆ ಪಡೆಯಲು ಸಾಧ್ಯವಾಗುತ್ತಿರಲಿಲ್ಲ ಎಂದರು.

ನಾಡಪ್ರಭು ಕೆಂಪೇಗೌಡರು ಜನ ಸಾಮಾನ್ಯರ ಹಿತರಕ್ಷಣೆಯಲ್ಲಿ ಹಾಗೂ ಆಡಳಿತದಲ್ಲಿ ಎಷ್ಟು ಸಮರ್ಥರೋ ಧಾರ್ಮಿಕವಾಗಿಯೂ ಹಿಮಾಲಯ ಸದೃಶ ವ್ಯಕ್ತಿತ್ವವನ್ನು ಹೊಂದಿದ್ದರು. ಧರ್ಮ ಸಂಸ್ಕೃತಿಯ ರಕ್ಷಕರಾಗಿದ್ದರು. ಆದರೆ ಇತಿಹಾಸಕಾರರು ನಾಡಪ್ರಭು ಕೆಂಪೇಗೌಡರನ್ನೂ ಅವರ ಕ್ರಾಂತಿಕಾರಕ ಸಾಧನೆಯನ್ನು ಸೂಕ್ತ ರೀತಿಯಲ್ಲಿ ದಾಖಲಿಸದೆ ಹೋಗಿರುವುದು ವಿಪರ್ಯಾಸವಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ನಂಜಾವಧೂತಸ್ವಾಮಿಗಳವರು ಆಶೀರ್ವಚನ ನೀಡಿದರು. ಕೇಂದ್ರ ಸಚಿವರಾದ್ ಶ್ರೀ ಡಿ.ವಿ. ಸದಾನಂದ ಗೌಡ, ಶ್ರೀ ಅನಂತಕುಮಾರ್ ಕೂಡಾ ಸಭಿಕರನ್ನು ಉದ್ದೇಶಿಸಿ ಮಾತನಾಡಿದರು. ವೇದಿಕೆಯಲ್ಲಿ ಲೋಕಸಭಾ ಸದಸ್ಯರಾದ ಶ್ರೀ ಸಿ.ಎಸ್. ಪುಟ್ಟರಾಜು, ಮಾಜಿ ಸಚಿವರಾದ ಶ್ರೀ ಎಚ್.ಎಂ. ರೇವಣ್ಣ, ಫೌಂಡೇಶನ್ನಿನ ಅಧ್ಯಕ್ಷ ಶ್ರೀ ಬಿ.ಎಲ್. ಸುರೇಶ್ ಮುಂತಾದ ಗಣ್ಯರು ಉಪಸ್ಥಿತರಿದ್ದರು.

ದೆಹಲಿ ಸ್ಥಳೀಯ ಕಲಾವಿದರಾದ ಶ್ರೀಮತಿ ಶೋಭಾ ನಾಗರಾಜ ಮತ್ತು ತಂಡದಿಂದ–ಮುಂಜಾನೆದ್ದು ಕುಂಬಾರಣ್ಣ, ರಂಗ ತರಂಗ–ಮಹಿಳಾ ತಂಡದಿಂದ–ಭಾಗ್ಯದ ಬಳೆಗಾರ ನಂತರ ಶ್ರೀ ವಿದ್ವಾನ್ ರಮೇಶ್ ಕೋಲಾರ ಮತ್ತು ತಂಡದವರಿಂದ 'ದಶಾವತಾರ' ವಿವಿಧ ನೃತ್ಯಗಳು ಮತ್ತು ಚಲನಚಿತ್ರ ಗಾಯಕ, ಸಂಗೀತ ನಿರ್ದೇಶಕ ಶ್ರೀ ನವೀನ್ ಸಜ್ಜು ಮತ್ತು ತಂಡದವರಿಂದ ಸಾಂಸ್ಕೃತಿಕ ಸಂಜೆ ಪ್ರದರ್ಶನಗೊಂಡವು.

ರಾಜಧಾನಿ ದೆಹಲಿಯಲ್ಲಿ ಆರಂಭಗೊಂಡ ದೆಹಲಿಯ ನಾಡಪ್ರಭು ಕೆಂಪೇಗೌಡ ಫೌಂಡೇಶನ್ ದೆಹಲಿಯಲ್ಲಿ ಶ್ರೀ ಬಿ.ಎಲ್. ಸುರೇಶ್ ಅವರ ಅಧ್ಯಕ್ಷತೆಯಲ್ಲಿ ಮತ್ತು ಯುವ ಸಂಘಟಕ ಶ್ರೀ ಸಿ.ಎಂ. ನಾಗರಾಜ ಅವರ ನೇತೃತ್ವದಲ್ಲಿ ಹಲವು ಉತ್ತಮ ಯೋಜನೆಗಳನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಉದ್ಘಾಟನಾ ಸಮಾರಂಭದಲ್ಲಿ ಮಾತನಾಡುತ್ತ ಹೇಳಿದರು. ರಾಷ್ಟ್ರದ ರಾಷ್ಟ್ರಪತಿಗಳು ದೆಹಲಿಯಲ್ಲಿ ಕನ್ನಡದ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳುವಂತೆ ಮಾಡಿದ ಫೌಂಡೇಶನ್‌ನ ಪ್ರಯತ್ನ ಅಭಿನಂದನೀಯ ಎಂದರು ಹಾಗೂ ಇದು ದೆಹಲಿ ಕನ್ನಡಿಗರಿಗೆ ಹೆಮ್ಮೆಯ ವಿಷಯವಾಗಿದೆ ಎಂದರು. ಬೆಂಗಳೂರನ್ನು ಕಟ್ಟಿದ ನಾಡಪ್ರಭು ಕೆಂಪೇಗೌಡ ಅವರನ್ನು ಕೇವಲ ಒಕ್ಕಲಿಗರ ನಾಯಕನಾಗಿ ಬಿಂಬಿಸದೆ ಕನ್ನಡದ ಜನನಾಯಕನಾಗಿ ಬಿಂಬಿಸಬೇಕೆಂದರು.

ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಮತ್ತು ಅಧ್ಯಕ್ಷ ಶ್ರೀ ಬಿ.ಎಲ್. ಸುರೇಶ್ ಅವರ ಎಡೆಬಿಡದ ಶ್ರಮದಿಂದಾಗಿ ಈ ಎರಡೂ ದಿನಗಳ ಉತ್ಸವ ಕಾರ್ಯಕ್ರಮವು ಬಹಳ ಅದ್ದೂರಿಯಾಗಿ ನಡೆಯಿತು. ಅ

***ಅಭಿಮತ ವರದಿ***



















# ಸಂಘದಲ್ಲಿ ಸಡಗರದ ವಾರ್ಷಿಕೋತ್ಸವ

ದೆಹಲಿ ಕರ್ನಾಟಕ ಸಂಘದ 2016–17ನೇ ಸಾಲಿನ ವಾರ್ಷಿಕೋತ್ಸವ ಇದೇ ಏಪ್ರಿಲ್ 2ರಂದು ಆಯೋಜಿಸಿತ್ತು. ಈ ಕಾರ್ಯಕ್ರಮದ ಅಂಗವಾಗಿ ಮಂಗಳೂರಿನ ಬಾಯ್ಸ್ ಝೋನ್ ತಂಡದಿಂದ ವಿವಿಧ ನೃತ್ಯ ಪ್ರಕಾರಗಳನ್ನು ತರಬೇತಿ ಪಡೆದ ಶಿಬಿರಾರ್ಥಿಗಳಿಂದ ಮತ್ತು ಬಾಯ್ಸ್ ಝೋನ್ ತಂಡದ ಕಲಾವಿದರಿಂದ ನೃತ್ಯ ವೈಭವ ಕಾರ್ಯಕ್ರಮ ನೆರವೇರಿತು. ಸುಮಾರು ನೂರಕ್ಕೂ ಹೆಚ್ಚು ದೆಹಲಿಯ ಕನ್ನಡಿಗರು ವಿಶೇಷ ಆಸಕ್ತಿಯಿಂದ ಭಾಗವಹಿಸಿದ್ದರು.

ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಮಾಂಡೆಂಟ್, ಎಸ್.ಡಿ.ಜಿ. ಶ್ರೀ ಹರ್ಷವರ್ಧನ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿದರು. ವಾರ್ಷಿಕ ಕ್ರೀಡಾಕೂಟಕ್ಕೆ ಸಹಕರಿಸಿದ್ದ ಅವರು ಇನ್ನೂ ಮುಂದೆಯೂ ಆಟೋಟ ಸ್ಪರ್ಧೆಗಳಿಗೆ ಎಲ್ಲಾ ರೀತಿಯ ಸಹಕಾರವನ್ನು ನೀಡಿ ಸಹಕರಿಸುತ್ತೇವೆ ಎಂದು ಮುಕ್ತ ಕಂಠದಿಂದ ಹೇಳಿದರು.

ಸಂಘದ ಉಪಾಧ್ಯಕ್ಷೆ ಶ್ರೀಮತಿ ಆಶಾಲತ ಅವರು ಈ ತರಬೇತಿಯ ಪೂರ್ತಿ ಜವಾಬ್ದಾರಿಯನ್ನು ವಹಿಸಿಕೊಂಡು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿ ಯಶಸ್ವಿಗೊಳಿಸಿದರು.

ವಾರ್ಷಿಕೋತ್ಸವದ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಸದಸ್ಯರಿಗೆ ಬಹುಮಾನವನ್ನು ವಿತರಿಸಲಾಯಿತು. ಈ ಕಾರ್ಯಕ್ರಮವನ್ನು ಉಪಾಧ್ಯಕ್ಷೆ ಶ್ರೀಮತಿ ಆಶಾಲತ, ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಡಾ. ಎಂ.ಎಸ್. ಶಶಿಕುಮಾರ್, ಶ್ರೀ ಸಖಾರಾಮ ಉಪ್ಪೂರು ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ಸಂಘದ ಹಿರಿಯ ಆಜೀವ ಸದಸ್ಯರು ಆಗಿರುವ ಪ್ರೊ. ಎಚ್.ಎಸ್. ಪ್ರಭಾಕರ್ ಅವರು ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ನಿವೃತ್ತಿ ಹೊಂದಿ ತಾಯ್ನಾಡಿಗೆ ಮರಳುತ್ತಿರುವ ಪ್ರೊ. ಪ್ರಭಾಕರ್ ದಂಪತಿಗಳನ್ನು ವೇದಿಕೆಯ ಮೇಲೆ ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಅತ್ಯಂತ ಗೌರವದಿಂದ ಬೀಳ್ಕೊಡಲಾಯಿತು. ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ಮಾತನಾಡುತ್ತ ಪ್ರೊ. ಪ್ರಭಾಕರ್ ಅವರ ಜೆ.ಎನ್.ಯು. ವಿಶ್ವವಿದ್ಯಾಲಯದಲ್ಲಿ ಜಪನೀಸ್ ಅಧ್ಯಯನಕ್ಕೆ ಸಂಬಂಧಿಸಿದಂತೆ ಅವರ ಕೊಡುಗೆಯನ್ನು ಕೊಂಡಾಡಿದ್ದು ಅಷ್ಟೇ ಅಲ್ಲದೆ ಪ್ರಭಾಕರ್ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳಿಗಾಗಿ ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು.

ಎಚ್.ಎಸ್. ಪ್ರಭಾಕರ್ ಅವರು ಮಾತನಾಡುತ್ತ 40 ವರ್ಷಕ್ಕೂ ಮೀರಿದ ದೆಹಲಿ ಜೀವನದಲ್ಲಿ ಕನಾಟಕ ಸಂಘದ ಅನೇಕ ಅರ್ಥಬದ್ಧ ಕಾರ್ಯಕರಮಗಳಲ್ಲಿ ಭಾಗವಹಿಸಿ ತನ್ನಿಂದಾದ ಅಳಿಲು ಸೇವೆ ಮಾಡಿದ್ದೇನೆ. ಸಂಘವು ಇತ್ತೀಚಿನ ದಿನಗಳಲ್ಲಿ ಬಹಳ ಒಳ್ಳೆಯ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿರುವುದು ತುಂಬಾ ಶ್ಲಾಘನೀಯ ಎಂದು ನುಡಿದರು.

ನಮ್ಮ ಸಂಘದ ಆಜೀವ ಸದಸ್ಯರಾಗಿದ್ದು ಸಂಘದ ವಿವಿಧ ಸಾಂಸ್ಕೃತಿಕ ಮತ್ತು ಕಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಶ್ರೀ ಸುಧೀರ್ ಫಡ್ನೀಸ್ ಅವರು ಇತ್ತೀಚಿನ ದಿನಗಳಲ್ಲಿ ಹಲವಾರು ಪ್ರತಿಷ್ಠ ಪುರಸ್ಕಾರ ಮತ್ತು ಪ್ರಶಸ್ತಿಗಳನ್ನು ದೇಶದ ವಿವಿಧ ಕಡೆಗಳಲ್ಲಿ ಪಡೆದಿರುತ್ತಾರೆ. ಶ್ರೀ ಸುಧೀರ್ ಅವರನ್ನು ಸಹ ವಾರ್ಷಿಕೋತ್ಸವ ಸಂದರ್ಭದಲ್ಲಿ ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಗೌರವಿಸಲಾಯಿತು.

ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ನೃತ್ಯ ತರಬೇತಿಯನ್ನು ನೀಡಿದ ಬಾಯ್ಸ್ ಝೋನ್ ತಂಡದ ಸದಸ್ಯರಿಗೆ ಕೃತಜ್ಞತೆಯನ್ನು ಹೇಳಿದರು. ಅವರು ಬಹುಮಾನ ವಿಜೇತರನ್ನು ಅಭಿನಂದಿಸಿ ಮಾತನಾಡಿದರು.

ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಅ

**ಅಭಿಮತ ವರದಿ**


























ಏಪ್ರಿಲ್ ಸಂಚಿಕೆಯಲ್ಲಿ ಆಶುಭಾಷಣ ಸ್ಪರ್ಧೆಯಲ್ಲಿ ವಿಜೇತರಾಗಿದ್ದ, ಆದರೆ ಮುದ್ರಣ ದೋಷದಿಂದಾಗಿ ತಪ್ಪಿ ಹೋಗಿದ್ದ ಹೆಸರುಗಳು (ಆಶುಭಾಷಣ ಸ್ಪರ್ಧೆಯ ಫಲಿತಾಂಶ (7–10ವರ್ಷ) 1. ಕ್ಷಿತಿಜ್ 2. ರಚನಾ ಜೆ. 3. ಶ್ರೇಷ್ಠಾ)



# ದೆಹಲಿಯ ಕನ್ನಡಿಗರಿಂದ ಅಂಬೇಡ್ಕರ್ ಜಯಂತಿ ಆಚರಣೆ







ಸಂವಿಧಾನ ಶಿಲ್ಪಿ ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 126ನೇ ಜಯಂತಿಯನ್ನು ರಾಷ್ಟ್ರದ ರಾಜಧಾನಿಯ ಕನ್ನಡಿಗರು ಅಂಬೇಡ್ಕರ್ ಅವರ ಕುರಿತು ವಿಚಾರ ಸಂಕಿರಣವನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಇದೇ ಏಪ್ರಿಲ್ 14ರಂದು ಏರ್ಪಡಿಸಿ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಸೆಂಟರ್ ಫಾರ್ ಪೊಲಿಟಿಕಲ್ ಸ್ಟಡೀಸ್‌ನ ಪ್ರೊ. ನರೇಂದ್ರ ಕುಮಾರ ಅವರು ಮಾತನಾಡಿ ಡಾ. ಬಿ.ಆರ್. ಅಂಬೇಡ್ಕರ್ ಮತ್ತು ಅವರ ಪ್ರಜಾಪ್ರಭುತ್ವದ ಪಾತ್ರದ ಬಗ್ಗೆ ತಿಳಿಸಿದರು. ಅವರು ಡಾ. ಬಿ.ಆರ್. ಅಂಬೇಡ್ಕರವರ ವಿಚಾರಧಾರೆಯ ಜೊತೆಗೆ ವಿಚಾರ ಸಂಕಿರಣದಲ್ಲಿ ಮಾತನಾಡಿದ ಎಲ್ಲರ ಅಭಿಪ್ರಾಯಗಳನ್ನು ಕ್ರೋಢಿಕರಿಸಿ ಸಮಾಜದ ಸುಧಾರಣೆಯ ಬಗ್ಗೆ ಚಿಂತಿಸುವ ಬೀಜ ಬಿತ್ತಿದರು.

ದೆಹಲಿಯ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಹ್ಯೂಮ್ಯಾನಿಟಿಯ ಪ್ರೊ. ಪ್ರಮೋದ್ ಕುಮಾರ್ ಮೇಹ್ರಾ ಅವರು ಡಾ. ಅಂಬೇಡ್ಕರ್ ಮತ್ತು 21ನೇ ಶತಮಾನದ ಯುವ ಪೀಳಿಗೆಗಳ ಕುರಿತು ಮಾತನಾಡಿದರು. ದೆಹಲಿ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಅನು ಮೇಹ್ರಾ ಅವರು ಹಿಂದೂ ಕೋಡ್ ಬಿಲ್‌ನ ಬಗ್ಗೆ ಮಾತನಾಡಿ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ, ಇಂದಿಗೂ ಜೀವಂತವಾಗಿರುವ ಸಾಮಾಜಿಕ ಅನಿಷ್ಠ ಪದ್ಧತಿ ಹಾಗೂ ಮಹಿಳಾ ಮತ್ತು ಮಕ್ಕಳ ಶೋಷಣೆ ಹಾಗೂ ಮಹಿಳೆಯರ ಸುರಕ್ಷತೆಯ ಕುರಿತು ವಿವರವಾಗಿ ತಿಳಿಸಿದರು. ಜೆಎನ್‌ಯುನ ಸ್ಕೂಲ್ ಆಫ್ ಎನ್ವಿರನ್‌ಮೆಂಟ್‌ನ ಪ್ರೊ. ಪಿ.ಎಸ್. ಕಿಲ್ಲಾರೆ ಅವರು ಕೂಡಾ ಮಾತನಾಡಿದರು. ಡಾ. ಅಂಬೇಡ್ಕರ್ ಫೌಂಡೇಷನ್ ಸದಸ್ಯರಾದ ಡಾ. ವೆಂಕಟೇಶ್ ಕುಮಾರ್ ಮೌರ್ಯ ಅವರು ಮಾತಾಡಿ ಭಾರತ ಸರ್ಕಾರವು ಪರಿಶಿಷ್ಟಜಾತಿ ಮತ್ತು ಪಂಗಡದವರಿಗೆ ನೀಡುತ್ತಿರುವ ಸೌಲಭ್ಯವನ್ನು ಪಡೆದು ಸಮಾಜದಲ್ಲಿ ಸದೃಡರಾಗುವಂತೆ ಕಿವಿಮಾತು ಹೇಳಿದರು. ಈ ಸಂದರ್ಭದಲ್ಲಿ ಕರ್ನಾಟಕ ಭವನದ ಶ್ರೀ ಆರ್. ರೇಣು ಕುಮಾರ್ ಮತ್ತು ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಸಿ.ಎಂ ನಾಗರಾಜ್ ಅವರೂ ಮಾತಾಡಿದರು.

ಆರಂಭದಲ್ಲಿ ಬಾಬಾ ಸಾಹೇಬ್ ಅವರ ಭಕ್ತಿಗೀತೆಯನ್ನು ಶ್ರೀ ಎಸ್. ಕುಮಾರ್, ಶ್ರೀ ಅಮರೇಶ್ ಎಸ್.ಎಚ್. ಮತ್ತಿತರರು ಹಾಡಿದರು. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಗೌರವವನ್ನೂ ಸಲ್ಲಿಸಲಾಯಿತು. ಶ್ರೀ ತ್ಯಾಗೇಶ್ ಮೂರ್ತಿ, ಶ್ರೀ ರಾಧಾಕೃಷ್ಣ ಮತ್ತು ದೆಹಲಿಯ ವಿವಿಧ ಶಿಕ್ಷಣ ಸಂಸ್ಥೆಗಳಿಂದ ವಿದ್ಯಾರ್ಥಿಗಳು ಮತ್ತು ದೆಹಲಿಯ ಕನ್ನಡಿಗರು ಸಭೆಯಲ್ಲಿ ಭಾಗವಹಿಸಿದ್ದರು. ಶ್ರೀ ಬಿ.ಕೆ. ಬಸವರಾಜು ಅವರು ಸ್ವಾಗತ ಭಾಷಣ ಮಾಡಿದರು. ಡಾ. ಶಿವಾಜಿ ಭಂಡಾರ್‌ಕರ್ ಅವರು ವಂದಿಸಿದರು. ಅಶೋಕನ್ ಮತ್ತು ಡಾ. ಎಂ. ಎಸ್. ಶಶಿಕುಮಾರ್ ಅವರು ಕಾರ್ಯಕ್ರಮದ ನಿರೂಪಿಸಿದರು. ಅ

***ಅಶೋಕನ್***




# ಗುರ್‌ಗಾಂವ್ ಕನ್ನಡ ಸಂಘದಿಂದ ಯುಗಾದಿ ಮಿಲನ

ಹೊಸ ವರ್ಷ ಯುಗಾದಿಯ ಸಂದರ್ಭದಲ್ಲಿ ಗುರ್‌ಗಾಂವ್ ಕನ್ನಡ ಸಂಘದಿಂದ ಸಾಂಸ್ಕೃತಿಕ ಸಮ್ಮಿಲನವು ಇದೇ ಏಪ್ರಿಲ್ 9ರಂದು ವಿಜೃಂಭಣೆಯಿಂದ ನಡೆಯಿತು. ಕರ್ನಾಟಕ ಹೈಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಶ್ರೀ ಎಚ್.ಎನ್. ನಾಗಮೋಹನ್ ದಾಸ್ ಅವರು ಮತ್ತು ಗುರಗಾಂವ್‌ನ ಪ್ರಸಿದ್ಧ ಅರ್ಥೋಪೆಡಿಕ್ ಸರ್ಜನ್ ಆಗಿರುವ ಶ್ರೀ ತ್ಯಾಗರಾಜ್ ಸಿಂಗಾರಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಸ್ಫೂರ್ತಿಯ ನುಡಿಗಳಿಂದ ಸದಸ್ಯರಿಗೆ ಮಾರ್ಗದರ್ಶನ ಮಾಡಿದರು. ಕಾರ್ಯಕ್ರಮದ ಅಂಗವಾಗಿ ಸುಶ್ರಾವ್ಯವಾದ ಧ್ವನಿಯಿಂದ ಭಕ್ತಿಗೀತೆ, ಭಾವಗೀತೆ, ಜನಪದ ಗೀತೆ, ವೀಣಾವಾದನ ಮತ್ತು ಸಿನಿಮಾ ಗೀತೆಗಳ ಮಧುರ ಗಾಯನ ಮತ್ತು ಛದ್ಮವೇಷ, ಸಿನಿಮಾ ಹಾಡಿಗೆ ನೃತ್ಯಗಳು, ಜಾನಪದ ನೃತ್ಯಗಳು ನಡೆದವು. ಅ

***ಗಣೇಶ ಉಪಾಧ್ಯಾಯ***

## ಕವನ

### ಕಸಗುಡಿಸುವಾಕೆ

ಮನೆಯನ್ನೆಲ್ಲಾ ಗುಡಿಸಿ ಕಸಕಡ್ಡಿ
ಧೂಳನ್ನು ಸ್ವಚ್ಛಗೊಳಿಸಿ ಮನೆಯ ಹೊರಗೆ
ಎಸೆದು ಶುದ್ಧವಾಗಿಡುವ ಮನೆಗೆಲಸದಾಕೆಗೆ
ನಾವು ನೀಡುವುದಾದರೂ ಏನು?
ಬರೆ ನಿನ್ನೆಮೊನ್ನೆಯ ಉಳಿದ ತಂಗಳ ಊಟ
ಉಟ್ಟು ಹರಿದ ಹಳೆಯ ಸೀರೆ–ಬಟ್ಟೆಬರೆ
ವರ್ಷದಲ್ಲೊಮ್ಮೆ ಒಂದು ಚೂರು ಸಿಹಿತಿಂಡಿ

ಇಷ್ಟೇ ಹೊರತು ಆಕೆ ಏನಾದರೂ ಅಪ್ಪಿತಪ್ಪಿ
ಬಳಿ ಬಂದರೆ ಮೂಗು ಮುಚ್ಚುವ ನಾವು
ದಿನನಿತ್ಯ ಸುಗಂಧ ಸಾಬೂನು ಹಾಕಿ
ಉಜ್ಜಿಉಜ್ಜಿ ಸ್ನಾನ ಮಾಡಿ ಗರಿಗರಿ ಬಟ್ಟೆ ತೊಟ್ಟು
ಸ್ನೋ–ಪೌಡರ್, ಫರ್‌ಫ್ಯೂಮ್ ಹೊಯ್ದುಕೊಂಡು
ಬಿಸಿಬಿಸಿ ರುಚಿರುಚಿಯಾದ ಅಡುಗೆ ಉಂಡು
ಮೆರೆದಾಡುವ ನಾವು

ಆಕೆಯೂ ನಮ್ಮಂತೆಯೇ ಎಂದು ಗ್ರಹಿಸುವ
ದೊಡ್ಡ ಮನಸ್ಸಿನವರಾಗಲು ನಮ್ಮ ಮನದ
ಕಸ–ಬಲೆಗಳನ್ನು ಗುಡಿಸಿಕೊಳ್ಳುವ ಗೋಜಿಗೆ
ಹೋಗುವುದೆಂದು? ಮನೆ ಸ್ವಚ್ಛಗೊಳಿಸುವ
ಆ ಬಡ ಕೆಲಸದವಳಿಗಿಂತ ಕೊಳೆತು ನಾರುವ
ಮನಸ್ಸಿನ ನಾವೇ ಅಸಲಿ ಬಡವರಲ್ಲವೇ?

***ಸಖಾರಾಮ ಉಪ್ಪೂರು***

## ಸಾಧಕರಿಗೆ ಅಭಿನಂದನೆಗಳು



### ಸಂಗೀತ ಮಠ್

ಇತ್ತೀಚೆಗೆ ದೆಹಲಿ ಶಿಕ್ಷಣ ಇಲಾಖೆಯು ನಡೆಸಿದ ರಾಜ್ಯಮಟ್ಟದ ಜ್ಯೂನಿಯರ್ ಬಾಲಕಿಯರ ಶಾಸ್ತ್ರೀಯ ಸಂಗೀತ ವೈಯಕ್ತಿಕ ವಿಭಾಗದ ಸ್ಪರ್ಧೆಯಲ್ಲಿ ದೆಹಲಿ ಕನ್ನಡ ಶಾಲೆಯ ಏಳನೇ ತರಗತಿಯ ವಿದ್ಯಾರ್ಥಿನಿ ಸಂಗೀತ ಮಠ್ ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.
ಖ್ಯಾತ ಹಿಂದೂಸ್ಥಾನಿ ಗಾಯಕಿ ವೀಣಾ ಮರಡೂರ್ ಅವರ ಪುತ್ರಿಯಾಗಿರುವ ಈಕೆ ಸತತ ಮೂರನೇ ಬಾರಿ ರಾಜ್ಯಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾಳೆ. ಅ



### ಮಹಾಬಲೇಶ್ವರ ಭಟ್ ಎಂ.ಎಸ್.

ಖಾಸಗಿ ವಲಯದ ಪ್ರಮುಖ ಬ್ಯಾಂಕ್ ಆಗಿರುವ ಕರ್ಣಾಟಕ ಬ್ಯಾಂಕಿನ ನೂತನ ಮ್ಯಾನೇಜಿಂಗ್ ಡೈರೆಕ್ಟರ್ ಮತ್ತು ಚೀಫ್ ಎಕ್ಸಿಕ್ಯೂಟಿವ್ ಆಫೀಸರ್ ಆಗಿ ಶ್ರೀ ಮಹಾಬಲೇಶ್ವರ ಭಟ್ ಎಂ.ಎಸ್. ಅವರು ಮಂಗಳೂರಿನಲ್ಲಿರುವ ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ ಇತ್ತೀಚೆಗೆ ಅಧಿಕಾರ ಸ್ವೀಕರಿಸಿದರು. ಅವರು ಮೂರು ವರ್ಷಗಳ ಅಧಿಕಾರಾವಧಿಯನ್ನು ಹೊಂದಿದ್ದಾರೆ. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣ ಕಾಲದಲ್ಲಿ ಅವರು ವೈಯಕ್ತಿಕವಾದ ಆಸಕ್ತಿಯನ್ನು ವಹಿಸಿಕೊಂಡು ಬ್ಯಾಂಕಿನಿಂದ ಸಂಘಕ್ಕೆ ಸಹಾಯವನ್ನು ಮಾಡಿದ್ದರು. ಅ

### ಶ್ರೀನಿವಾಸ ಜಿ. ಕಪ್ಪಣ್ಣ



'ಬಿ.ವಿ. ಕಾರಂತ' ಪ್ರಶಸ್ತಿ ಕನ್ನಡದ ಹವ್ಯಾಸಿ ರಂಗಭೂಮಿ ಕ್ಷೇತ್ರದಲ್ಲಿ ಸುದೀರ್ಘ ಸೇವೆ ಹಾಗೂ ಅನನ್ಯ ಕೊಡುಗೆಯನ್ನು ನೀಡುತ್ತಾ ಬಂದಿರುವ ಕಲಾವಿದರಿಗೆ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಹವ್ಯಾಸಿ ರಂಗಭೂಮಿಯಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ 2016ನೇ ಸಾಲಿನ ಬಿ.ವಿ. ಕಾರಂತ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುತ್ತಿದೆ. ಇವರು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರೂ ಕೂಡಾ. ಅ



### ಡಾ. ಪುರುಷೋತ್ತಮ ಬಿಳಿಮಲೆ


ಕಲಾರಂಗ ಸಂಸ್ಥೆ 'ತಲ್ಲೂರು ಕನಕಾ ಅಣ್ಣಯ್ಯ ಶೆಟ್ಟಿ' ಅವರ ಹೆಸರಿನಲ್ಲಿ ಯಕ್ಷಗಾನ ವಿದ್ವಾಂಸರಿಗೆ ನೀಡುವ 2017ನೇ ಸಾಲಿನ ಪ್ರಶಸ್ತಿಗೆ ಖ್ಯಾತ ಜಾನಪದ ವಿದ್ವಾಂಸ, ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ, ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಪ್ರಾಧ್ಯಾಪಕರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಆಯ್ಕೆಯಾಗಿದ್ದಾರೆ. ಈ ಪ್ರಶಸ್ತಿಯು ರೂ. 40ಸಾವಿರವನ್ನೊಳಗೊಂಡಿದೆ. ಅ



### ಪ್ರೊ. ಎಚ್.ಎಸ್. ಶಿವಪ್ರಕಾಶ್

ಪ್ರತಿಷ್ಠಿತ ಕುಸುಮಾಗ್ರಜ ರಾಷ್ಟ್ರೀಯ ಭಾಷಾ ಸಾಹಿತ್ಯ ಪುರಸ್ಕಾರಕ್ಕೆ ಕನ್ನಡದ ಹಿರಿಯ ಕವಿ, ನಾಟಕಕಾರ, ವಿಮರ್ಶಕ ಪ್ರೊ.ಎಚ್.ಎಸ್. ಶಿವಪ್ರಕಾಶ್ ಆಯ್ಕೆಯಾಗಿದ್ದಾರೆ. ಕುಸುಮಾಗ್ರಜ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದ ಮರಾಠೀ ಲೇಖಕ ದಿವಂಗತ ವಿಷ್ಣು ವಾಮನ ಶಿರ್ವಾಡ್ಕರ್ ಅವರ ಸ್ಮರಣಾರ್ಥ ಈ ಪ್ರಶಸ್ತಿಯನ್ನು ಮರಾಠಿಯೇತರ ಭಾರತೀಯ ಭಾಷಾ ಬರಹಗಾರರಿಗೆ ನೀಡಲಾಗುತ್ತದೆ. ಭಾರತೀಯ ಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ಸಲ್ಲಿಸಿದ ಗಣ್ಯ ಬರಹಗಾರರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಯಶವಂತರಾವ್ ಚವಾಣ್ ಮಹಾರಾಷ್ಟ್ರ ಮುಕ್ತ ವಿಶ್ವವಿದ್ಯಾಲಯ ಈ ಪ್ರಶಸ್ತಿಯನ್ನು ಸ್ಥಾಪಿಸಿದೆ. ಅ

## ಗುರ್‌ಗಾಂವ್ ಕನ್ನಡ ಸಂಘದ ನೂತನ ಕಾರ್ಯಕಾರಿ ಸಮಿತಿ



ಇತ್ತೀಚೆಗೆ ಗುರ್‌ಗಾಂವ್ ಕನ್ನಡ ಸಂಘಕ್ಕೆ ಹೊಸ ಪದಾಧಿಕಾರಿಗಳ ಆಯ್ಕೆ ನಡೆದಿತ್ತು. ವಿವರ ಹೀಗಿದೆ : **ಅಧ್ಯಕ್ಷರು–**ಶ್ರೀ ಗಣೇಶ ಉಪಾಧ್ಯಾಯ, **ಉಪಾಧ್ಯಕ್ಷರು–** ಶ್ರೀ ಪ್ರಭಾಕರ ಮಡ್ಡಿತೋಟ ಮತ್ತು ಶ್ರೀಮತಿ ಕಲ್ಪನಾ ವಸಂತ ರಾವ್, **ಪ್ರಧಾನ ಕಾರ್ಯದರ್ಶಿ–** ಶ್ರೀ ಕುಮಾರ ಸಿ., **ಖಜಾಂಚಿ–** ಶ್ರೀ ಮರಿಬಸಪ್ಪ.
**ಸಮಿತಿ ಸದಸ್ಯರುಗಳಾಗಿ** ಶ್ರೀ ಲಕ್ಷ್ಮಣ ಕಟ್ಟೀಮನಿ, ಶ್ರೀ ಶಾಂತಕುಮಾರ ನಿಂಬೋಳ, ಶ್ರೀ ಗೋಪಾಲ ತಲ್ವಾರ್, ಶ್ರೀ ಜಿ.ಎನ್. ಲಕ್ಷ್ಮೀ ನಾರಾಯಣ, ಶ್ರೀ ಕೆ.ಕೆ. ಸಂತೋಷ್, ಶ್ರೀ ಶಿವಕುಮಾರ, ಶ್ರೀಮತಿ ಸುನಂದ ಸಾಬು, ಶ್ರೀ ರಾಜಕುಮಾರ್ ನೆಲ್ಲೂರು, ಶ್ರೀಮತಿ ಶಶಿ ರವಿ ಆಚಾರ್ಯ, ಶ್ರೀ ಗೋಪಾಲಕೃಷ್ಣ ಭಟ್ ಅವರು ಆಯ್ಕೆಯಾಗಿದ್ದಾರೆ. ಅ



### ಎಂ. ಶಿವರಾಮ ರೈ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ವಿಶೇಷ ಆಹ್ವಾನಿತರಾದ ಶ್ರೀ ಎಂ. ಶಿವರಾಮ ರೈ ಅವರು ದೆಹಲಿ ಕ್ರಿಕೆಟ್ ಕೋಚರ್ಸ್ ಅಸೋಸಿಯೇಶನ್‌ನ ಖಜಾಂಚಿಯಾಗಿ ಆಯ್ಕೆಯಾಗಿರುತ್ತಾರೆ. ನವದೆಹಲಿಯ ಆರ್.ಕೆ.ಪುರಮ್ ಡೆಲ್ಲಿ ಪಬ್ಲಿಕ್ ಸ್ಕೂಲ್‌ನಲ್ಲಿ ಕ್ರೀಡಾ ಶಿಕ್ಷಕರಾಗಿದ್ದ ಇವರ ಕೈಕೆಳಗೆ ತರಬೇತಿ ಪಡೆದ ಅನೇಕ ಹುಡುಗರು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಕ್ರಿಕೆಟ್ ಪಟುಗಳಾಗಿದ್ದಾರೆ. ಅ




# ನಾನು ಬರೆಯುವ ಗೀತೆ ಪಾತ್ರಕ್ಕೆ ಮತ್ತು ಸನ್ನಿವೇಶಕ್ಕೆ ಹೊಂದಾಣಿಕೆಯಾಗಬೇಕು, ಸಂಗೀತ ನಿರ್ದೇಶಕನ ಸ್ವರ ಪ್ರಸ್ತಾರಗಳಿಗೆ ಹೊಂದಾಣಿಕೆಯಾಗಬೇಕು- ಕವಿ ದೊಡ್ಡರಂಗೇಗೌಡ

ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ ಸಾಹಿತಿ ಹಾಗೂ ಗೀತ ರಚನಾಕಾರ **ದೊಡ್ಡರಂಗೇಗೌಡ** ಅವರೊಂದಿಗೆ ಸಂಘದ ಅಧ್ಯಕ್ಷರಾದ **ಶ್ರೀ ವಸಂತ ಶೆಟ್ಟಿ ಬೆಳ್ಳಾರೆ** ಅವರು ಅಭಿಮತಕ್ಕಾಗಿ ವಿಶೇಷವಾಗಿ ಸಂದರ್ಶಿಸಿದರು. ಸಂದರ್ಶನದ ಆಯ್ದಭಾಗವನ್ನು ಅಭಿಮತದ ಓದುಗರಿಗೆ ನೀಡುತ್ತಿದ್ದೇವೆ.

**ವಸಂತ ಶೆಟ್ಟಿ ಬೆಳ್ಳಾರೆ :** ತಾವು ದೆಹಲಿಗೆ ಬಂದಾಗಲೆಲ್ಲ ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡುತ್ತೀರಿ, ಅದು ನಮ್ಮ ದೆಹಲಿ ಕನ್ನಡಿಗರ ಸೌಭಾಗ್ಯ ಎಂದು ತಿಳಿದಿದ್ದೇನೆ. ತಾವು ಕನ್ನಡ ಚಿತ್ರರಂಗದ ಸಾಹಿತಿಯಾಗಿ ಸುಮಾರು 500ಕ್ಕೂ ಹೆಚ್ಚು ಗೀತೆಗಳನ್ನು ರಚಿಸಿದ್ದೀರಿ. ನಿಮ್ಮ ಎಲ್ಲಾ ಗೀತೆಗಳು ಸಾಹಿತ್ಯಕವಾಗಿ ಸಂಪದ್ಭರಿತವಾಗಿತ್ತು. ಈಗಿನ ಹಾಡುಗಳಲ್ಲಿ ಸಾಹಿತ್ಯವೇ ಇಲ್ಲ ಎನ್ನುವಂತಾಗಿದೆ. ಈ ಕುರಿತು ತಮ್ಮ ಅನಿಸಿಕೆ ಏನು?

**ದೊಡ್ಡರಂಗೇಗೌಡ :** ನಾನು ಚಲನಚಿತ್ರ ರಂಗ ಪ್ರವೇಶ ಮಾಡುವ ಕಾಲಕ್ಕೆ ಶುದ್ಧ ಆಭಿರುಚಿಯ ಕನ್ನಡ ಚಿತ್ರಗಳು ನಿರ್ಮಾಣವಾಗುತ್ತಿತ್ತು. ನಿರ್ಮಾಪಕರೂ ಅದೇ ಬಗೆಯಲ್ಲಿ ಅಭಿರುಚಿಯನ್ನು ಹೊಂದಿರುತ್ತಿದ್ದರು. ನಿರ್ದೇಶಕರಂತು ಒಂದು ಚಲನ ಚಿತ್ರ ಅಂದ್ರೆ ಒಂದು ಕಲಾಕೃತಿ ಎನ್ನುವ ಅರ್ಥದಲ್ಲಿ ಪರಿಭಾವಿಸುತ್ತಿದ್ದರು. ಅದಕ್ಕೆ ಒಂದು ಗೌರವಯುತವಾದ ಸ್ಥಾನವನ್ನು ಕೊಟ್ಟಿದ್ದರು. ಹಾಗಾಗಿ ಕವಿಗಳೇ ಕವಿತೆಗಳನ್ನು ಬರೆಯಬೇಕೆನ್ನುವ ಒಂದು ಪದ್ಧತಿಯನ್ನು ಇಟ್ಟುಕೊಂಡಿದ್ದರು. ನನಗಿಂತ ಹಿಂದೆ ಎಸ್.ಕೆ.ಆಚಾರ್ಯ ಅಥವಾ ಅದಕ್ಕಿಂತ ಹಿಂದಿನ ನಿರ್ದೇಶಕರು, ದೊರೆ ಭಗವಾನ್ ಅಂತವರು, ಕುವೆಂಪು, ಬೇಂದ್ರೆ, ನರಸಿಂಹ ಸ್ವಾಮಿ, ಪು.ತಿ.ನ, ರಾಜರತ್ನಂ ಅವರ ಕವನ ಸಂಕಲನಗಳಿಂದ ಕವಿತೆಗಳನ್ನು ಆಯ್ಕೆ ಮಾಡಿಕೊಂಡು ಅವರು ಸನ್ನಿವೇಶಗಳಿಗೆ ಅನುಗುಣವಾದಂತಹ ರೀತಿಯಲ್ಲಿ ಆ ಸನ್ನಿವೇಶಕ್ಕೆ ಸರಿಯಾಗಿ ಅಳವಡುವಂತಹ ಗೀತೆಗಳನ್ನು ಆಯ್ಕೆಮಾಡಿಕೊಳ್ಳುತ್ತಿದ್ದರು. ನಂತರ ಆ ಹಾಡಿಗೆ ಸಂಗೀತ ನಿರ್ದೇಶನ ಮಾಡಿಸಿ ಚಿತ್ರಗಳಿಗೆ ಅಳವಡಿಸುತ್ತಿದ್ದರು. ಹೀಗೆ ಒಳ್ಳೆ ಚಿತ್ರಗಳನ್ನು ಚಿತ್ರೀಕರಿಸುವ ಒಂದು ಪದ್ಧತಿ ಆಗ ಇತ್ತು. ನಾನು ಗೀತೆ ರಚನೆ ಮಾಡುವ ಕಾಲಕ್ಕೆ ಉದಯ ಶಂಕರ್, ಜಯಗೋಪಾಲ್ ಮತ್ತು ವಿಜಯನರಸಿಂಹ ಈ ಮೂರು ಜನ ಹೆಚ್ಚಾಗಿ ಚಿತ್ರಗೀತೆಗಳನ್ನು ಬರೆಯುತ್ತಿದ್ದರು. ಅವರು ಸಂಗೀತ ನಿರ್ದೇಶಕ ಕೊಡುವ ಸ್ವರ ಪ್ರಸ್ತಾರಗಳಿಗೆ ತಮ್ಮ ಸಾಹಿತ್ಯವನ್ನು ಜೋಡಿಸುವಂತಹ, ತನ್ಮೂಲಕ ಒಂದು ಅರ್ಥವನ್ನು ರೂಪಿಸುವಂತಹ ಹಾಗೂ ಅದನ್ನು ಧ್ವನಿಪೂರ್ಣ ಮಾಡುವಂತಹ ಒಂದು ಪದ್ಧತಿಯನ್ನು ಅಳವಡಿಸಿಕೊಂಡಿದ್ದರು. ನಾನು ಅಂತಹ ಸಂದರ್ಭದಲ್ಲಿ ಚಿತ್ರರಂಗಕ್ಕೆ ಕಾಲಿಟ್ಟೆ. ಬಹುಶಃ ನಾನು ಪ್ರಾಮಾಣಿಕವಾಗಿ ನನಗೆ ಕೊಟ್ಟ ಸನ್ನಿವೇಶಗಳನ್ನು ಅತ್ಯಂತ ಸರಳವಾಗಿ, ಸುಂದರವಾಗಿ, ವಾಗರ್ಥಪೂರ್ಣವಾಗಿ, ಧ್ವನಿಪೂರ್ಣವಾಗಿ, ಸಾಹಿತ್ಯಿಕವಾಗಿ ಬರೆಯುವ ಪ್ರಯತ್ನ ಮಾಡಿದೆ. ಸಾಹಿತ್ಯಿಕವಾಗಿ ಎನ್ನುವುದು ಬಹಳ ಮುಖ್ಯವಾದುದು. ನಾನು ಬರೆಯುವ ಗೀತೆ ಪಾತ್ರಕ್ಕೆ ಮತ್ತು ಸನ್ನಿವೇಶಕ್ಕೆ ಹೊಂದಾಣಿಕೆಯಾಗಬೇಕು, ಸಂಗೀತ ನಿರ್ದೇಶಕನ ಸ್ವರ ಪ್ರಸ್ತಾರಗಳಿಗೆ ಹೊಂದಾಣಿಕೆಯಾಗಬೇಕು, ಹಾಡುವವನಿಗೆ ಅದು ಸುಲಭವಾಗಿ ಒಂದಿಷ್ಟೂ ತೊಂದರೆಯನ್ನು ಕೊಡದೇ ಇರುವ ರೀತಿಯಲ್ಲಿ ಇರಬೇಕು. ಅವರು ಸರಿಗಮವಾದ ಅನುಲೋಮ, ವಿಲೋಮಗಳನ್ನು ರೂಪಿಸಿಕೊಳ್ಳುವ ಹಾಗೆ ಇರಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಒಂದು ಕವಿತೆಯನ್ನು ಹೊರಗಡೆ ತೆಗೆದು ಇಟ್ಟರೆ ಅದು ನನ್ನ ಕವನ ಸಂಕಲನದಲ್ಲಿ ಅಥವಾ ಬೇರೆ ಯಾವುದೇ ಕವನ ಸಂಕಲನದಲ್ಲಿ ಒಂದು ಕವಿತೆಯಾಗಿ ಅಚ್ಚಾಗುವಷ್ಟು ಯೋಗ್ಯತೆಯನ್ನು ಮತ್ತು ಅದರ ಅರ್ಥವಂತಿಕೆಯನ್ನು ನಾನು ಕಾಪಾಡಿಕೊಂಡು ಹೋದೆ. ನಾನು ದೇಶೀ ಹಾಡುಗಳನ್ನು, ಸಂಸ್ಕೃತಿ ಪರವಾದಂತಹ ಹಾಡುಗಳನ್ನು, ಸಾಮಾಜಿಕ ಪ್ರಜ್ಞೆಯ ಶುದ್ಧ ಅಭಿರುಚಿಯ ಮತ್ತು ಒಳ್ಳೆಯ ಪ್ರೀತಿ ಗೀತೆಗಳನ್ನು ಕೂಡಾ ಬರೆಯುವ ಪ್ರಯತ್ನವನ್ನು ಮಾಡಿದ್ದೇನೆ.




**ವಸಂತ ಶೆಟ್ಟಿ ಬೆಳ್ಳಾರೆ :** ತಾವು ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿ ವೃತ್ತಿ ಜೀವನವನ್ನು ನಡೆಸಿದವರು, ಚಲನಚಿತ್ರ ಸಾಹಿತ್ಯ ಗೀತೆಯ ರಚನೆಯಲ್ಲದೇ ಭಾವ ಗೀತೆ ಮತ್ತು ಭಕ್ತಿ ಗೀತೆಗಳನ್ನು ಬಹಳಷ್ಟು ಬರೆದಿದ್ದೀರಿ. ಇದೆಲ್ಲ ಹೇಗೆ ಸಾಧ್ಯವಾಯಿತು?


**ದೊಡ್ಡರಂಗೇಗೌಡ :** ನಾನು 38 ವರ್ಷಗಳ ಕಾಲ ಕನ್ನಡ ಅಧ್ಯಾಪಕನಾಗಿ ಕೆಲಸ ಮಾಡಿದ ಸುದೀರ್ಘ ಅನುಭವದಲ್ಲಿ ಪಡೆದ ಎಲ್ಲ ಸಾಹಿತ್ಯಿಕವಾಗಿರತಕ್ಕಂತಹ ಗ್ರಹಿಕೆಗಳನ್ನು ನನ್ನ ಕವಿತೆಗಳಲ್ಲಿ ವ್ಯಕ್ತ ಮಾಡಿದ್ದೇನೆ. ನನ್ನ ಜೀವನಾನುಭವಗಳನ್ನು, ಲೋಕಾನುಭವಗಳನ್ನು, ಪ್ರವಾಸಾನುಭವಗಳನ್ನು ನನ್ನ ಕೃತಿಗಳನ್ನಾಗಿಸಿದ್ದೇನೆ. ಎಲ್ಲಕ್ಕಿಂತ ಮುಖ್ಯವಾಗಿ ಇದಕ್ಕೆ ಬಹಳ ದೊಡ್ಡ ಪ್ರೇರಣೆಯೆಂದರೆ ನನ್ನ ತಂದೆ, ನಮ್ಮ ತಂದೆ ಒಬ್ಬ ಪ್ರಾಥಮಿಕ ಶಾಲಾ ಪ್ರಾಧ್ಯಾಪಕರು. ಅವರಿಗೆ ಹಾರ್ಮೋನಿಯಂ ನುಡಿಸುವುದು ತುಂಬಾ ಚೆನ್ನಾಗಿ ಗೊತ್ತಿತ್ತು. ಲಕ್ಷ್ಮೀಶನ ಜೈಮಿನಿ ಭಾರತದ ಎಲ್ಲ ಪದ್ಯಗಳು ಅವರಿಗೆ ಕಂಠಪಾಠವಾಗಿತ್ತು. ಹಾರ್ಮೋನಿಯಂ ನುಡಿಸಿಕೊಂಡು ಪುಸ್ತಕವನ್ನು ನೋಡಿಕೊಳ್ಳದೇ ಹೇಳುವಂತಹ, ವ್ಯಾಖ್ಯಾನ ಮಾಡುವಂತಹ ಬಹಳ ದೊಡ್ಡ ಸಾಹಿತ್ಯಿಕ ಶಕ್ತಿಯನ್ನು ಹೊಂದಿದ್ದರು. ಅದೇಕೋ ಏನೋ ನನ್ನನ್ನು ಅವರು ಹಾರ್ಮೋನಿಯಂ ಮುಟ್ಟಲು ಬಿಡುತ್ತಿರಲಿಲ್ಲ. ತಬಲ ಮುಟ್ಟಲಿಕ್ಕೆ ಬಿಡುತ್ತಿರಲಿಲ್ಲ. ಅವರಿಗೆ ನಾನು ವಿಜ್ಞಾನಿಯಾಗಬೇಕು ಎನ್ನುವ ಬಹಳ ಮಹತ್ತರವಾದ ಆಕಾಂಕ್ಷೆಯಿತ್ತು. ನಾನು ಅವರ ಪ್ರಕಾರ ಬಿಎಸ್ಸಿ ಓದಿದೆ. ಬಿಎಸ್ಸಿ ಓದಿ ಆದ ಮೇಲೆ ಹೊಟ್ಟೆಪಾಡಿಗೋಸ್ಕರ ರೈಲ್ವೇ ಮೇಲ್ ಸರ್ವೀಸ್‌ನಲ್ಲಿ ಕೆಲಸಕ್ಕೆ ಸೇರಿದೆ. ಹುಬ್ಬಳ್ಳಿ, ಬೀರೂರು ಮುಂತಾದ ಕಡೆಗಳಲ್ಲಿ ಕೆಲಸ ಮಾಡಿ, ಓಡಾಡುವ ರೈಲಿನಲ್ಲಿ ವೃತ್ತಿ ಜೀವನ ನಡೆಸುತ್ತ ಕೊನೆಗೆ ಬೆಂಗಳೂರಿಗೆ ಬಂದೆ. ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿಕೊಂಡು ದಿನದಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಫಸ್ಟ್ ಬಿ.ಎ. ಅನರ್ಸ್‌ಗೆ ಸೇರಿದೆ. ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ತೆಗೆದುಕೊಂಡು, ಸಂಸ್ಕೃತ ಮತ್ತು ತೆಲುಗನ್ನು ಮೈನರ್ ವಿಷಯವಾಗಿ ತೆಗೆದುಕೊಂಡು ಅಭ್ಯಾಸ ಮಾಡಿದೆ. ಬಿ.ಎ. ಆನರ್ಸ್‌ನಲ್ಲಿ ಫಸ್ಟ್ ಕ್ಲಾಸ್‌ನಲ್ಲಿ ತೇರ್ಗಡೆಯಾದೆ ನಂತರ ವ್ಯವಸ್ಥಿತವಾದಂತಹ ರೀತಿಯಲ್ಲಿ ಕನ್ನಡ ಸಾಹಿತ್ಯವನ್ನು ತಿಳಿದುಕೊಳ್ಳಬೇಕು ಎಂದು ಎರಡು ವರ್ಷಗಳ ಕಾಲ ಕನ್ನಡ ಎಂ.ಎ ಮಾಡಿದೆ. ಅದರಲ್ಲೂ ನಾನು ಪಸ್ಟ್ ಕ್ಲಾಸ್‌ನಲ್ಲಿ ಉತ್ತೀರ್ಣನಾದೆ. ಜಾನಪದವನ್ನು ವಿಶೇಷ ಅಧ್ಯಯನ ವಿಷಯವಾಗಿ ನಾನು ತೆಗೆದುಕೊಂಡೆ. ನನ್ನ ಗುರು ಪರಂಪರೆಯನ್ನು ನೀವು ಕೇಳಿದರೇನೇ ನೀವು ರೋಮಾಂಚಿತರಾಗುತ್ತೀರಿ. ಡಾ. ರಂ. ಶ್ರೀ ಮುಗುಳಿಯವರು ಹಿರಿಯ ಗುರುಗಳು. ರಾಷ್ಟ್ರಕವಿ ಎನ್ನಿಸಿಕೊಂಡಂತಹ ಡಾ. ಜಿ.ಎಸ್. ಶಿವರುದ್ರಪ್ಪನವರು, ಡಾ. ಎಂ. ಚಿದಾನಂದ ಮೂರ್ತಿಯವರು, ಹಂಪಾ. ನಾಗರಾಜಯ್ಯರವರು, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್, ಡಾ. ಎಸ್. ವಿದ್ಯಾಶಂಕರ್ ಡಾ. ಕೆ.ಎಂ. ಕೃಷ್ಣರಾಯರು, ಪು.ಕ. ಜಯದೇವ್ ಅವರು ನನಗೆ ಗುರುಗಳಾಗಿದ್ದರು. ನನಗೆ ಇಂಗ್ಲೀಷ್ ಗುರುಗಳಾಗಿದ್ದವರು ಪಿ. ಲಂಕೇಶ್. ತರಗತಿಗಳಲ್ಲಿ ಇಂಗ್ಲೀಷಿನಲ್ಲಿ ಪ್ರಾರಂಭಿಸಿ ಆಮೇಲೆ ಕನ್ನಡದಲ್ಲಿ

ನಿರರ್ಗಳವಾಗಿ ಮಾತನಾಡುತ್ತ ನಮ್ಮ ಮೇಲೆ ಒಂದು ರೀತಿಯ ಸಂಮ್ಮೋಹಕ ಮೋಡಿಯನ್ನು ಮಾಡಿದವರು ಲಂಕೇಶ್. ಭಾಷೆಯ ಬಗ್ಗೆ ಒಂದು ಹಿಡಿತವನ್ನು ತರೋದಕ್ಕೆ ಪ್ರೇರಣೆಯನ್ನು ಕೊಟ್ಟವರು ಡಾ.ರಂ.ಶ್ರೀ ಮುಗಳಿಯವರು. ಅವರ ಪದ ಕೋಶ ಬಹಳ ದೊಡ್ಡದು, ವ್ಯಾಪಕವಾದಂತಹದು. ವಿಮರ್ಶಾತ್ಮಕವಾಗಿ, ಸಾಹಿತ್ಯಿಕವಾಗಿ ಕಾವ್ಯ ಮೀಮಾಂಸೆಯನ್ನು ಅರ್ಥಮಾಡಿಸಿದಂತಹ ಬಹಳ ದೊಡ್ಡ ಸಾಹಿತಿಗಳು, ಹಿರಿಯ ಕವಿಗಳು ಡಾ. ಜಿ.ಎಸ್. ಶಿವರುದ್ರಪ್ಪನವರು. ಪಾಶ್ಚಾತ್ಯ ಮೀಮಾಂಸೆಯನ್ನು ನಮಗೆ ಹೇಳಿದವರು ಪ್ರೊ. ಎಂ.ವಿ. ಸೀತಾರಾಮಯ್ಯನವರು. ಭಾಷಾ ಶಾಸ್ತ್ರವನ್ನು ನನಗೆ ಡಾ. ಎಂ. ಚಿದಾನಂದ ಮೂರ್ತಿಯವರು ಮತ್ತು ಡಾ. ಹಂಪಾ. ನಾಗರಾಜಯ್ಯನವರು ಪಾಠ ಹೇಳಿದರು. ಹೀಗಾಗಿ ನನಗೆ ಒಂದು ಒಳ್ಳೆಯ ಗುರುಪರಂಪರೆ ಇದೆ ಎಂದು ಹೇಳಿಕೊಳ್ಳಲಿಕ್ಕೆ ಬಹಳ ಹೆಮ್ಮೆ. ಆ ಮೊದಲು ಬಿ.ಎ. ತರಗತಿಗಳಲ್ಲಿ ಪ್ರೊ. ಸಿದ್ದಲಿಂಗಯ್ಯ, ಪ್ರೊ. ಎಚ್.ಜಿ. ಸಣ್ಣಗುಡ್ಡಯ್ಯ ಅವರ ಪಾಠಗಳನ್ನು ಕೇಳಿ ಬೆಳೆದಂತವನು. ಹಾಗಾಗಿ ಒಂದು ಒಳ್ಳೆಯ ಅಭಿರುಚಿ ನನ್ನಲ್ಲಿ ಮೊಳೆಯುವುದಕ್ಕೆ, ಚಿಗುರುವುದಕ್ಕೆ, ಅದು ಹಸಿರಾಗುವುದಕ್ಕೆ, ಅದು ದೊಡ್ಡ ವೃಕ್ಷವಾಗಿ ಅದು ಹೂ, ಹಣ್ಣುಗಳನ್ನು ಕೊಡುವುದಕ್ಕೆ ಕಾರಣ ಆಯಿತು. ತುಂಬಾ ಬಡತನದಲ್ಲಿ ಓದಿದರೂ ಕೂಡಾ ವ್ಯಕ್ತಿತ್ವದ ವಿಕಾಸಕ್ಕೆ ನನಗೆ ಸೆಂಟ್ರಲ್ ಕಾಲೇಜು ಒಂದು ದೊಡ್ಡ ಆಯಾಮವನ್ನು ಕರುಣಿಸಿತು. ಹಾಗಾಗಿ ನನ್ನ ವ್ಯಕ್ತಿತ್ವವನ್ನು ನಾನು ರೂಪಿಸಿಕೊಂಡಂತವನು, ನನ್ನ ಬದುಕನ್ನೇ ನಾನು ರೂಪಿಸಿಕೊಂಡಂತವನು. ನಿನಗೆ ನೀನೇ ರೂವಾರಿ ಎನ್ನುವ ಮಾತಿದೆಯಲ್ಲ ಆ ತರ ಅಸ್ತಿತ್ವವಾದವನ್ನು ಒಪ್ಪಿಕೊಂಡು ಮುಂದೆ ನಡೆದಂತವನು.

**ವಸಂತ ಶೆಟ್ಟಿ ಬೆಳ್ಳಾರೆ** : ತಾವು ಕನ್ನಡ ಚಲನಚಿತ್ರಗಳಲ್ಲೂ ನಟಿಸಿದ್ದೀರಿ. ನಟನೆಯ ಆಸಕ್ತಿ ಹೇಗೆ ಬಂತು?

**ದೊಡ್ಡರಂಗೇಗೌಡ :** ರಂಗಭೂಮಿಯಲ್ಲಿ ಚಿಕ್ಕವನಾಗಿರುವಾಗಲೇ ನನಗೆ ಕೃಷ್ಣನ ಪಾತ್ರವನ್ನು ನಮ್ಮ ತಂದೆ ಮಾಡಿಸುತ್ತಿದ್ದರು. ನಮ್ಮ ತಂದೆ ಒಳ್ಳೆಯ ಲೆಗ್ ಹಾರ್ಮೋನಿಯಂ ಮಾಸ್ಟರ್. ಬೇಸಿಗೆಯ ದಿನಗಳಲ್ಲಿ ನಮ್ಮ ಊರಿನಲ್ಲಿ ನಾಟಕಗಳನ್ನು ಕಲಿಸುತ್ತಿದ್ದರು. ನನಗೂ ಕೂಡಾ ಬಣ್ಣ ಹಚ್ಚುತ್ತಿದ್ದರು. ಹೈಸ್ಕೂಲ್‌ನಲ್ಲಿ ನನ್ನ ಸಹಪಾಠಿಯಾಗಿದ್ದ ಇನ್‌ಫೋಸಿಸ್‌ನ ನಾರಾಯಣಮೂರ್ತಿ ನಾವೆಲ್ಲ ಶೇಕ್ಸ್‌ಪಿಯರ್‌ನ ಮರ್ಚೆಂಟ್ ಆಫ್ ವಿನ್ನೀಸ್ ಮುಂತಾದ ನಾಟಕಗಳನ್ನು ಮಾಡಿದಂತಹವರು. ನಾನು ಪೋರ್ಶಿಯಾ ಪಾತ್ರ ಇತ್ಯಾದಿಗಳನ್ನೆಲ್ಲ ಯಶಸ್ವಿಯಾಗಿ ಮಾಡಿದ್ದೇನೆ. ಆ ನಂತರದಲ್ಲಿ ಪಿ.ಯು.ಸಿ. ಮತ್ತು ಬಿಎಸ್ಸಿ. ಹಂತದಲ್ಲಿ ಪ್ರತಿ ವರ್ಷವೂ ನಾವು ನಾಟಕಗಳನ್ನು ಮಾಡಿದ್ದೇವೆ. ಆಗ ಉಳ್ಳಾಲ್ ಶೀಲ್ಡ್ ಕಾಂಪಿಟೇಶನ್ ಎಂದು ಬೆಂಗಳೂರಿನಲ್ಲಿ ನಡೆಯುತ್ತಿತ್ತು. ನಾವು ತುಮಕೂರಿನಿಂದ ಬೆಂಗಳೂರಿಗೆ ಬಂದು ನಮ್ಮ ಕಾಲೇಜಿನ ಪರವಾಗಿ ನಾಟಕಗಳನ್ನು ಮಾಡುತ್ತಾ ಇದ್ದೆವು. ತುಂಬಾ ಆಶ್ಚರ್ಯಕರವಾದ ವಿಷಯವೇನೆಂದರೆ ನಾನು ಹೆಣ್ಣು ಪಾತ್ರಗಳನ್ನು ನಿರ್ವಹಿಸುತ್ತಿದ್ದೆ. ಮೇಕಪ್‌ನಲ್ಲಿ ನನ್ನನ್ನು ಹುಡುಗಿಯ ತರಹವೇ ಮಾಡುತ್ತಿದ್ದರು. ಎಷ್ಟೋ ಸಾರಿ ನಮ್ಮ ಗಂಡು ಹುಡುಗರು ಎಷ್ಟು ಹಿಂಸೆ ಕೊಡುತ್ತಾ ಇದ್ದರು ಅಂದರೆ ಎಷ್ಟು ಬೇಗ ಬಣ್ಣ ಅಳಿಸಿದರೆ ಸಾಕು ಅನ್ನಿಸುತ್ತಿತ್ತು, ಅಷ್ಟು ಹಿಂಸಿಸುತ್ತಿದ್ದರು. ರಕ್ತಾಕ್ಷಿಯಲ್ಲಿನ ಚೆಲುವಾಂಬೆ ಎನ್ನುವ ಪಾತ್ರವನ್ನು ತುಂಬಾ ಚೆನ್ನಾಗಿ ನಿರ್ವಹಿಸಿದ್ದೇನೆ. ನಾನು ಅಭಿನಯಿಸಿದ ಅಷ್ಟೂ ನಾಟಕಗಳಲ್ಲಿ ನಾನು ಒಳ್ಳೇ ಒಳ್ಳೆಯ ಪಾತ್ರಗಳನ್ನು ಮಾಡಿದ್ದೇನೆ ಎಂದು ಹೇಳಿಕೊಳ್ಳುವುದಕ್ಕೆ ನನಗೆ ಹೆಮ್ಮೆ ಅನ್ನಿಸುತ್ತೆ. ಈ ಹಿನ್ನೆಲೆಯಿಂದಾಗಿ ನಾನು 16–18 ಚಿತ್ರಗಳಲ್ಲಿ ಅಭಿನಯಿಸಿದ್ದೇನೆ. ಹಾಡಿದ್ದೇನೆ, ಒಂಬತ್ತು ಹಾಡುಗಳು ಧ್ವನಿ ಮುದ್ರಣವಾಗಿದೆ. ಪ್ರೇಮ ಪಾರಿಜಾತ ಎಂದು ಧ್ವನಿ ಸಾಂದ್ರಿಕೆಯಾಗಿ ಬಂದಿದೆ. ಭಕ್ತಿಗೀತೆಗಳನ್ನು ಬರೆಯುವುದರ ಜೊತೆಗೆ ಹಾಡುತ್ತಾ ಹೋಗುತ್ತೇನೆ. ಸಂಗೀತವನ್ನು ನೀಡಿದ್ದೇನೆ. ಎರಡು ಧ್ವನಿ ಸುರುಳಿಗಳಿಗೆ ನನ್ನದೇ ಆದಂತಹ ಧ್ವನಿ ಸಾಂದ್ರಿಕೆಯಲ್ಲಿ ಸಂಗೀತವನ್ನು ನೀಡಿದ್ದೇನೆ. ನನ್ನ ಪ್ರಯತ್ನಗಳು ಶುದ್ಧ ಅಭಿರುಚಿಗೆ. ನಾನು ಸಂಪೂರ್ಣವಾಗಿ ಅಭಿವ್ಯಕ್ತವಾಗಬೇಕು. ನನ್ನ ಅಂತರಾಳದಲ್ಲಿರುವ ಎಲ್ಲ ಭಾವನೆಗಳಿಗೂ ಒಂದು ಆಕಾರ ಸಿಗಬೇಕು ಎನ್ನುವುದು ನನ್ನ ಆಶಯ. ಕನ್ನಡ ಜನಮನದ ಅಭಿರುಚಿಯನ್ನು ಮೇಲೆ ಎತ್ತಬೇಕೆನ್ನುವುದು ನನ್ನ ಅಭಿಲಾಷೆ.

**ವಸಂತ ಶೆಟ್ಟಿ ಬೆಳ್ಳಾರೆ** : ದೊಡ್ಡರಂಗೇಗೌಡರು ಎಂದಾಗ ಜನರು ಹೆಚ್ಚಾಗಿ ಒಬ್ಬ ಚಲನಚಿತ್ರ ಸಾಹಿತಿಯಾಗಿ, ಗುರುತಿಸುತ್ತಾರೆ. ಆದರೆ ಈಗ ನಾವು ನಿಮ್ಮನ್ನು ಕಾಣುವುದು ಕನ್ನಡದ ಅರಿವು ಮತ್ತು ಜಾಗೃತಿ ಮೂಡಿಸುವ ಒಬ್ಬ ಉಪನ್ಯಾಸಕರನ್ನಾಗಿ, ದೇಶ ಮತ್ತು ವಿದೇಶಗಳಲ್ಲಿ ಕನ್ನಡದ ಅರಿವು ಮತ್ತು ಜಾಗೃತಿ ಮೂಡಿಸುವ ಕೆಲಸವನ್ನು ಮಾಡುತ್ತಿದ್ದೀರಿ, ಇವತ್ತಿನ ದಿನದಲ್ಲಿ ಕನ್ನಡದ ಪರಿಸ್ಥಿತಿ ಹೇಗಿದೆ?




**ದೊಡ್ಡರಂಗೇಗೌಡ :** ಬೃಹತ್ ಬೆಂಗಳೂರನ್ನು ಹೊರತುಪಡಿಸಿದರೆ ಕನ್ನಡದ ಸ್ಥಿತಿ ಚೆನ್ನಾಗಿಯೇ ಇದೆ. ಬೃಹತ್ ಬೆಂಗಳೂರಿನಲ್ಲಿ ಇದರ ಸಮಸ್ಯೆ ಇದೆ. ಬೆಂಗಳೂರಿನಲ್ಲಿ ಕನ್ನಡ ಮೂಲೆ ಗುಂಪಾಗಿದೆ. ಕನ್ನಡವನ್ನು ಕೇಳುವವರೇ ಇಲ್ಲ. ಕನ್ನಡದ ಜನ ಕೂಡಾ ಇಂಗ್ಲೀಷಿನಲ್ಲಿ ಮಾತನಾಡಿದರೆ ತಮ್ಮ ಕಿಮ್ಮತ್ತು ಹೆಚ್ಚಾಗುತ್ತೆ, ಗೌರವ, ಪದವಿಗಳು ಹೆಚ್ಚು ಸಿಗುತ್ತೆ ಎನ್ನುವ ಕಾರಣಕ್ಕಾಗಿ ತಾವು ಇಂಗ್ಲೀಷಿನಲ್ಲಿ ಅರಬರೆ ಮಾತನಾಡುವುದರ ಜೊತೆಗೆ ತಮ್ಮ ಮಕ್ಕಳನ್ನೂ ಕೂಡಾ ಕಾನ್ವೆಂಟ್ ಶಿಕ್ಷಣಕ್ಕೆ ಕಳುಹಿಸುವುದರ ಮುಖಾಂತರವಾಗಿ ಅವರ ಜೀವನವನ್ನು ಉನ್ನತವಾದ ರೀತಿಯಲ್ಲಿ ರೂಪಿಸಬೇಕು ಎನ್ನುವ ಕಾರಣಕ್ಕಾಗಿ ಬೆಂಗಳೂರು ಈಗ "ಸರ್ವಂ ಇಂಗ್ಲೀಷ್‌ಮಯಂ" ಆಗಿದೆ. ಆದರೆ ನಾನು ಗ್ರಾಮೀಣ ಪ್ರದೇಶಗಳಿಗೆ ಉಪನ್ಯಾಸಗಳಿಗೆ, ಕವಿಗೋಷ್ಠಿಗಳಿಗೆ, ನಾಟಕದ ಉದ್ಘಾಟನಾ ಸಮಾರಂಭಗಳಿಗೆ ಹೋಗಿದ್ದೇನೆ. ಅಗೆಲ್ಲ ನಾನು ಕಂಡಿದ್ದು ಏನೆಂದರೆ ಹಳ್ಳಿ ಕಡೆ ಇನ್ನೂ ಕೂಡಾ ಕನ್ನಡ ಜೀವಂತವಾಗಿದೆ. ಒಳ್ಳೆಯ ಕನ್ನಡವನ್ನು ಮಾತನಾಡುತ್ತಾರೆ. ನಮ್ಮ ತುಮಕೂರು ಜಿಲ್ಲೆಯಲ್ಲೇ ನೀವು ನೋಡಬಹುದು. ಅಥವಾ ನಾನು ಧಾರವಾಡ, ಬಿಜಾಪುರ, ಗುಲ್ಬರ್ಗಾ ಜಿಲ್ಲೆಗೆ ಹೋಗಿದ್ದೇನೆ, ಅಲ್ಲಿ ಅಂಕಿಗಳನ್ನು ಕೂಡ ಕನ್ನಡದಲ್ಲಿ ಬರೆಯುತ್ತಾರೆ. ಬೆಂಗಳೂರಿನಲ್ಲಿ ಪರಿಸ್ಥಿತಿ ವಿಷಮ ಆಗಿರಬಹುದು. ವಿಷಮ ಪರಿಸ್ಥಿತಿ ಬೆಂಗಳೂರಿನಲ್ಲಿ ಇದ್ದರೂ ಗ್ರಾಮಾಂತರ ಪ್ರದೇಶಗಳಲ್ಲಿ ಕನ್ನಡಕ್ಕೆ ಬೆಲೆ ಇದ್ದೇ ಇದೆ. ಅಂತ ನಾನು ನನ್ನ ವೈಯಕ್ತಿಕವಾಗಿ ಹೇಳಲಿಕ್ಕೆ ಇಚ್ಛಿಸುತ್ತೇನೆ.

**ವಸಂತ ಶೆಟ್ಟಿ ಬೆಳ್ಳಾರೆ** : ಇದು ರಾಜ್ಯದ ಮಟ್ಟಿಗೆ ಪರಿಸ್ಥಿತಿ ಇದ್ದರೂ ಹೊರನಾಡಿನಲ್ಲ ಮುಂಬೈ, ದೆಹಲಿ, ಪುಣೆ, ಚೆನ್ನೈ ಅಥವಾ ವಿದೇಶದ ಅಕ್ಕ ಸಮ್ಮೇಳನ ಇರಬಹುದು, ಎಲ್ಲಾ ಕಡೆ ಹೊರನಾಡಿನ ಕನ್ನಡಿಗರನ್ನು ಹತ್ತಿರದಿಂದ ತಾವು ಕಂಡವರು,



ಹೊರನಾಡಿನ ಕನ್ನಡಿಗರ ಬಗ್ಗೆ ನಿಮ್ಮ ಅನಿಸಿಕೆ ಏನು?

**ದೊಡ್ಡರಂಗೇಗೌಡ :** ಹೊರನಾಡಿನ ಕನ್ನಡಿಗರು ಎಷ್ಟೊಂದು ಜಾಗೃತರಾಗಿದ್ದಾರೆ, ಸಂಭ್ರಮಿತರಾಗಿದ್ದಾರೆ, ಮತ್ತು ಅಭಿಮಾನ ಪೂರ್ಣವಾಗಿ ಕೆಲಸ ಮಾಡುತ್ತಾರೆ, ಕನ್ನಡ ನಾಡಿನಿಂದ ಹೊರಗಡೆ ಇದ್ದಾಗ ಅವರ ಅಭಿಮಾನ ಇನ್ನಷ್ಟು ಉಕ್ಕೇರುತ್ತೆ. ನಾನು ಅದನ್ನು ಅಮೆರಿಕದಲ್ಲಿ ನೋಡಿದ್ದೇನೆ, ಆಸ್ಟ್ರೇಲಿಯಾದಲ್ಲಿ ನೋಡಿದ್ದೇನೆ, ವಿದೇಶಗಳಲ್ಲಿರುವಂತಹ ಕನ್ನಡ ಸಂಘಗಳಲ್ಲಿ ಎಷ್ಟರ ಮಟ್ಟಿಗೆ ಕನ್ನಡದ ಬಗ್ಗೆ ಜಾಗೃತಿ ಇದೆ ಅಂತ ನೋಡಿದ್ದೇನೆ. ಹಬ್ಬ ಹರಿದಿನಗಳನ್ನು ಕನ್ನಡದಲ್ಲಿ ಆಚರಿಸುತ್ತಾರೆ, ಶನಿವಾರ ಮತ್ತು ಭಾನುವಾರ ಕನ್ನಡದ ಸಭೆಗಳನ್ನು ನಡೆಸುತ್ತಾರೆ, ಭಾವಗೀತೆಗಳನ್ನು, ಭಕ್ತಿಗೀತೆಗಳನ್ನು, ನಾಟಕಗಳನ್ನು, ಹರಿಕಥೆಗಳನ್ನ ಇವುಗಳನ್ನೆಲ್ಲ ಏರ್ಪಡಿಸುತ್ತಾರೆ. ಪುಟ್ಟ ಪುಟ್ಟ ಕವಿಗೋಷ್ಠಿಗಳನ್ನು, ಕಥಾ ಓದುವಿಕೆಗಳನ್ನು ಏರ್ಪಡಿಸುತ್ತಾರೆ, ಕಾದಂಬರಿ ಮುಂತಾದವುಗಳ ಚರ್ಚೆ ಮಾಡುತ್ತಾರೆ, ಆದ್ದರಿಂದ ಕನ್ನಡ ನಾಡಿನಿಂದ ಹೊರಗಡೆ ಇದ್ದಾಗ ಕನ್ನಡದ ಅಭಿಮಾನ ಹೆಚ್ಚುತ್ತೆ ಅಂತ ಅನ್ನಿಸುತ್ತೆ. ದೆಹಲಿ ಕರ್ನಾಟಕ ಸಂಘದ ಬಗ್ಗೆ ನಾನು ಪ್ರತ್ಯೇಕವಾಗಿ ಹೇಳಬೇಕು. ದೆಹಲಿ ಕರ್ನಾಟಕ ಸಂಘ ಅತ್ಯುತ್ತಮವಾದ ಕನ್ನಡದ ಕಾರ್ಯಕ್ರಮಗಳನ್ನು ಮಾಡಿದೆ, ಕನ್ನಡದ ಸಂಸ್ಕೃತಿ ಪರವಾಗಿದೆ, ಕನ್ನಡದ ಅಭಿಜಾತ ಮೌಲ್ಯಗಳನ್ನು ಎತ್ತಿ ಹಿಡಿದಿದೆ, ಕನ್ನಡವನ್ನು ಕಟ್ಟುವ ಕಾರ್ಯದಲ್ಲಿ ದೆಹಲಿ ಕರ್ನಾಟಕ ಸಂಘದ ಪಾತ್ರ ಬಹಳ ದೊಡ್ಡದು ಅಂತ ಎಂದುಕೊಂಡಿದ್ದೇನೆ. ಅದೇ ರೀತಿಯಲ್ಲಿ ಮುಂಬೈನಲ್ಲಿ ಕನ್ನಡ ಸಂಘಗಳು ಹೆಚ್ಚು ಕ್ರಿಯಾಶೀಲವಾಗಿವೆ. ಚೆನ್ನೈನಲ್ಲೂ ಕ್ರಿಯಾಶೀಲವಾಗಿದೆ. ಎರಡೆರಡು ದಿವಸ ತುಂಬಿದ ಸಭಾಂಗಣದಲ್ಲಿ ವಿಚಾರ ಸಂಕಿರಣಗಳನ್ನು ಚೆನ್ನೈ, ಮುಂಬೈ ಮುಂತಾದ ಕಡೆಗಳಲ್ಲಿ ಮಾಡಿದಾಗ ನನಗೆ ಅತೀ ಆನಂದವಾಗುತ್ತೆ. ಬೆಂಗಳೂರಿನಲ್ಲಿ ಕೂಡಾ ಇಷ್ಟೊಂದು ಜನ ವಿಚಾರ ಸಂಕಿರಣಗಳಲ್ಲಿ ಪಾಲ್ಗೊಳ್ಳುವುದಿಲ್ಲ. ಆದರೆ ಇಲ್ಲಿ ಜನ ತುಂಬಿ ತುಳುಕುತ್ತಾರೆ ಅನ್ನೋದನ್ನು ನಾನು ಕಂಡುಕೊಂಡಿದ್ದೇನೆ. ಆದ್ದರಿಂದ ನನಗೆ ಅನ್ನಿಸುತ್ತದೆ ನಮ್ಮ ನಾಡಿನಿಂದ ದೂರ ಹೋದ ಹಾಗೆ ಕನ್ನಡದ, ತಾಯ್ನಾಡಿನ ಅಭಿಮಾನ ಜಾಸ್ತಿಯಾಗುತ್ತಾ ಹೋಗುತದೆ, ಒಬ್ಬ ವ್ಯಕ್ತಿ ಹತ್ತಿರವಿದ್ದಾಗ ಅವರ ಮೌಲ್ಯ ಗೊತ್ತಿರುವುದಿಲ್ಲ, ಬೆಲೆ ಗೊತ್ತಿರುವುದಿಲ್ಲ, ದೂರ ಹೋಗಿ ನೆಲೆ ನಿಂತಾಗ ಅವರ ಬಗ್ಗೆ ನಮಗೆ ಎಲ್ಲೆಲ್ಲಿಯೂ ಇಲ್ಲದಂತಹ ಅಕ್ಕರೆ ಅಭಿಮಾನಗಳು ಮೂಡುತ್ತಾ ಹೋಗುತ್ತದೆ. ಹಾಗಾಗಿ ಹೊರನಾಡ ಕನ್ನಡಿಗರ, ಗಡಿನಾಡ ಕನ್ನಡಿಗರ ಉತ್ಸವಗಳು ತುಂಬಾ ಚೆನ್ನಾಗಿ ನಡೆಯುತ್ತವೆ. ದೊಡ್ಡಪೊನ್ನಾನ ಹಳ್ಳಿ ಈ ಕಡೆ ಆಂಧ್ರಪ್ರದೇಶದಲ್ಲಿದೆ. ಇನ್ನೊಂದು ಕಡೆ ತಮಿಳುನಾಡು ಇದೆ, ಅವರ ಹೊಲ ಒಂದು ರಾಜ್ಯದಲ್ಲಿದ್ದರೆ, ಮನೆ ಇನ್ನೊಂದು ರಾಜ್ಯದಲ್ಲಿದೆ. ಇಲ್ಲಿ ಕೂಡಾ ಬೇಂದ್ರೆ ಬಗ್ಗೆ ವಿಚಾರ ಸಂಕಿರಗಳು ನಡೆಯುತ್ತವೆ, ನಾನೇ ಕುವೆಂಪು, ಬೇಂದ್ರೆ ಅವರನ್ನು ಕುರಿತು ಮಾತನಾಡಿದ್ದೇನೆ. ಅಂದರೆ ಎಷ್ಟರಮಟ್ಟಿಗೆ ತೀವ್ರವಾದ ಆಸಕ್ತಿ ಗಡಿನಾಡಿನಲ್ಲಿದೆ ಅಂತ ಗೊತ್ತಾಗುತ್ತದೆ. ಗಡಿನಾಡ, ಹೊರನಾಡ


ಕನ್ನಡಿಗರು ಜಾಗೃತಿಯಿಂದ ಕನ್ನಡದ ಪರವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಅದೊಂದು ಮೆಚ್ಚಿಕೊಳ್ಳಬೇಕಾದಂತಹ ಅಂಶ.

**ವಸಂತ ಶೆಟ್ಟಿ ಬೆಳ್ಳಾರೆ** : ತಾವು ಕರ್ನಾಟಕ ವಿಧಾನಪರಿಷತ್ತಿನ ನಾಮಕರಣ ಸದಸ್ಯರಾಗಿ ಕೂಡಾ ಒಂದು ಅವಧಿಗೆ ಸೇವೆಯನ್ನು ಸಲ್ಲಿಸಿದ್ದೀರಿ, ತಮ್ಮ ಆರು ವರ್ಷದ ಅವಧಿಯಲ್ಲಿ ಕನ್ನಡಕ್ಕೆ ಬೇಕಾದ ಕೆಲಸಗಳನ್ನು ಮಾಡಲಕ್ಕೆ ಅವಕಾಶ ಹೇಗಿತ್ತು?

**ದೊಡ್ಡರಂಗೇಗೌಡ :** ನಾನು ಆರು ವರ್ಷಗಳ ಕಾಲ ಕರ್ನಾಟಕದ ವಿಧಾನಪರಿಷತ್‌ನಲ್ಲಿ ಕೆಲಸ ಮಾಡಿದ್ದೇನೆ. ನೂರಕ್ಕೆ ನೂರು ಪಟ್ಟು ಹಾಜರಾಗಿದ್ದೇನೆ. ಸಕ್ರಿಯವಾಗಿ ಚರ್ಚೆಗಳಲ್ಲಿ ಪಾಲ್ಗೊಂಡಿದ್ದೇನೆ. ನಾನು ಮಾತನಾಡಿದ್ದನ್ನೆಲ್ಲ ಸೇರಿಸಿದರೆ ಒಂದು ಪುಸಕ ಮಾಡಬಹುದು. ಸಾಕಷ್ಟು ಸಿದ್ಧತೆಗಳಿಂದಲೇನೇ ಯಾವ ಪ್ರಶ್ನೆಗಳನ್ನು ಕೇಳಬೇಕು, ಯಾವ ಪ್ರಶ್ನೆಗಳನ್ನು ಕೇಳಿದರೆ ಜನಪರವಾಗಿ ಉತ್ತರಗಳು ಸಿಗುತ್ತೆ, ಜನಪರವಾಗಿ ಉತ್ತರಗಳು ಸಿಗದೇ ಹೋದಾಗ ಜನಪರವಾಗಿ ಏನು ಕೆಲಸಗಳನ್ನು ಮಾಡಬಹುದು ಅನ್ನುವ ಭೌದ್ಧಿಕ ಹಿನ್ನೆಲೆಯಲ್ಲಿ ಕೂಡಾ ಕೆಲಸ ಮಾಡಿದ್ದೇನೆ. ಸಾಕಷ್ಟು ಕನ್ನಡ ಮತ್ತು ಸಮಸ್ಯೆಗಳಿಗೆ ತೀವ್ರವಾಗಿ ಸ್ಪಂದಿಸಿದ್ದೇನೆ. ಒಬ್ಬ ಅಧ್ಯಾಪಕನಾಗಿ ಇದ್ದುದ್ದರಿಂದ ನಿರ್ಸಗಗಳವಾಗಿ ನಾನು ಸಮಸ್ಯೆಗಳನ್ನು ಕಾಣುವ ಅದಕ್ಕೆ ಉತ್ತರಗಳನ್ನು ಕಂಡುಕೊಳ್ಳುವ ಹಾದಿಯಲ್ಲಿ ಸಾಗಿದ್ದೇನೆ. ಕೆಲವೊಂದು ಸಲ ಇಡೀ ಸಭೆ ಗೊಂದಲಮಯವಾದಾಗ, ವಾದ ವಿವಾದಗಳು ಅತಿರೇಕಕ್ಕೆ ಹೋದಾಗ, ಅದು ದಿಕ್ಕು ತಪ್ಪಿದಾಗ ನಾನು ನಾಲ್ಕು ಸಾಲಿನ ತೀವ್ರವಾದ ರೀತಿಯಲ್ಲಿ ಚುಟುಕುಗಳನ್ನು ಬರೆದು ಆಳುವ ಮತ್ತು ವಿರೋಧ ಪಕ್ಷಗಳಿಗೆ, ಎರಡೂ ಪಕ್ಷಗಳಿಗೆ ಬಿಸಿ ಮುಟ್ಟಿಸುವ ಕೆಲಸವನ್ನೂ ಮಾಡಿದ್ದೇನೆ. ಶಿಕ್ಷಣ ಮಸೂದೆಯನ್ನು, ಪ್ರೈವೇಟ್ ಬಿಲ್ ಎಂದು ಹೇಳುತ್ತಾರೆ, ಅದನ್ನು ಖಾಸಗಿ ನಿರ್ಣಯವಾಗಿ ಮಂಡಿಸಬೇಕಾಗಿತ್ತು, ಅದಕ್ಕೆ ಅವಕಾಶ ಸಿಗಲಿಲ್ಲ. ಅಲ್ಲಿಯ ಪರಿಸ್ಥಿತಿಗಳು ಬೇರೆಯೇ ಇರುತ್ತೆ ಅಂತ ನಾನು ಪರಿಭಾವಿಸುತ್ತೇನೆ. ಆದ್ದರಿಂದ ಕೆಲವೊಂದನ್ನು ಬಿಡಿಸಿ ಹೇಳಲಿಕ್ಕೆ ಸಾಧ್ಯವಾಗದೇ ಇರುವಂತಹ ಸನ್ನಿವೇಶಗಳು ಅಲ್ಲಿ ರಾಜಕೀಯವಾಗಿ ತೆರೆಯ ಹಿಂದೆ ಇರುತ್ತದೆ. ಆಮೇಲೆ ಬಹಳಷ್ಟು ಜನ ಅಧಿಕಾರದಲ್ಲಿರುವಂತಹವರು ಶಾಲೆಗಳನ್ನು ನಡೆಸುತ್ತಾರೆ, ಬಹಳ ದೊಡ್ಡ ಸಮಸ್ಯೆ ಬಂದಿರುವುದೇ ಅಲ್ಲಿ. ಕನ್ನಡ ಶಾಲೆಗೆ ಅನುಮತಿ ತೆಗೆದುಕೊಂಡು ಇಂಗ್ಲೀಷ್ ಶಾಲೆಗಳನ್ನು ನಡೆಸುವಂತಹ ಜನರೇ ಹೆಚ್ಚಾಗಿದ್ದಾರೆ. ಇದೊಂದು ದುರಂತ. ಹಾಗಾಗಬಾರದು. ಇಂಗ್ಲೀಷ್ ಶಾಲೆಗೆ ಅನುಮತಿ ಪಡೆದು ಕನ್ನಡ ಶಾಲೆಯನ್ನು ನಡೆಸಿದರೆ ಅದು ತಪ್ಪಲ್ಲ, ಅದನ್ನು ನಾನು ವಿರೋಧಿಸುವುದಿಲ್ಲ. ಆದರೆ ಕನ್ನಡ ಶಾಲೆಗೆ ಅನುಮತಿ ತೆಗೆದುಕೊಂಡು ಇಂಗ್ಲೀಷ್ ಶಾಲೆಯನ್ನು ನಡೆಸುವುದು ತಪ್ಪು ಎಂದು ನನ್ನ ಅನಿಸಿಕೆ. ಅದನ್ನು ಖಂಡಿಸಿದ್ದೇನೆ.

**ವಸಂತ ಶೆಟ್ಟಿ ಬೆಳ್ಳಾರೆ** : ನಿಮ್ಮ ಗುರುಗಳಾಗಿ ಬಂಡಾಯ ಸಾಹಿತಿಗಳಾದ ಲಂಕೇಶ್, ಸಿದ್ದಲಿಂಗಯ್ಯನವರು ಇದ್ದರು, ಆದರೆ ನಿಮ್ಮಲ್ಲಿ ಆ ಬಂಡಾಯದ ಛಾಪು ಎಲ್ಲೂ ಬಂದಿಲ್ಲ ಅಂತ ಕಾಣುತ್ತೆ?

**ದೊಡ್ಡರಂಗೇಗೌಡ :** ನನ್ನ 'ನಾಡಾಡಿ' ಅನ್ನುವ ಕವನ ಸಂಕಲನವನ್ನು ತೆಗೆದುಕೊಂಡರೆ ಅದರ 196 ಪದ್ಯದಲ್ಲಿ ಒಂದು ಪದ್ಯವೂ ಪ್ರೇಮ ಗೀತೆಯಲ್ಲ, ಪ್ರಕೃತಿ ಗೀತೆಯಲ್ಲ, ದೈವ ಧರ್ಮದ ಬಗ್ಗೆಯೂ ಇಲ್ಲ. ಅದರ ಬದಲು ಸಾಮಾಜಿಕ ಅರ್ಬುದ ರೋಗಗಳಿಗೆ ಕಾಯಕಲ್ಪ ಮಾಡುವಂತಹ ಸಮಾಜಮುಖಿ ಕವಿತೆಗಳನ್ನೇ ಬರೆದಿದ್ದೇನೆ. ಅದನ್ನು ವಿಮರ್ಶಕರೆಲ್ಲ ಗುರುತಿಸಿದ್ದಾರೆ, ಕೆಲವು ವಿಮರ್ಶಕರಂತೂ ಕೂಡಾ ಸೌಮ್ಯ ಕವಿಯ ಜ್ವಾಲಾಮುಖಿಯಂತಹ ಭಾವನೆಗಳು ಅಂತ ಕೂಡಾ ಬರೆದಿದ್ದಾರೆ. ಎಷ್ಟು ಕಟುಕಿಯನ್ನು ವ್ಯಂಗವನ್ನು, ಅಣಕವನ್ನು ಎಷ್ಟರ ಮಟ್ಟಿಗೆ ಸಶಕ್ತವಾಗಿ ಬಳಸಿಕೊಂಡಿದ್ದೇನೆ. ನಾನು ಆ ದೃಷ್ಟಿಯಲ್ಲಿ ಸುದೈವಿ. ನನ್ನ ಕವಿತೆಗಳು ಇಂಗ್ಲೀಷಿಗೆ ಅನುವಾದವಾಗಿವೆ, ಬೇರೆ ಯಾವುದೇ ಕೃತಿ ಇಂಗ್ಲೀಷಿಗೆ ಅನುವಾದವಾಗಿಲ್ಲ, 196 ಕವಿತೆ ಇರುವಂತಹ 'ಯುಗವಾಣಿ' ಎನ್ನುವ ಕವನ ಸಂಕಲನ, 'ನಾಡಾಡಿ' ಎನ್ನುವ ಕವನ ಸಂಕಲನ ಇಂಗ್ಲೀಷಿಗೆ 'ವಾಯ್ಸ್ ಆಫ್ ದಿ ಏಜ್' ಎನ್ನುವ ಹೆಸರಿನಲ್ಲಿ ಅನುವಾದವಾಗಿದೆ. ಲಂಡನ್‌ನಲ್ಲಿ ನಡೆದ ಮೊಟ್ಟ ಮೊದಲ ಕನ್ನಡ ವಿಶ್ವ ಸಮ್ಮೇಳನದ ಮೊದಲನೇ ದಿವಸವೇ ಅದು ಬಿಡುಗಡೆಯಾಯಿತು. ಡಾ.ತಮಿಳು ಸೆಲ್ವಿ ಎನ್ನುವವರು ಅದನ್ನು ಅನುವಾದ ಮಾಡಿದ್ದಾರೆ. ಮಲೆಯಾಳದಲ್ಲಿ "ಯುಗಶಬ್ದಂ" ಎಂದು ಅನುವಾದವಾಗಿದೆ. ಆ ದೃಷ್ಟಿಯಿಂದ ನನ್ನ ಕವಿತೆಗಳು ಮಲೆಯಾಳದಲ್ಲಿ ಪ್ರಖ್ಯಾತಿಯಾಗಿವೆ. ತೆಲುಗಿನಲ್ಲಿ ಕೂಡಾ ಅನುವಾದವಾಗಿದೆ, ಒಬ್ಬ ಚಿತ್ರಗೀತೆಯ ರಚನೆಕಾರನನ್ನಾಗಿಯೇ ಜನ ಹಾಗೂ ವಿಮರ್ಶಕರು ನನ್ನನ್ನು ನೋಡಿದ್ದರಿಂದ ನನ್ನನ್ನು ಒಬ್ಬ ಗಂಭೀರವಾಗಿರತಕ್ಕಂತಹ ವೈಚಾರಿಕ ಕವಿಯಾಗಿ ಗಮನಿಸಲಿಲ್ಲ ಅಂತ ಅನ್ನಿಸುತ್ತೆ. ಇಲ್ಲಿಯ ಜನಪ್ರಿಯತೆ ಆ ಕಡೆಗೆ ವಿಮರ್ಶಕರು ನನ್ನನ್ನು ಗುರುತಿಸಲಿಕ್ಕೆ ಸಾಧ್ಯವಾಗಲಿಲ್ಲ, ಈಗಲೂ ಕೂಡಾ ಆ ಕಾರ್ಯ ಮಾಡಬಹುದು.



**ವಸಂತ ಶೆಟ್ಟಿ ಬೆಳ್ಳಾರೆ** : ಇಂದಿನ ಕನ್ನಡದ ಬರಹಗಾರರಿಗೆ ನಿಮ್ಮ ಕಿವಿ ಮಾತು ಏನು?

**ದೊಡ್ಡರಂಗೇಗೌಡ :** ನಾನು ಗುರುತಿಸಿದ ಹಾಗೆ ಇವತ್ತಿನವರು ಓದುವುದು ಕಡಿಮೆ, ಕೇವಲ 10–15 ಪದಗಳಲ್ಲಿಯೇ ಎಲ್ಲವನ್ನೂ ಗುಡಗಾಡಿಸುತ್ತಾರೆ, ಹೆಚ್ಚು ಹೆಚ್ಚು ಓದಬೇಕು, ಅವರ ಪದಕೋಶ ಬೆಳೆಯುವುದೇ ಓದುವಿಕೆಯಿಂದ. ಪಂಪ, ಕುಮಾರ ವ್ಯಾಸ, ವಚನಕಾರರನ್ನು ಇವರುಗಳನ್ನು ಚೆನ್ನಾಗಿ ಓದಿಕೊಳ್ಳಬೇಕು. ಜಾನಪದವನ್ನು ಚೆನ್ನಾಗಿ ಓದಿಕೊಳ್ಳಬೇಕು. ಕೀರ್ತನಕಾರರನ್ನು ಓದಿಕೊಳ್ಳಬೇಕು, ಮುದ್ದಣ್ಣನಂತಹ ಸೂಕ್ಷ್ಮ ಕವಿಯನ್ನು ಚೆನ್ನಾಗಿ ಓದಿಕೊಳ್ಳಬೇಕು. ರತ್ನಾಕರವರ್ಣಿಯಂತಹ ತಾಳ್ಮೆ ಕವಿಯನ್ನು ಓದಿಕೊಳ್ಳಬೇಕು. ಹಾಗಾಗಿ ಇವತ್ತಿನ ಬರಹಗಾರರು ಸರಿಯಾಗಿ ಓದುತ್ತಾ ಇಲ್ಲ ಅಂತ ಅನ್ನಿಸುತ್ತೆ ನನಗೆ. ನಮ್ಮ ಕುವೆಂಪು, ಬೇಂದ್ರೆ, ಶ್ರೀಕಂಠಯ್ಯನವರ ಸಾಹಿತ್ಯಗಳನ್ನು ಓದಿದರೇ ನಮ್ಮ ಪದ ಕೋಶ ಹಿಗ್ಗಳಿಸುತ್ತದೆ, ವ್ಯಾಪಕವಾಗುತ್ತದೆ. ಮೊದಲು ಒಬ್ಬ ಬರಹಗಾರನಿಗೆ ಅವನ ನೈಪುಣ್ಯ ಎಲ್ಲಿದೆ ಅಂದರೆ ಗ್ರಹಿಕೆಯಲ್ಲೂ ಅದರ ಹಿಂದೆ ಕಲಿಕೆ ಇರಬೇಕು. ಇವುಗಳಿದ್ದರೆ ಅವನ ಅಭಿವ್ಯಕ್ತಿ ಚೆನ್ನಾಗಿ ಆಗುತ್ತೆ. ಇವತ್ತು ಅಸಮರ್ಪಕ ಅಭಿವ್ಯಕ್ತಿಗಳು ಏಕೆ ಆಗುತ್ತಾರೆ ಎಂದರೆ, ಅವರಿಗೆ ಸರಿಯಾದಂತಹ ರೀತಿಯಲ್ಲಿ ವ್ಯುತ್ಪತ್ತಿ ಇರುವುದಿಲ್ಲ, ನಮ್ಮ ಭಾರತೀಯ ಮೀಮಾಂಸೆಯಲ್ಲಿ ವ್ಯುತ್ಪತ್ತಿ ಎನ್ನುತ್ತೇವೆ. ವ್ಯುತ್ಪತ್ತಿ ಎಂದರೆ ಪೂರ್ವ ಕವಿಗಳ ಕಾವ್ಯಗಳ ಅಧ್ಯಯನ. ಅದನ್ನು ಸರಿಯಾಗಿ ಮಾಡಿದರೆ, ಅವರು ಸರಿಯಾದ ರೀತಿಯಲ್ಲಿ ಅಭಿವ್ಯಕ್ತ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನನ್ನ ದೃಷ್ಟಿಯಲ್ಲಿ ಬದುಕು ಚೆನ್ನಾಗಿ ಆಗಬೇಕು, ಬದುಕು ಬಹಳ ದೊಡ್ಡದು, ಡಾ. ಕೆ. ಶಿವರಾಮ ಕಾರಂತರವರು ಹೇಳುವುದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ನಿಮ್ಮ ಬದುಕು ದೊಡ್ಡದಾಗದೇ, ನಿಮ್ಮ ಬರಹ ದೊಡ್ಡದಾಗುವುದಿಲ್ಲ, ಬದುಕು ದೊಡ್ಡದಾಗುವುದೆಂದರೆ ಅದರಲ್ಲಿ ಸ್ನೇಹ ಇದೆ, ಪ್ರೀತಿ ಇದೆ, ವಿಶ್ವಾಸ ಇದೆ, ಮಾನವೀಯತೆ ಇದೆ, ಕರುಣೆ ಇದೆ, ಸಮಾಜವನ್ನು ಇತ್ಯಾತ್ಮಕವಾಗಿ ನೋಡಬೇಕಾಗಿದ್ದು ಇದೆ, ಮಾಲ್ಯಗಳಿವೆ, ಮೌಲ್ಯಗಳ ಅಧಃಪಾತಾಳವಾಗಿರುವಂತಹ ಇಂತಹ ಸಂದರ್ಭದಲ್ಲಿ ನಾವು ಮೌಲ್ಯಗಳನ್ನು ಒಬ್ಬ ಲೇಖಕನಾಗಿ ಪ್ರತಿಷ್ಠಾಪನೆ ಮಾಡಬೇಕು. ಅದರ ಪುನರುಜ್ಜೀವನಕ್ಕೆ ಬರಹಗಾರ ಕಾರಣವಾಗಬೇಕು. ಒಬ್ಬ ಕವಿಯ ಮುಖ್ಯ ಉದ್ದೇಶ ಎಂದರೆ ಅಭಿರುಚಿಯನ್ನು ನಿರ್ಮಾಣ ಮಾಡುವುದು, ಆಮೇಲೆ ಅವನು ತನ್ನ ಕೃತಿಗಳಲ್ಲಿ ಅಭಿರುಚಿಯನ್ನ ಅಭಿವ್ಯಕ್ತ ಮಾಡಬೇಕು, ಪಾತಾಳದಾಳದಲ್ಲಿದ್ದರೂ ಕೂಡಾ ಒಬ್ಬ ಓದುಗನನ್ನು ಮೇಲಕ್ಕೆ ತರಬೇಕು. ಅವನಿಗೆ ಸಂಸ್ಕಾರ ಕೊಡಬೇಕು. ಹಿಂದಿನವರು ಹೆಚ್ಚು ಹೆಚ್ಚು ಓದುತ್ತಾ ಇದ್ದರು. ಅದರಿಂದ ಸಂಸ್ಕಾರಭರಿತರಾಗುತ್ತೇವೆ. ಹರಿಕಥೆಗಳನ್ನು ಕೇಳುವದರಿಂದ ನಾಟಕಗಳನ್ನು ನೋಡುವುದರಿಂದ, ಇತ್ಯಾದಿ ಇತ್ಯಾದಿಯಾಗಿ. ಇವತ್ತಿನ ಯುವ ಕವಿಗಳು ಆ ದಿಶೆಯಲ್ಲಿ ಸ್ವಲ್ಪ ನಮ್ಮ ಪೂರ್ವ ಪರಂಪರೆಯನ್ನು ಅರ್ಥಮಾಡಿಕೊಂಡು ಬಿಟ್ಟರೆ ಚೆನ್ನಾಗಿರುತ್ತದೆ. ಎಷ್ಟೋ ಜನ, ಪತ್ರಕರ್ತರನ್ನು ನೋಡಿದ್ದೇನೆ. ಆ ಫೋಟೋದಲ್ಲಿರುವ ಚಿತ್ರಗಳೇ ಬೇರೆ, ಕೆಳಗಡೆ ಅವರು ಹೆಸರುಗಳನ್ನು ಬರೆಯುವಾಗ ತಪ್ಪು ತಪ್ಪು ಹೆಸರುಗಳನ್ನು ಬರೆದಿರುತ್ತಾರೆ, ಅರ್ಥ ಏನೆಂದರೆ ಅವರಿಗೆ ಗೊತ್ತೇ ಇರುವುದಿಲ್ಲ. ಬರೆಯುವಾಗ ಸರಿಯಾಗಿ ತಿಳಿದುಕೊಂಡು ಬರೆದರೆ ಅದು ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ. ಕನ್ನಡಿಗರು ಬಹಳ ಹೆಮ್ಮೆಪಟ್ಟುಕೊಳ್ಳಬೇಕು, ಪ್ರಾಚೀನ ಈಜಿಪ್ಟಿನಲ್ಲಿ ರಹಟೋಪ್ ಎನ್ನುವ ಒಂದು ಜಾಗವಿದೆ, ಅಲ್ಲಿ ಕನ್ನಡದ ಅಕ್ಷರಗಳಿವೆ, ಊರಲ್ಲಿ ಎನ್ನುವ ಕನ್ನಡ ಪದವನ್ನು ನಾನು ಮತ್ತು ನನ್ನ ಬಾಳಸಂಗಾತಿ ಕೆ. ರಾಜೇಶ್ವರಿ ಗೌಡ ಸಂಶೋಧನೆ ಮುಖಾಂತರವಾಗಿ ಕಂಡು ಹಿಡಿದಿದ್ದೇವೆ. ನಮಗೆ ರಾಷ್ಟ್ರಕವಿ ಡಾ.ಮಂಜೇಶ್ವರದ ಗೋವಿಂದ ಪೈ ಅವರ 28–29 ಪುಟದ ಲೇಖನ ನಮಗೆ ಪ್ರೇರಣೆ. ಗ್ರೀಕ್ ನಾಟಕಗಳಲ್ಲಿ ಆರು ಕನ್ನಡದ ಪದಗಳಿವೆ ಎಂದು ಅವರು ಹೇಳಿದರು. ಅಲ್ಲಿ ಸುತ್ತಮುತ್ತ ಕನ್ನಡ ಇದ್ದಿರಬೇಕು ಅಥವಾ ಕನ್ನಡದ ಪಳೆಯುಳಿಕೆಗಳು ಇರಬೇಕು ಎನ್ನುವುದನ್ನು ಉಪಯೋಗಿಸಿಕೊಂಡು ನಾವು ಹೋದೆವು. 11 ದಿವಸ ನಾವು ಸಂಚಾರ ಮಾಡಿ 42 ಡಿಗ್ರಿ ಬಿಸಿಲಿನ ಆ ತಾಪದಲ್ಲಿ ಕೂಡ ಕಂಡು ಹಿಡಿಯಲು ಸಾಧ್ಯವಾಯಿತು. ಹರಗಢ ಎನ್ನುವ ಒಂದು ಊರು ಇದೆ, ಹರ ಪದ ಕನ್ನಡ ಗಢ ಪದ ಕನ್ನಡ. ಹಾಗಾಗಿ ಎರಡೂ ಕೂಡಾ ಅಚ್ಚ ಕನ್ನಡದ ಪದಗಳು ಆದ್ದರಿಂದ ನಮ್ಮ ಕನ್ನಡಿಗರ ಮೂಲ ಬೇರು ಎಲ್ಲೆಲ್ಲಿಯೋ ಇದೆ, ಅದನ್ನು ಹುಡುಕುವಂತಹ ಪ್ರಯತ್ನ ಆಗಬೇಕು. ನಮಗೊಂದು ಪ್ರಾಚೀನ ಪರಂಪರೆ ಇದೆ ಅನ್ನುವುದಕ್ಕೆ ನಾನು ಈ ಮಾತುಗಳನ್ನು ಹೇಳಿದೆ. ಅ

# ಶ್ರದ್ಧಾಂಜಲಿ



## ಸಂಘದ ಹಿರಿಯ ಸದಸ್ಯ ಎಂ.ಎಸ್. ಸಾಂತೂರ್ ನಿಧನ

ದೆಹಲಿ ಕರ್ನಾಟಕ ಸಂಘದ ಹಳೆಯ ತಲೆಮಾರಿನ ಹಿರಿಯರಾದ ಶ್ರೀ ಎಂ.ಎಸ್. ಸಾಂತೂರು ಅವರು ಇದೇ ಏಪ್ರಿಲ್ 6ರಂದು ದೆಹಲಿಯ ದ್ವಾರಕಾದಲ್ಲಿರುವ ತಮ್ಮ ಮನೆಯಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಒಬ್ಬಳು ಮಗಳು, ಇಬ್ಬರು ಗಂಡು ಮಕ್ಕಳನ್ನು ಅಗಲಿದ್ದಾರೆ. ಉಡುಪಿ ಜಿಲ್ಲೆಯ ಎಲ್ಲೂರಿನ ಬಳಿ ಸಾಂತೂರಿನವರಾದ ಅವರು ದೆಹಲಿಯಲ್ಲಿ 1968ರಿಂದ ವಾಸವಾಗಿದ್ದರು. ಡಿಜಿಎಸ್ಎಂಡ್‌ಡಿಯಲ್ಲಿ ಸಹಾಯಕ ನಿರ್ದೇಶಕರಾಗಿ ವೃತ್ತಿ ಜೀವನದಿಂದ ನಿವೃತ್ತರಾದ ನಂತರ ಅವರು ಪೂರ್ಣಾವಧಿಯಲ್ಲಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು. ದೆಹಲಿ ಕರ್ನಾಟಕ ಸಂಘದ ಹೊಸ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣಕ್ಕಿಂತ ಮೊದಲು ಇದ್ದ ಕಟ್ಟಡದ ನೆಲಮಾಳಿಗೆಯಲ್ಲಿದ್ದ ಸಂಘದ ಗ್ರಂಥಾಲಯದ ಪುಸ್ತಕಗಳನ್ನು ವಿಷಯಾನುಕ್ರಮವಾಗಿ ಜೋಡಿಸುವುದು, ಉತ್ತಮ ಪುಸ್ತಕಗಳ ಖರೀದಿ ಮತ್ತು ಅಮೂಲ್ಯ ಪುಸ್ತಕಗಳನ್ನು ಗ್ರಂಥಾಲಯದಲ್ಲಿ ಮಾತ್ರವೇ ಪರಾಮರ್ಶನ ಮಾಡುವಂಥ ಕ್ರಮಗಳನ್ನು ಅವರು ಗ್ರಂಥಾಲಯದಲ್ಲಿ ಅಳವಡಿಸಿ ದೆಹಲಿಯ ಬಹಳಷ್ಟು ಕನ್ನಡ ಓದುಗರ ಸ್ನೇಹಿತರಾಗಿದ್ದರು. ಅವರು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರೀ ಸಮಿತಿಯ ಸದಸ್ಯರಾಗಿ 1990ರಿಂದ 1994ರ ತನಕ ಸೇವೆ ಸಲ್ಲಿಸಿದ್ದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿಯಲ್ಲಿಯೂ ಸದಸ್ಯರಾಗಿದ್ದರು. ಅಲ್ಲದೇ ದೆಹಲಿಯಲ್ಲಿ ಬಿಲ್ಲವ ಸಮಾಜ ಬಾಂಧವರ ಸಂಘಟನೆಯಲ್ಲಿಯೂ ಅವರು ತೊಡಗಿಸಿಕೊಂಡಿದ್ದರು. ಮಾಜಿ ಅಧ್ಯಕ್ಷ ದಿ. ಕೆ.ಆರ್. ನಾಗರಾಜ್ ಅವರ ಒಡನಾಡಿಯಾಗಿದ್ದು ಸಂಘವು ಖಾಸಗಿ ಟ್ರಸ್ಟ್ ಆಗುವುದನ್ನು ಅವರು ವಿರೋಧಿಸಿ ಹೋರಾಟ ನಡೆಸಿದ್ದರು. ದೆಹಲಿ ಕರ್ನಾಟಕ ಸಂಘದ ಅಭಿವೃದ್ಧಿಗೆ ಅಮೋಘ ಸೇವೆಯನ್ನು ಅವರು ಸಲ್ಲಿಸಿದ್ದಾರೆ. ಅಭಿಮತ ಪತ್ರಿಕೆಗೂ ಅವರು ತಮ್ಮ ಕೊಡುಗೆಯನ್ನು ನೀಡಿದ್ದರು. ಸಂಘದ ಹಿರಿಯ ಸದಸ್ಯರನೇಕರು ಅವರ ನಿಧನವಾರ್ತೆಯನ್ನು ತಿಳಿದು ಶೋಕ ವ್ಯಕ್ತ ಪಡಿಸಿದ್ದಾರೆ.



## ಸುನೀಲ್ ರಾವ್ ನಿಧನ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಪಲಿಮಾರ್ ಎಸ್. ಸುನಿಲ್ ರಾವ್ ಅವರು 2017ರ ಏಪ್ರಿಲ್ 27ರಂದು ದೆಹಲಿಯಲ್ಲಿ ನಿಧನ ಹೊಂದಿದರು. ಸುಮಾರು 35 ವರ್ಷಗಳಿಂದ ದೆಹಲಿಯಲ್ಲಿ ನೆಲೆಸಿರುವ ಅವರು ಕಳೆದ 15 ವರ್ಷಗಳಿಂದ ಪಿ.ಎಸ್.ಆರ್. ಕಂಪ್ಯೂಟರ್ ಸಂಸ್ಥೆಯ ಮಾಲೀಕರಾಗಿದ್ದರು. ಕ್ರೀಡಾ ಚಟುವಟಿಕೆಗಳು ಸೇರಿದಂತೆ ಅವರು ಸಂಘದ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು.

## ಓಂಪ್ರಕಾಶ್ ಆರ್. ಸ್ವಾಮಿ ನಿಧನ



ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಓಂಪ್ರಕಾಶ್ ಆರ್. ಸ್ವಾಮಿ ಅವರು 2017ರ ಮಾರ್ಚ್ 13ರಂದು ನಿಧನ ಹೊಂದಿದರು. ಗಡ್‌ವಾಲ್ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದ ಇವರು ನವದೆಹಲಿಯ ಜೆ.ಎನ್.ಯು. ವಿಶ್ವವಿದ್ಯಾಲಯದಲ್ಲಿ ತಾಂತ್ರಿಕ ಸಹಾಯಕರಾಗಿ ನಿವೃತ್ತರಾಗಿದ್ದರು. ಇವರು ಮಡದಿ, ಒಬ್ಬಳು ಮಗಳು ಹಾಗೂ ವಯೋವೃದ್ಧರಾದ ತಂದೆಯವರನ್ನು ಬಿಟ್ಟು ಅಗಲಿದ್ದಾರೆ.


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
May-2017, Vol. No.27, Issue No.8, Price Rs.1/- RNI Regn. No. 53405/91, DL-SW-1/4016/16-18
Printout Date : May 8th / 9th, Postal Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615
Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.




ಇದೇ ಏಪ್ರಿಲ್ ೩೦ರಂದು ನಡೆದ ಅಕ್ಕಮಹಾದೇವಿ ಮತ್ತು ಬಸವಣ್ಣ ಜಯಂತಿ ಕಾರ್ಯಕ್ರಮದಲ್ಲಿ ಬಸವ ಸಮಿತಿ ಬೆಂಗಳೂರಿನ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರ ನೇತೃತ್ವದಲ್ಲಿ ಮಹತ್ತರವಾದ ಬಹುಭಾಷಾ ವಚನ ಅನುವಾದ ಯೋಜನೆಯಡಿಯಲ್ಲಿ ಸಿದ್ಧಪಡಿಸಿರುವ 173 ಶರಣರ 2500 ವಚನಗಳನ್ನು 23 ಭಾಷೆಗಳಿಗೆ ಭಾಷಾಂತಾರಗೊಳಸಿದ್ದಕ್ಕಾಗಿ ಸಂಘದ ಪರವಾಗಿ ಶ್ರೀ ಅರವಿಂದ ಜತ್ತಿಯವರನ್ನು ಅಭಿನಂದಿಸಿ ಗೌರವಿಸುತ್ತಿರುವುದು



ಇದೇ ಏಪ್ರಿಲ್ ೩೦ರಂದು ನಡೆದ ಅಕ್ಕಮಹಾದೇವಿ ಮತ್ತು ಬಸವಣ್ಣ ಜಯಂತಿ ಕಾರ್ಯಕ್ರಮದಲ್ಲಿ ಸಂದರ್ಭದಲ್ಲಿ
ಹುಲ್‌ಕುಂತೇಮಠ ಶಿವಮೂರ್ತಿ ಶಿವಪ್ರಕಾಶ್ ಅವರಿಗೆ ಕುಸುಮಾಗ್ರಜ ರಾಷ್ಟ್ರೀಯ ಭಾಷಾ ಸಾಹಿತ್ಯ ಪುರಸ್ಕಾರ' ಲಭಿಸಿದ್ದಕ್ಕಾಗಿ
ಸಂಘದ ಪರವಾಗಿ ಅಭಿನಂದಿಸುತ್ತಿರುವುದು